ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ
ಜನವರಿ 2025
ಬೆಲೆ ರೂ. 20/-

SAPTHAGIRI (KANNADA)
SPIRITUAL ILLUSTRATED MONTHLY
Volume:04, Issue: 6 Pages:56
January - 2025, Price Rs. 20/-



10-01-2025
ವೈಕುಂಠ ಏಕಾದಶಿ

ವೇಂಕಟಾಚಲನಿಲಯಂ ವೈಕುಂಠಪುರವಾಸಂ ಪಂಕಜ
ನೇತ್ರಂ ಪರಮಪವಿತ್ರಂ ಶಂಖಚಕ್ರಧರ ಚಿನ್ಮಯರೂಪಂ



ತಿರುಚಾನೂರು, ಶ್ರೀಪದ್ಮಾವತಿ ಅಮ್ಮನವರಿಗೆ 28-11-2024 ರಿಂದ 06-12-2024 ರ ವರೆಗೆ ಕಾರ್ತೀಕ ಬ್ರಹ್ಮೋತ್ಸವಗಳು ವೈಭವವಾಗಿ ನಡೆಯಿತು. ಈ ಸಂದರ್ಭವಾಗಿ ಅಮ್ಮನವರಿಗೆ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ಆಂಧ್ರಪ್ರದೇಶದ ರಾಜ್ಯದ ದತ್ತಿ ಇಲಾಖೆಯ ಮಂತ್ರಿಗಳಾದ ಗೌ॥ ಶ್ರೀ ಎ. ರಾಮನಾರಾಯಣ ರೆಡ್ಡಿ ಯವರು ನೀಡಿದರು. ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಗೌ॥ ಶ್ರೀ ಬಿ.ಆರ್. ನಾಯುಡು ರವರು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್ ಐ.ಎ.ಎಸ್., ಮತ್ತು ತಿ.ತಿ.ದೇ., ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿಹೆಚ್. ವೆಂಕಯ್ಯ ಚೌದರಿ ಐ.ಆರ್.ಎಸ್., ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ, ಐ.ಎ.ಎಸ್., ಮತ್ತು ಶ್ರೀಮತಿ ಎಂ. ಗೌತಮಿ, ಐ.ಎ.ಎಸ್., ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.




















# ಭಗವದ್ಗೀತೆ



ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ।
ನ ಚೈನಂ ಕ್ಲೇದಯಂತ್ಯಾ ಪೋನ ಶೋಷಯತಿ ಮಾರುತಃ ॥

ಇವನನ್ನು ಆಯುಧಗಳು ತುಂಡರಿಸಲಾರವು. ಬೆಂಕಿ ಸುಡಲಾರದು. ನೀರು ನೆನೆಯಿಸಲಾರದು ಗಾಳಿ ಒಣಗಿಸಲೂ ಆರದು

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -23)



ಕನಸುಕಂಡನೆ ಮನದಲ್ಲಿ ಕಳವಳಗೊಂಡೆನೆ ।
ಏನು ಹೇಳಲಿ ತಂಗಿ ತಿಮ್ಮಯನ ಪಾದವನು ಕಂಡೆ ॥ಪ॥

ಪೊನ್ನದ ಕಡಗನಿಟ್ಟು ತಿಮ್ಮಯ್ಯ ತಾ ।
ಪೋಲ್ವ ನಾಮವ ಇಟ್ಟು ಅಂದುಗೆ ಘಲುಕೆನ್ನುತ॥
ಎನ್ನ ಮುಂದೆ ಬಂದು ನಿಂತಿದ್ದನಲ್ಲೆ॥1॥

ಮಕರಕುಂಡಲವಿಟ್ಟು ತಿಮ್ಮಯ್ಯ ತಾ ॥
ಕಸ್ತೂರಿ ತಿಲಕನಿಟ್ಟು । ಗೆಜ್ಜೆ ಘಲುಕೆನುತ॥
ಸ್ವಾಮಿ ತಾ ಬಂದು ನಿಂತಿದ್ದನಲ್ಲೆ ॥2॥

ಮುತ್ತಿನ ಪಲ್ಲಕ್ಕಿ ಯತಿಗಳು ।
ಹೊತ್ತು ನಿಂತಿದ್ದರಲ್ಲೆ ಛತ್ರ ಚಾಮರದಿಂದ॥
ರಂಗಯ್ಯನ ಉತ್ಸವ ಮೂರುತಿಯ ॥3॥

ತಾಮರ ಕಮಲದಲ್ಲಿ ಕೃಷ್ಣಯ್ಯ ತಾ ।
ಬಂದು ನಿಂತಿದ್ದನಲ್ಲೆ ವಾಯು ಬೊಮ್ಮಾದಿಗಳು
ರಂಗಯ್ಯನ ಸೇವೆಯ ಮಾಡುವರೆ ॥4॥

ನವರತ್ನ ಕೆತ್ತಿಸಿದ ಸ್ವಾಮಿ ಎನ್ನ ।
ಹೃದಯ ಮಂಟಪದಲ್ಲಿ ಸರ್ವಾಭರಣದಿಂದ
ಪುರಂದರವಿಟ್ಠಲನ ಕೂಡಿದೇನೆ ॥5॥

ಶ್ರೀ ಪುರಂದರ ದಾಸರು

# ದಯಾ ಶತಕಮ್



**ಜಹ್ಯಾದ್ವೃಷಾಚಲಪತಿಃ ಪ್ರತಿಘೇಽಪಿ ನ ತ್ವಾಂ ಘರ್ಮೋಪತಪ್ತ ಇವ ಶೀತಳತಾಮುದನ್ವಾನ್ ।**

**ಸಾ ಮಾಮರುಂತುದ ಭರನ್ಯಸ ನಾನು ವೃತ್ತಿಃ ತ್ವದ್ವೀಕ್ಷಣೈಃ ಸ್ಪೃಶ ದಯೇ ತವ ಕೇಳಿಪದ್ಮೈ ॥98॥**

ಹಿಂದಿನ ಪದ್ಯದಲ್ಲಿ ತಾಯಿಯು ಮಗುವನ್ನು ಹೇಗೋ ಹಾಗೆ ಲೋಕಮಾತೆಯು ತನ್ನ ಅಪರಾಧಗಳನ್ನು ನುಂಗಿಕೊಂಡು ತನ್ನ ಉದ್ಧಾರ ಮಾಡಬೇಕೆಂದು ಆಚಾರ್ಯರು ಪ್ರಾರ್ಥಿಸಿದರು. ಅದೇ ವಿಚಾರವನ್ನು ಬೇರೊಂದು ರೀತಿಯಿಂದ ಹೇಳುತ್ತ ಅವರು ಈ ಪದ್ಯದಲ್ಲಿ ತನ್ನನ್ನು ಉದ್ಧರಿಸುವ ಭಾರವನ್ನು ತಾನೇ ವಹಿಸಿಕೊಳ್ಳಬೇಕೆಂದು ಮತ್ತೊಮ್ಮೆ ಪ್ರಾರ್ಥಿಸುತ್ತಾರೆ.

ನೀರಿನ ಸಹಜ ಸ್ವಭಾವ ಶೀತಲವಾಗಿರುವುದು ಸಮುದ್ರವು ನೀರಿಗೆ ಆಕರವಾದದ್ದು. ಬಿಸಿಲಿನ ತಾಪದಿಂದ ಕಾದು ಆವಿಯಾಗಿ ಪ್ರತಿದಿನವೂ ಎಷ್ಟೊ ನೀರು ಮೇಲೆ ಹೋಗಿ ಆಕಾಶದಲ್ಲಿ ಶೇಖರವಾಗುತ್ತದೆ. ಆದರೂ ಸಮುದ್ರದಲ್ಲಿ ನೀರು ಕಡಿಮೆಯಾಗುವುದು ಕಣ್ಣಿಗೆ ಗೋಚರವಾಗುವುದಿಲ್ಲ, ಏಕೆಂದರೆ ಆವಿಯಾಗಿ ಮೇಲೆ ಹೋದ ನೀರು ಮತ್ತೆ ನದಿಗಳ ಮೂಲಕ ಸಮುದ್ರದೊಳಕ್ಕೆ ಹರಿದುಬರುತ್ತದೆ. ಹೀಗೆ ಬಿಸಿಲಿನ ಶಾಖದಿಂದ ಕಾಯ್ದು ಆವಿಯಾಗಿ ಹೋಗುವ ನೀರು ಮತ್ತೆ ಹರಿದು ಬಂದು ಸೇರುವ ನೀರಿನಿಂದ ತುಂಬಿಕೊಳ್ಳುತ್ತದೆ. ಈ ರೀತಿ ಸದಾ ಕಾದ ನೀರಿನ ಆವಿ ಮೇಲೇರಿ ಹೋಗುತ್ತಿದ್ದರೂ ಸದಾ ಹರಿದು ಬರುತ್ತಿರುವ ಶೀತಳವಾದ ನೀರಿನಿಂದಲೂ ಆವಿಯಾಗಿ ಹೋಗುವುದಕ್ಕಿಂತ ಇರುವ ನೀರು ಹೇರಳವಾಗಿರುವುದರಿಂದಲೂ ಸಮುದ್ರದ ನೀರು ಇರುವಷ್ಟೇ ಇರುತ್ತದಲ್ಲದೇ ತಂಪಾಗಿರುತ್ತದೆ. ಇದನ್ನೇ ಆಚಾರ್ಯರು ಸಮುದ್ರವು ದಿನವೂ ಬಿಸಿಲಿನ ತಾಪದಿಂದ ಕಾಯುತ್ತಿದ್ದರೂ ಶೀತಲತೆಯನ್ನು ಬಿಡುವುದಿಲ್ಲವೆಂದು ವರ್ಣಿಸಿದ್ದಾರೆ. ಇದು ಸಮುದ್ರದ ಸಹಜ ಸ್ವಭಾವ. ಹಾಗೆಯೇ ಲೋಕೇಶ್ವರನಾದ ಭಗವಂತನೂ ಕೂಡ ತನ್ನ ರಸಿಯಾದ ಲೋಕಮಾತೆಯಾದ ದಯಾದೇವಿಯನ್ನು ಬಿಟ್ಟಿರುವುದೇ ಇಲ್ಲ. ಇದು ಭಗವಂತನ ಸಹಜ ಸ್ವಭಾವ. ತಿರುವೇಂಗಡಮಲೆಯರಸನಾದ ಶ್ರೀನಿವಾಸನು ಜಗನ್ಮಾತೆಯನ್ನು ತನ್ನ ವಕ್ಷಃಸ್ಥಳದಲ್ಲಿಯೇ ಸದಾ ಧರಿಸಿಕೊಂಡಿರುವನಲ್ಲವೇ? ತಾನು ಕೋಪಿಸಿಕೊಂಡಿರುವಾಗಲೂ ಕೂಡ ದಯಾದೇವಿಯನ್ನು ಬಿಟ್ಟಿರುವುದಿಲ್ಲ. ಅಂದರೆ ಭಗವಂತನು ಕೋಪಭರಿತನಾಗಿ ದಂಡನೆಗೆ ಗುರಿಮಾಡಿದರೂ ದಯೆಯಿಂದ ಕೂಡಿರುವನೆಂದು ಭಾವವು. ಭಗವಂತನು ನಮ್ಮ ವಿಚಾರವಾಗಿ ಪ್ರಸನ್ನನಾಗಿರುವಾಗಲಂತೂ ನಮಗೆ ಒಳ್ಳೆಯದಾಗುವುದರಲ್ಲಿ ಸಂದೇಹವೇನಿಲ್ಲ. ಅವನು ನಮ್ಮ ಮೇಲೆ ಕೋಪಿಸಿಕೊಳ್ಳಬೇಕಾದ ಪ್ರಸಂಗವೂ ಉಂಟು. ಹಾಗೆ ಕೋಪಿಸಿಕೊಂಡು ದಂಡಿಸಿದರೂ ಸಹ ಅದೂ ನಮ್ಮ ಒಳ್ಳೆಯದಕ್ಕೆ ಎಂಬುದು ಅನುಭವಿಗಳ ನೀತಿಯ ಮಾತು. ಆದ್ದರಿಂದ ಭಗವಂತನು ಚೇತನರ ವಿಚಾರವಾಗಿ ಪ್ರಸನ್ನನಾಗಿರಲಿ ಕೋಪ ಭರಿತನಾಗಿರಲಿ ಅವರ ವಿಚಾರವಾಗಿ ದಯಾಮಯನಾಗಿರುವನೆಂಬುದು ತಾತ್ವಿಕವಾದ ವಿಚಾರ ಭಗವಂತನು ಚೇತನರ ಉದ್ಧಾರ ಮಾಡಬೇಕಾದರೆ ದಂಡನೆಯ ರೂಪದಿಂದ ತಾನೇ! ಆದ್ದರಿಂದ ಭಗವಂತನು ಕೋಪಿಸಿಕೊಳ್ಳಬೇಕಾಗುತ್ತದೆ. ಹೀಗೆ ಕೋಪಿಸಿಕೊಳ್ಳಬೇಕಾದರೂ ದಯೆಯ ಪ್ರಭಾವಕ್ಕೊಳಗಾಗಿಯೇ ಎಂಬುದು ಸ್ಪಷ್ಟವಾದಂತಾಯಿತು. ಅದೂ ಅವನ ದಯೆಯ ಕಾರ್ಯವೇ ಎಂಬುದನ್ನು ಹಿಂದೆಯೇ ವರ್ಣಿಸಿದೆಯಲ್ಲವೇ!

ಹೀಗೆ ತನ್ನ ಕಟಾಕ್ಷದಿಂದ ವಿಲಾಸಗಳಿಂದ ಪ್ರಭಾವಿತನನ್ನಾಗಿ ಮಾಡಿ ಒಂದು ರೀತಿಯಲ್ಲಿ ಭಗವಂತನನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುವ ದಯಾದೇವಿಯು, ಭಗವಂತನು ಚೇತನರನ್ನು ಉದ್ಧರಿಸುವಂತೆ ಮಾಡುವಳೆಂಬುದು ತಿಳಿದ ವಿಷಯವೇ ಆಗಿದೆ ಇದು ಸದಾ ನಡೆಯುತ್ತಿರುವ ಕಾರ್ಯ ಆದ್ದರಿಂದಲೇ ಚೇತನರ ರಕ್ಷಣೆಯ ಭಾರವನ್ನು ತಾನೇ ವಹಿಸಿಕೊಳ್ಳುವುದು ಆಕೆಗೆ ಅಭ್ಯಾಸವಾಗಿರುವ ವಿಚಾರ. ಆದ್ದರಿಂದಲೇ ತನ್ನ ಲೀಲಾ ವಿಲಾಸರೂಪವಾದ ಪದ್ಮಲೋಚನಗಳ ಕಟಾಕ್ಷೆಗಳಿಂದ ನೋಡಿ, ಅನುಗ್ರಹಿತನನ್ನಾಗಿ ಮಾಡಿ, ತನ್ನನ್ನು ಉದ್ಧರಿಸಬೇಕೆಂದು ಆಚಾರ್ಯರು ಆಕೆಯನ್ನು ಪ್ರಾರ್ಥಿಸುತ್ತಾರೆ.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಕ್ರೋಧಿನಾಮ ಸಂವತ್ಸರ ಮಾರ್ಗಶಿರ-ಪುಷ್ಯ ಮಾಸ ಸಂಚಿಕೆ

ಸಂಪುಟ : 04 ಜನವರಿ - 2025 ಸಂಚಿಕೆ : 06



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ಸಂಕ್ರಾಂತಿಯ ಸುಗ್ಗಿ | - ಶ್ರೀಮತಿ ಭಾರ್ಗವಿ ಪಿ. | 07 |
| ಧನುರ್ಮಾಸ ಪುಣ್ಯ ಪೂರ್ಣಮಾಸ ಪರ್ವಪ್ರವರ ಪ್ರತಿಷ್ಠಿತ ಮಾಸ | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 11 |
| ಪುರಂದರೋಪನಿಷತ್ ಒಂದು ಸಮೀಕ್ಷೆ | - ಕೆ. ಭೀಮರಾವ್ | 13 |
| ಮಹಾನ್ ಪತಿವ್ರತೆ ಅನಸೂಯೆ | - ಹನುಮಂತ ಮ. ದೇಶಕುಲಕರ್ಣಿ | 15 |
| ಉಮ್ಮತ್ತೂರಿನ ಶ್ರೀ ರಂಗನಾಥ ಮತ್ತು ಸುಮುಖ ಆಂಜನೇಯ ದೇವಾಲಯ | - ಕೆಂಗೇರಿಚಕ್ರಪಾಣಿ | 16 |
| ಮಹಾತಪಸ್ವಿನಿ ವೃದ್ಧ ಕನ್ಯಾ | - ಡಾ॥ ವಾಣಿಶ್ರೀ ಬಿ. ಎಂ. | 18 |
| ತಿರು ಅರಿಮೇಯವಿಣ್ಣಗರಮ್ | -ಶ್ರೀಮತಿ ಸೂರ್ಯವಂಶಿ | 20 |
| ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ | - ದಿ॥ ಬಿ.ಎನ್. ಶ್ರೀನಿವಾಸನ್ | 24 |
| ರಂಗೋಲಿದಾಸರು ಶ್ರೀ ಗೋಪಾಲದಾಸರು | -ಶ್ರೀಧರ ರಾಯಸಂ | 31 |
| ದಾಸಸಾಹಿತ್ಯದಲ್ಲಿ ಜಲ ವಿಜ್ಞಾನ ತಂತ್ರಜ್ಞಾನಃ | -ಹರಿಹರ ಶ್ರೀನಿವಾಸರಾವ್ | 34 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 36 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್. ನರಸಿಂಹನ್ | 38 |
| ಶ್ರೀವೆಂಕಟಾಚಲ ಮಹಾತ್ಮ್ಯ | - ಶ್ರೀಮತಿ ಎನ್. ಪಾರ್ವತಿ | 40 |
| ಬನದ ಹುಣ್ಣಿಮೆ ಮಾಘಸ್ನಾನ | - ಶ್ರೀಮತಿ ಬಿ.ಎಸ್. ಪಾರಿಜಾತ | 42 |
| ದಾರಿ ಯಾವುದಯ್ಯ ವೈಕುಂಠಕ್ಕೆ | - ಪ್ರಣವ | 44 |
| ರಾಶಿಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ಸತ್ಯವೇ ನಮ್ಮನ್ನು ಸದಾ ಕಾಪಾಡುತ್ತದೆ | - ಎ.ಆರ್.ರಘುರಾಮ | 48 |
| ಚಿತ್ರಕಥೆ- ಸಂಕ್ರಾಂತಿ ಹಬ್ಬದ ಸಡಗರ | - ಕೆ.ವಿ. ಅಪ್ಪಲಾಚಾರ್ಯ | 52 |


ಮುಖಚಿತ್ರ - ಶ್ರೀ ವೆಂಕಟೇಶ್ವರ ಸ್ವಾಮಿಯವರು, ತಿರುಮಲೆ

ಹಿಂಬದಿಚಿತ್ರ - ಶ್ರೀ ಅಲಮೇಲುಮಂಗಮ್ಮ, ತಿರುಚಾನೂರು


**ಗೌರವ ಸಂಪಾದಕರು**

ಶ್ರೀ ಜೆ. ಶ್ಯಾಮಲ ರಾವ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**

ಡಾ॥ ಕೆ. ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.,
ಪಿ.ಜಿ. ಡಿಪ್ಲೊಮಾದಲ್ಲಿ ಎಪಿಗ್ರಫಿ, ಡಿಪ್ಲೊಮಾ ಇನ್ ಯೋಗ

**ಸಂಪಾದಕರು**

ಡಾ॥ ವಿ. ಜಿ. ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.,

**ಮುದ್ರಣ**

ಶ್ರೀ . ಪಿ. ರಾಮರಾಜು , ಎಮ್.ಎ.,
ವಿಶೇಷಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**

ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಗ್ರಹಣ**

ಶ್ರೀ ಪಿ.ಎನ್. ಶೇಖರ್,
ಪ್ರಧಾನ ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ. ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



**ಲೇಖನ / ಚಂದಾ ಮಿಕ್ಕ ವಿವರಗಳಿಗೆ**

ಪ್ರಧಾನ ಸಂಪಾದಕರು,
ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ., ಪ್ರೆಸ್,
2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507

**ಇತರ ವಿವರಗಳಿಗೆ**

ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.



ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ



| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿವಾರ್ಷಿಕಚಂದಾ | ರೂ. 1030/- |

## ಸಂಪಾದಕೀಯ

# ತಿರುಮಲೆಯಲ್ಲಿ ಧನುರ್ಮಾಸೋತ್ಸವಗಳು

ಬೇರೆಲ್ಲಾ ಋಷಿಗಳು ಒಂದು ತೂಕವಾದರೆ ಅಗಸ್ತ್ಯರೇ ಒಂದು ತೂಕ! ಎನ್ನುವಂತೆ ಬ್ರಹ್ಮಾಂಡಮಂಡಲದಲ್ಲಿನ ಕ್ಷೇತ್ರಗಳೆಲ್ಲಾ ಒಂದೆಡೆಯಾದರೆ ಸಪ್ತಗಿರೀಶನು ನೆಲೆಯಾಗಿರುವ ಈ ಶ್ರೀ ವೇಂಕಟಾಚಲಕ್ಷೇತ್ರವೇ ಒಂದು ತೂಕ! ಈ ಮಾತು ಅಕ್ಷರಶಃ ಸತ್ಯ! ಏಕೆಂದರೆ ವೇಂಕಟಾಚಲದಲ್ಲಿನ ಅಣುವಣುವಿನಲ್ಲೂ ಒಂದು ವಿಚಿತ್ರ, ಒಂದು ಅದ್ಭುತ ತುಂಬಿಕೊಂಡಿವೆ. ಈ ಪುಣ್ಯಕ್ಷೇತ್ರದಲ್ಲಿ ಶ್ರೀವೇಂಕಟೇಶ್ವರನಿಗೆ ನಡೆಯುವ ಉತ್ಸವಗಳು, ಮೆರವಣಿಗೆಗಳು, ನೈವೇದ್ಯ ಅತ್ಯಂತ ಪ್ರಾಧಾನ್ಯತೆಯನ್ನು ಪಡೆದುಕೊಂಡಿದೆ. ಹಾಗೇ ಆ ಪರ್ವತದಲ್ಲಿ ನೆಲೆಗೊಂಡಿರುವ ಇನ್ನೂ ಅನೇಕ ಪುಣ್ಯತೀರ್ಥಗಳು ತಮ್ಮದೇ ಆದ ಪ್ರತ್ಯೇಕತೆಯನ್ನು ಪಡೆದುಕೊಂಡಿದೆ. ಹೀಗೆ ಶ್ರೀನಿವಾಸನ ಸನ್ನಿಧಿಯಲ್ಲಿರುವ ಪ್ರತಿಯೊಂದು ತನ್ನದೇ ಆದ ಮಹಿಮೆಯನ್ನು ಪಡೆದಿವೆ. ಮುಖ್ಯವಾಗಿ ಪ್ರತಿವರ್ಷ ಡಿಸೆಂಬರ್ ತಿಂಗಳ 15 ರಿಂದ ಜನವರಿ 14 ರ ವರೆಗೂ ಒಂದು ತಿಂಗಳಕಾಲ ತಿರುಮಲೆಯಲ್ಲಿ ಆಚರಿಸುವ ಧನುರ್ಮಾಸೋತ್ಸವಗಳನ್ನು ಗಮನಿಸಿದರೆ ಸಾಕು, ಈ ಕ್ಷೇತ್ರದ ವಿಶೇಷತೆ ಎಷ್ಟೆಂದು ಆಳವಾಗಿ ಅರ್ಥವಾಗುತ್ತದೆ.

ಮಾರ್ಗಶಿರ - ಪುಷ್ಯಮಾಸಗಳಲ್ಲಿ ಬರುವ ಈ ಧನುರ್ಮಾಸದಲ್ಲಿ ಒಂದು ತಿಂಗಳಕಾಲ ಶ್ರೀನಿವಾಸನನ್ನು ಶ್ರೀಕೃಷ್ಣನಂತೆ, ವಕ್ಷಃ ಸ್ಥಳ ವ್ಯೂಹಲಕ್ಷ್ಮಿಯನ್ನು ಗೋದಾದೇವಿಯೆಂದು ಭಾವಿಸಿ, ರತ್ನಗಳನ್ನು ಹುದುಗಿಸಿದ ಬಂಗಾರದ ಗಿಣಿಯನ್ನು ಸ್ವಾಮಿಯ ವಕ್ಷಃಸ್ಥಳದಲ್ಲಿ ಅಲಂಕರಿಸುತ್ತಾರೆ. ರಾತ್ರಿಯ ವೇಳೆ ನಡೆಯುವ ಶಯನಸೇವೆಯಲ್ಲಿ ಭೋಗ ಶ್ರೀನಿವಾಸಮೂರ್ತಿಯ ಬದಲಾಗಿ ಬೆಣ್ಣೆಯನ್ನು ಕೈಯಲ್ಲಿ ಹಿಡಿದುಕೊಂಡಿರುವ ಗೋಪಾಲಕೃಷ್ಣನು ಪಾಲ್ಗೊಳ್ಳುತ್ತಾನೆ. ಇನ್ನು ಸುಪ್ರಭಾತಸೇವೆಯಲ್ಲಿ ಶ್ರೀವೇಂಕಟೇಶ್ವರ ಸುಪ್ರಭಾತ ಸ್ತೋತ್ರಕ್ಕೆ ಬದಲಾಗಿ ಶ್ರೀಗೋದಾದೇವಿ ರಚಿಸಿರುವ ತಿರುಪ್ಪಾವೈ ಪಾಶುರಗಳನ್ನು ಪಠಿಸುತ್ತಾರೆ. ನಂತರ ಶ್ರೀವೇಂಕಟೇಶ್ವರ ಸ್ವಾಮಿಯನ್ನು ಸಹಸ್ರನಾಮಗಳಿಂದ ತುಳಸಿಗೆ ಬದಲಾಗಿ ಬಿಲ್ವಪತ್ರೆಗಳೊಂದಿಗೆ ಅರ್ಚಿಸುತ್ತಾರೆ.

ಮುಖ್ಯವಾಗಿ ಧನುರ್ಮಾಸದಲ್ಲಿ ಹುಣ್ಣಿಮೆಗಿಂತ ಮೊದಲ ಬರುವ ವೈಕುಂಠ ಏಕಾದಶಿ ಮತ್ತು ಅದರ ಮಾರನೆಯ ದಿನವಾದ ಮುಕ್ಕೋಟಿ ದ್ವಾದಶಿಯ ಹಬ್ಬಗಳು ಅತ್ಯಂತ ಪ್ರಾಧಾನ್ಯತೆಯನ್ನು ಪಡೆದುಕೊಂಡಿವೆ. ವೈಕುಂಠ ಏಕಾದಶಿಯಂದು ಬೆಳಗಿನ ಝಾವದಿಂದ ಪ್ರಾರಂಭಿಸಿ ಹತ್ತು ದಿನಗಳ ಕಾಲ ಶ್ರೀನಿವಾಸನ ವೈಕುಂಠದ್ವಾರದರ್ಶನ ಮಾಡುವ ಸೌಭಾಗ್ಯ ವುಂಟಾಗುತ್ತದೆ. ಆ ದಿನ ಬೆಳಿಗ್ಗೆ ನಡೆಯುವ ಶ್ರೀ ಹರಿಯ ಸ್ವರ್ಣರಥೋತ್ಸವ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಆ ವೈಭವವನ್ನು ವರ್ಣಿಸಲು ಸಾಮಾನ್ಯರಾದ ಮಾನವರಾದ ನಮಗೆ ಸಾಧ್ಯವಿಲ್ಲ! ಮಾರನೆಯ ದಿನ ಮುಕ್ಕೋಟಿ ದ್ವಾದಶಿಯಂದು ಶ್ರೀಸ್ವಾಮಿ ಪುಷ್ಕರಿಣಿಯಲ್ಲಿ ತೀರ್ಥ ಮುಕ್ಕೋಟಿ ಉತ್ಸವ ನಡೆಯುತ್ತದೆ. ಆ ದಿನ ಸೂರ್ಯೋದಯಕ್ಕೆ ಮೊದಲೇ ಪುಷ್ಕರಿಣಿಯಲ್ಲಿ ಶ್ರೀ ಸ್ವಾಮಿಗೆ ಚಕ್ರಸ್ನಾನವನ್ನು ನೆರವೇರಿಸುತ್ತಾರೆ. ಆ ಸಮಯದಲ್ಲಿ ಬ್ರಹ್ಮಾಂಡದಲ್ಲಿನ ಸಮಸ್ತ ತೀರ್ಥಗಳೆಲ್ಲವೂ ಶ್ರೀಸ್ವಾಮಿ ಪುಷ್ಕರಿಣಿಯಲ್ಲಿ ಮುಳುಗುವ ಭಕ್ತರಿಂದಾಗಿ ತಮಗೆ ಅಂಟಿಕೊಂಡಿರುವ ಪಾಪಗಳೆಲ್ಲದರಿಂದ ಮುಕ್ತಿಯನ್ನು ಹೊಂದುತ್ತವೆಂದು ಪ್ರತೀತಿ! ಅಂತಹ ಪರಮ ಪವಿತ್ರವಾದ ಸ್ವಾಮಿಪುಷ್ಕರಿಣಿಯ ಸ್ನಾನ ಸರ್ವಪಾಪಹರವಾದುದು! ಸರ್ವಸಿದ್ಧಿ ಪ್ರದವೂ ಹೌದು!!

ವೈಕುಂಠಏಕಾದಶಿಯ ನಂತರ ಆರನೆಯ ದಿನದಂದು ತಿರುಮಲೆಯಲ್ಲಿ ನಡೆಯುವ ಮತ್ತೊಂದು ಮುಖ್ಯವಾದ ಉತ್ಸವ 'ಪ್ರಣಯಕಲಹೋತ್ಸವ' ದೇವದೇವನು ವ್ಯಾಹ್ಯಾಳಿಗಾಗಿ, ಬೇಟೆಗಾಗಿ ಹೋಗಿದ್ದ ಸ್ವಾಮಿಯು ಹಿಂದಿರುಗುವ ಸಮಯದಲ್ಲಿ ಸ್ವಾಮಿಯನ್ನು ಅಡ್ಡಹಾಕಿ ಎಲ್ಲೆಲ್ಲೆ ಹೋಗಿದ್ದೆ. ಯಾರು ಯಾರೊಂದಿಗೆ ತಿರುಗಾಡಿ ಬಂದೆ ಎಂದು ಶ್ರೀದೇವಿ ಭೂದೇವಿಯರು ಸ್ವಾಮಿಯೊಂದಿಗೆ ಪ್ರಣಯಕಲಹವನ್ನು ಮಾಡುತ್ತಾರೆ. ಈ ಉತ್ಸವ ಅತ್ಯಂತ ರಮಣೀಯವಾಗಿರುತ್ತದೆ, ಮತ್ತೊಂದು ವಿಶೇಷವೇನೆಂದರೆ ವೈಕುಂಠ ಏಕಾದಶಿಯ ದಿನದಿಂದ ಹತ್ತುದಿನಗಳ ಕಾಲ ಪ್ರಾರಂಭವಾಗಿ, ನಂತರ ಹದಿನೈದು ದಿನಗಳ ಕಾಲ ಪ್ರತಿದಿನವು ಸಾಯಂಸಂಧ್ಯೆಯಲ್ಲಿ ಶ್ರೀ ಹರಿಯ ಸನ್ನಿಧಿಯಲ್ಲಿ, ಶ್ರೀ ಜಿಯ್ಯಂಗಾರರ ಪಾಶುರಪಾರಾಯಣ, ಕಿವಿಗೆ ಇಂಪಾಗಿ ಸಾಗುವ ಒಂದು ಯಜ್ಞದಂತೆ ಭಾಸವಾಗುತ್ತದೆ. ಧನುರ್ಮಾಸದಲ್ಲಿ ಕೊನೆಯದಾಗಿ ಬರುವ ಮತ್ತೊಂದು ಮುಖ್ಯವಾದ ಹಬ್ಬವೆಂದರೆ ಅದು ಸಂಕ್ರಾಂತಿ. ಈ ಹಬ್ಬದ ಹಿಂದಿನ ದಿನ ಭೋಗಿ ಹಬ್ಬದಂದು ಶ್ರೀಹರಿಗೆ ಭೋಗಿತೇರು, ಸಂಕ್ರಾಂತಿಯ ಮರುದಿನ ಕನುಮಹಬ್ಬದಂದು ಬೆಳಿಗ್ಗೆ ಶ್ರೀ ಹರಿಯ ಸನ್ನಿಧಿಯಲ್ಲಿ ಶ್ರೀಗೋದಾಕಲ್ಯಾಣವನ್ನು ಅತ್ಯಂತ ವೈಭವದಿಂದ ನಿರ್ವಹಿಸುತ್ತಾರೆ.

ಕನುಮ ಹಬ್ಬದಂದು ಒಂದು ಪಲ್ಲಕಿಯಲ್ಲಿ ಶ್ರೀಕೃಷ್ಣನನ್ನು ಮೆರವಣಿಗೆ ಮಾಡುತ್ತಾ, ಮತ್ತೊಂದು ಪಲ್ಲಕಿಯಲ್ಲಿ ಪಂಚಾಯುಧಗಳನ್ನು ಧರಿಸಿದ ಶ್ರೀ ವೇಂಕಟೇಶ್ವರಸ್ವಾಮಿಯು ಭಕ್ತರ ಕೋಲಾಹಲದೊಂದಿಗೆ ಸಪ್ತಗಿರಿಯ ಸಾಣುವಿನಲ್ಲಿ ಬೇಟೆಗೆ ಹೊರಟು ವಿಜಯಯಾತ್ರೆಯನ್ನು ಮುಗಿಸಿಕೊಂಡು ಪುನಃ ಆಲಯಕ್ಕೆ ಬರುವ 'ಪಾರುವೇಟ ಉತ್ಸವ' ಭಕ್ತರ ಮನಸ್ಸನ್ನು ಆನಂದಾಮೃತಸಾಗರದಲ್ಲಿ ಈಜಾಡುವಂತಹಾ ವರ್ಣಿಸಲಸಾಧ್ಯವಾದ ಸಪ್ತಗಿರೀಶನ ಉತ್ಸವವಿದು. ಇಂತಹಾ ಅನೇಕ ಉತ್ಸವಗಳು ತಿರುಮಲೆಯಲ್ಲಿ ಹೇರಳವಾಗಿ ನಡೆಯುತ್ತವೆ.!! ಹೀಗೆ ಶ್ರೀ ವೇಂಕಟಾಚಲ ಕ್ಷೇತ್ರವು ಹಲವಾರು ರೀತಿಯಲ್ಲಿ ಪ್ರಾಶಸ್ತ್ಯವನ್ನು ಪಡೆದುಕೊಂಡಿದೆ.

**ಓಂ ನಮೋ ವೇಂಕಟೇಶಾಯ**
**ಗೋವಿಂದಾ! ಗೋವಿಂದಾ!! ಗೋವಿಂದಾ!!**



# ಸಂಕ್ರಾಂತಿಯ ಸುಗ್ಗಿ

-ಶ್ರೀಮತಿ. ಭಾರ್ಗವಿ ಪಿ.
99723 90338

ಹಬ್ಬ ಎಂದರೆ ಮನುಷ್ಯನಿಗೆ ಸಂತೋಷ, ನೆಮ್ಮದಿ, ಉಲ್ಲಾಸ, ಸಡಗರವನ್ನು ಸಂಪೂರ್ಣವಾಗಿ ನೀಡುವುದರ ಜೊತೆಗೆ ಎಲ್ಲರನ್ನು ಸಾಮೂಹಿಕವಾಗಿ ಒಂದು ಗೂಡಿಸುವ ಒಂದು ಪ್ರಕ್ರಿಯೆ. ಆದ್ದರಿಂದ ಹಬ್ಬಗಳಿಗೆ ವಿಶೇಷ ಹಾಗೂ ಉನ್ನತ ಸ್ಥಾನವಿದೆ.



ಒತ್ತಡದ ಜೀವನಕ್ಕೆ ವಿದಾಯ ಹೇಳಿ, ನಗು ಎಂಬ ಎರಡು ಅಕ್ಷರವನ್ನು ಕೈ ಹಿಡಿದು ಬದುಕನ್ನು ಸಾಗಿಸಬೇಕು ಎಂದು ನಮಗೆ ನೀತಿಯನ್ನು, ಧಾರ್ಮಿಕ ಹಿನ್ನೆಲೆಗಳನ್ನು ವಿಶೇಷಗಳನ್ನು, ಶ್ರೇಷ್ಠತೆಯನ್ನು ಅದರ ಪವಿತ್ರತೆಯನ್ನು ಮುಂಬರುವ ಪೀಳಿಗೆಗೆ ಕುತೂಹಲವನ್ನು ರೂಪಿಸುವ ಜೊತೆ ಜೊತೆಗೆ ಆಸಕ್ತಿಯನ್ನು ಹೆಚ್ಚಿಸುತ್ತದೆ. ಇದರ ಅಂಗವಾಗಿ ಹಿರಿಯರು, ಮಕ್ಕಳಿಗೆ ಹಬ್ಬದ ಪ್ರಾಮುಖ್ಯತೆಯ ಅರಿವು ಮೂಡಿಸಬೇಕು. ನಮ್ಮ ಸಂಸ್ಕೃತಿಯನ್ನು ಉತ್ತುಂಗಕ್ಕೆ ಕರೆದೊಯ್ಯುವ ನಿಟ್ಟಿನಲ್ಲಿ ಕೈ ಜೋಡಿಸಬೇಕು. ಹಾಗಾದರೆ, ಇಂದು ನಾವು ಸಂಕ್ರಾಂತಿ ಹಬ್ಬದ ಬಗ್ಗೆ ಕೆಲವು ಮಾಹಿತಿ, ಮಹತ್ವ ಹಾಗೂ ತತ್ವವನ್ನು ತಿಳಿಯೋಣ. ಬಂದೇ ಬಂದಿತು ಸಂಕ್ರಾಂತಿ ಹಬ್ಬ, ವರ್ಷದ ಮೊದಲ ಸುಗ್ಗಿ ಹಬ್ಬ. ಸಂಕ್ರಾಂತಿ ಹಬ್ಬವು ನಮ್ಮ ದೇಶದಲ್ಲಿ ಆಚರಿಸುವ ಅತಿ ದೊಡ್ಡ ಹಬ್ಬ ಎಂದರೆ ತಪ್ಪಾಗಲಾರದು. ಅದರಲ್ಲೂ, ದಕ್ಷಿಣ ಭಾರತದಲ್ಲಿರುವ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಹಾಗೂ ಮಹಾರಾಷ್ಟ್ರದಲ್ಲಿ ಅತಿ ವಿಜೃಂಭಣೆಯಿಂದ ಸಡಗರ, ಸಂಭ್ರಮವನ್ನೇ ಸೃಷ್ಟಿಸುವಂತ ಹಬ್ಬಯೆಂಬ ವಾಡಿಕೆ ಇದೆ. ಈ ಹಬ್ಬದ ಕೇಂದ್ರ ಬಿಂದು ಎಂದರೆ ಸೂರ್ಯದೇವನು. ಇವನು ಈ ಸೃಷ್ಟಿಯಲ್ಲಿ ಕಣ್ಣಿಗೆ ಕಾಣೊ ಭಗವಂತ ಎಂದೇ ಪರಿಗಣಿಸಿದ್ದಾರೆ, ಹಾಗಾಗಿ ಸೂರ್ಯದೇವನನ್ನು ಪ್ರಾರ್ಥಿಸುತ್ತಾರೆ ಹಾಗೂ ಪೂಜಿಸುತ್ತಾರೆ.

ಕರ್ನಾಟಕದಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಈ ಹಬ್ಬವನ್ನು **"ಸಂಕ್ರಾಂತಿ"** ಎಂದು ಹಾಗೂ ತಮಿಳುನಾಡಿನಲ್ಲಿ **"ಪೊಂಗಲ್"** ಎಂದು ಕರೆಯುತ್ತಾರೆ. ತೇನೆ ಕುಯ್ಯುವ ಸಂದರ್ಭದಲ್ಲಿ ಆಚರಿಸುವ ಹಬ್ಬವೇ ಈ ಸಂಕ್ರಾಂತಿ ಹಬ್ಬ.

ಈ ನಮ್ಮ ಪುಣ್ಯಭೂಮಿ ಭಾರತದಲ್ಲಿ ಮಾತ್ರವಲ್ಲ ದೇಶ, ವಿದೇಶಗಳಲ್ಲಿಯೂ ಸಹ ಇದರ ಸೊಗಡನ್ನು ಕಾಣಬಹುದು.

ಸಂಕ್ರಾಂತಿ ಹಬ್ಬವು ಮೂರು ದಿನದ ಹಬ್ಬ. ಮೊದಲನೆಯ ದಿನವನ್ನು **"ಭೋಗಿ ಹಬ್ಬ"**ಎರಡನೆಯ ದಿನವನ್ನು **"ಸೂರ್ಯನ ಹಬ್ಬ"** ಅಥವಾ **"ಸಂಕ್ರಾಂತಿ"** ಮತ್ತು ಮೂರನೆಯ ದಿನವನ್ನು **"ಮಾಟು ಪೊಂಗಲ್"** ಎಂದು ಕರೆಯುತ್ತಾರೆ.

ಭೋಗಿ ಹಬ್ಬವನ್ನು, ಭೋಗಿ ಉತ್ಸವ ಎಂಬ ಹೆಸರಿದೆ. ಹಳೆಯದನ್ನು ತ್ಯಜಿಸಿ, ಹೊಸದನ್ನು ಸ್ವಾಗತಿಸಿ, ಸುಖ ಸಮೃದ್ಧಿ ನೀಡು ಎಂದು ಕೋರಿಕೊಳ್ಳುವ ಪ್ರತೀತಿಯನ್ನು ಹೊತ್ತಿದೆ ಈ ಭೋಗಿ ಹಬ್ಬ.

ಈ ದಿನದಂದು ವರುಣದೇವನಾದ ಇಂದ್ರನನ್ನು ಪೂಜಿಸುವ ದಿನ. ಮುಂಬರುವ ಋತುಗಳಲ್ಲಿ ಮಳೆಯು ಸಮೃ





ದ್ಧಿಯಾಗಿ ಸುಗ್ಗಿಯಿಂದ ಆಶೀರ್ವದಿಸಲೆಂದು ಪ್ರೂಜಿಸುತ್ತಾರೆ. ಆದ್ದರಿಂದ ಇದನ್ನು **"ಇಂದ್ರನ್"** ಎಂದು ಕರೆಯುವ ವಾಡಿಕೆ ಕೂಡ ಇದೆ. ಈ ದಿನ ದಂದು ಮನೆಯಲ್ಲಿ ರುವ ಹಳೆಯ ಉಪ ಯೋಗಕ್ಕೆ ಬಾರದ ವಸ್ತು ಗಳನ್ನು ಸಗಣಿಯನ್ನು ಬೆರೆಸಿ, ಮರದ ಚಕ್ಕೆಗಳನ್ನು ಒಟ್ಟು ಗೂಡಿಸಿ ಬೆಂಕಿಯ ಸ್ಪರ್ಶ ನೀಡುತ್ತಾರೆ. ಈ ಪದ್ಧತಿಯನ್ನು **"ಭೋಗಿ ಮಂಟಲು"** ಎಂದು ಕರೆ ಯುವುದನ್ನು ಕಾಣಬಹುದು.

ಭೋಗಿ, ನಮ್ಮ ಭವಿಷ್ಯ ಕಾಲ ಹಾಗೂ ವರ್ತಮಾನ ಕಾಲಗಳಲ್ಲಿ, ಹೊಸ ಭರವಸೆ, ಆಕಾಂಕ್ಷೆಗಳನ್ನು ಹೊತ್ತು ತರಲಿ, ಎಲ್ಲರ ಭವಿಷ್ಯ ಸೂರ್ಯನಂತೆ ಪ್ರಜ್ವಲಿಸಲಿಯೆಂದು ಪ್ರಾರ್ಥಿಸುವ ಸುದಿನ. ತಮಿಳುನಾಡಿನಲ್ಲಿ ಭೋಗಿಹಬ್ಬ ವನ್ನು ಮಾರ್ಗಳ್ಳಿ (ಧನುರ್ಮಾಸ) ತಿಂಗಳಿನ ಕೊನೆಯ ದಿನ ಎಂದು ಪರಿಗಣಿಸಲಾಗಿದೆ. ಭೂದೇವಿಗೆ ಸಮೃದ್ಧವಾದ ಮಳೆ ಯನ್ನು ಆಶೀರ್ವದಿಸು ಎಂದು ರೈತರು ಪ್ರಾರ್ಥಿಸುತ್ತಾರೆ ಹಾಗೆ ತಮ್ಮ ಫಲವತ್ತಾದ ಬೆಳೆಗಳನ್ನು ಭಗವಂತನಿಗೆ ಅರ್ಪಿಸುತ್ತಾ ಪ್ರಾರ್ಥನೆ ಸಲ್ಲಿಸುತ್ತಾರೆ.

**'ದಕ್ಷಿಣಾಯನ'** ಹಾಗೂ ಧನುರ್ಮಾಸದ ಕೊನೆಯ ದಿನ, ಹಾಗೆ **"ಉತ್ತರಾಯಣ"**ವನ್ನು ಸ್ವಾಗತಿಸುವ ಸುದಿನ. ಮನದಲ್ಲಿ ರುವ ಕೆಟ್ಟಬುದ್ಧಿ, ದುರಾಲೋಚನೆಗೆ ವಿದಾಯ ಹೇಳುತ್ತಾ, ಸದ್ಗುಣ ಜೀವನವನ್ನು ಪ್ರತಿನಿಧಿಸುವಂತೆ ಕೋರಿಕೊಳ್ಳುವ ಅಮೃತಘಳಿಗೆ.

ಎರಡನೇ ದಿನವು ಸೂರ್ಯ ಹಬ್ಬ ಇದಕ್ಕೆ ಪೂರಕವಾಗಿ ಹೇಳುವುದಾದರೆ ಸೂರ್ಯದೇವನು ಧನುರಾಶಿಯಿಂದ ಮಕರ ರಾಶಿಗೆ ತನ್ನ ಪಥವನ್ನು ಬದಲಾಯಿಸುತ್ತಾನೆ, ಆದ್ದರಿಂದ **"ಮಕರಸಂಕ್ರಾಂತಿ"** ಎಂಬ ಹೆಸರು. ಆ ರವಿಯ ತೇಜಸ್ಸು, ಓಜಸ್ಸು, ಹೊಳಪು ಎಲ್ಲವನ್ನು ಕರುಣಿಸು ಎಂದು ಮನದಲ್ಲಿ ಭಕ್ತಿಭಾವದಿಂದ ಪ್ರಾರ್ಥಿ ಸುತ್ತಾರೆ. ಸಾಂಪ್ರದಾಯಿಕವಾಗಿ ಈ ದಿನದಂದು ಹೊಸದಾಗಿ ಬೆಳೆದ ದಾನ್ಯದಿಂದ **'ಪೊಂಗಲ್'** ಮಾಡುತ್ತಾರೆ. ಅದರಲ್ಲೂ ಸಿಹಿ ಪೊಂಗಲ್, ಖಾರಪೊಂಗಲ್ ಮಾಡುತ್ತಾರೆ ಇದು ತುಂಬಾ ವಿಶೇಷವಾದದ್ದು.

ಮಕರ ಸಂಕ್ರಾಂತಿಯ ನಂತರ ಹಗಲು ಹೆಚ್ಚಾಗಿರುತ್ತದೆ ಕಾರಣ, ಮನುಷ್ಯನಿಗೆ 365 ದಿನಗಳಿವೆ, ವರ್ಷಕ್ಕೆ ಹಾಗೆಯೇ ದೇವತೆಗಳಿಗೆ ಆರು ತಿಂಗಳು ರಾತ್ರಿ ಹಾಗೂ ಆರು ತಿಂಗಳು ಹಗಲು ಸೇರಿದರೆ ಒಂದು ದಿನ ಎಂದು ಕರೆಯುತ್ತಾರೆ. ಅಂದರೆ ಉತ್ತರಾಯಣ ಹಗಲು ಹಾಗೂ ದಕ್ಷಿಣಾಯನ ಇರುಳು ಎಂಬ ಅರ್ಥ ಸೂಚಿಸುತ್ತದೆ.

ಹಿಂದೂಧರ್ಮದ ಪದ್ಧತಿಯ ಪ್ರಕಾರ ಈ ಹಬ್ಬದಂದು ಎಳ್ಳು,ಬೆಲ್ಲ, ಹುರಿಗಡಲೆ, ಕೊಬ್ಬರಿ, ಕಡಲೆಕಾಯಿ ಬೀಜ ಎಲ್ಲ ವನ್ನು ಸಮಪ್ರಮಾಣದಲ್ಲಿ ಬೆರೆಸಿ, ಕಬ್ಬು, ಸಕ್ಕರೆ ಹಚ್ಚನ್ನು ತಂದು ಮಿತ್ರರಿಗೆ ಬೀರುತ್ತಾರೆ. ಕಾರಣ, ಎಲ್ಲರ ಜೀವನ ಸಿಹಿಯಾಗಿ ರಲಿ, ಸಂಬಂಧ ಗಟ್ಟಿಯಾಗಿರಲಿ ಎಂದು ಸಾರುವ ಹಬ್ಬ.

**"ಎಳ್ಳು, ಬೆಲ್ಲ ತಿಂದು ಒಳ್ಳೆಯದನ್ನು ಮಾತಾಡಿ"** ಎಂಬ ನುಡಿಗೆ ಅನುಗುಣವಾದ ಹಬ್ಬ ಎಂದರೆ ಸಂಕ್ರಾಂತಿ. ಈ ಎಳ್ಳು, ಬೆಲ್ಲವನ್ನು ಹಂಚುವುದಕ್ಕೆ ಕಾರಣ ಏನೆಂದರೆ, ನಾವು ದೈನಂದಿನ ದಿನದಲ್ಲಿ ಯಾರು ಯಾರಿಗೆ ಸಹ ಎಳ್ಳನ್ನು ಕೊಡು ವುದಾಗಲಿ ಅಥವಾ ಸ್ವೀಕರಿಸುವುದಾಗಲಿ ಇಲ್ಲ. ಆದರೆ ಈ ದಿನ ಮಾತ್ರ ಎಲ್ಲರೂ, ಎಲ್ಲರಿಗೂ ಎಳ್ಳು, ಬೆಲ್ಲದ ಮಿಶ್ರಣವನ್ನು ಕೊಟ್ಟು ಬಾಂಧವ್ಯದ ಋಣ ಭಾರವನ್ನು ಕಡಿಮೆ ಮಾಡಿಕೊಳ್ಳು ವಂತ ಸಮಯ. ಹಾಗೇ, ಬೆಲ್ಲದಂತೆ ನಿರಂತರವಾಗಿ ಸವಿ ಜೀವನಕ್ಕೆ ನಾಂದಿಯ ಸಂಕೇತ. ಇದರ ಪ್ರಕಾರ ಎಳ್ಳನ್ನು ಬೀರುವುದನ್ನು ಕಾಣಬಹುದು. ಅದರಲ್ಲೂ ಹೆಣ್ಣು ಮಕ್ಕಳು, ಹೊಸ ಉಡುಪು ತೊಟ್ಟು, ತಮ್ಮ ಬಂಧು ಮಿತ್ರರಿಗೆ ಎಳ್ಳನ್ನು ಬೀರುತ್ತಾರೆ. ಅಂದು ಮುತ್ತೈದೆಯರಿಗೆ ಅರಿಶಿನ, ಕುಂಕುಮ, ಬಾಗಿನಗಳನ್ನು ಕೊಟ್ಟು ನಮಸ್ಕರಿಸುತ್ತಾರೆ.

ಇನ್ನೊಂದು ಅತಿ ವಿಶೇಷಯೆಂದರೆ ಹಳ್ಳಿಗಳಲ್ಲಿ ಹಸು ಗಳು, ಕರುಗಳು ಹಾಗೂ ಎತ್ತುಗಳನ್ನು ಬಣ್ಣ ಬಣ್ಣದ ವಸ್ತ್ರಗಳಿಂದ








ಅಲಂಕರಿಸಿ, ಕೊಂಬುಗಳಿಗೆ ಬಣ್ಣಗಳನ್ನು ಹಚ್ಚಿ ಸಿಂಗರಿಸು ತ್ತಾರೆ. ಸೂರ್ಯಾಸ್ತಮಯದ ವೇಳೆಗೆ ಅಂದರೆ ಮುಸ್ಸಂಜೆಯಲ್ಲಿ ಕಿಚ್ಚು ಹಾಯಿಸುವ ವಾಡಿಕೆನ್ನು ಹಳ್ಳಿಗಳಲ್ಲಿ ಈಗಲೂ ನೋಡಬಹುದು. ಆ ಸಂಭ್ರಮ ನಿಜಕ್ಕೂ ಕುತೂಹಲಕಾರಿ.

ಈ ಹಬ್ಬ ಕೇವಲ ಮಾನವನಿಗಲ್ಲದೆ ಪಶು ಗಳಿಗೂ ಸಹ ವಿಶೇಷತೆಯ ಜೊತೆ ಆದ್ಯತೆ ನೀಡುವ ಹಬ್ಬ.

ಇದರ ಜೊತೆಗೆ ಮತ್ತೊಂದು ರಮಣೀಯ ವಾದ ಕಣ್ಣು ಸೆಳೆಯುವ ನೋಟವೆಂದರೆ, ಆಗ ಸಕ್ಕೆ ಗಾಳಿಪಟವನ್ನು ಹಾರಿಸುವ ಸಂಭ್ರಮ. ಈ ಜೀವನವೆಂಬ ಗಾಳಿಪಟದ ಸೂತ್ರ ಧಾರ ಪರಮಾತ್ಮನು. ಇದರ ಅರ್ಥ ನಮ್ಮ ಜೀವನವು ಪತಂಗದಂತೆ ಮೇಲೆ ಹಾರಬೇಕು. ಸಾಧನೆಯ ಹಾದಿಯಲ್ಲಿ ವಿಶಾಲವಾದ ಆಗಸವನ್ನು ಮುಟ್ಟು ವಂತೆ ಜೀವನ ಸಾಗಿಸಬೇಕು ಮತ್ತೊಬ್ಬರಿಗೆ ಮಾದರಿಯಾಗಬೇಕು.

ಈ ಮಕರ ಸಂಕ್ರಮಣದಂದು ಪಿತೃ ಗಳಿಗೆ ತರ್ಪಣ ನೀಡುತ್ತಾರೆ. ಈ ಉತ್ತರಾಯಣ ದಲ್ಲಿ ಮರಣ ಹೊಂದಿದರೆ ಪುನರ್ಜನ್ಮವೇ ಇಲ್ಲ ಎಂಬ ನಂಬಿಕೆ ಹಾಗೂ ವಾಡಿಕೆ ಇದೆ. ಇದಕ್ಕೆ ಉದಾಹರಣೆ ಎಂದರೆ ನಮ್ಮ ಭೀಷ್ಮಾ ಚಾರ್ಯರು ಅವರಿಗೆ ಇರುವ ವರವೇನೆಂದರೆ **"ಇಚ್ಛಾಮರಣ"** ಆದರೆ ಅವರು ತಮ್ಮ ಕೊನೆ ಉಸಿರಿನಲ್ಲಿ ಶರಪಂಜರದ ಮೇಲೆ ಮಲಗಿದ್ದು, ಉತ್ತರಾಯಣ ಬರುವವರೆಗೂ ಉಸಿರನ್ನು ಗಟ್ಟಿ ಯಾಗಿ ಹಿಡಿದುಕೊಂಡು ಆ ಕ್ಷಣಕ್ಕೆ ಕಾಯು ತ್ತಿದ್ದರು. ಈ ಉತ್ತರಾಯಣ ಕಾಲದಲ್ಲಿ ಇಹ ಲೋಕತ್ಯಜಿಸಿ ಪರಲೋಕ ಸೇರಿದರು ಎಂದು ನಮ್ಮ ಪುರಾಣ ಗಳಿಂದ ತಿಳಿಯಬಹುದು.

ಒಂದು ಸವಿ ವಿಚಾರ ಎಂದರೆ ನಮ್ಮ ಬೆಂಗಳೂರಿನಲ್ಲಿರುವ ಗವಿ ಗಂಗಾ ಧೇಶ್ವರಸ್ವಾಮಿ ದೇವಾಲಯದಲ್ಲಿ ಜನ ಸಾಗರವೇ ಹರಿದು ಬರುತ್ತದೆ. ಆ ಸ್ವಾಮಿಯ ಮೇಲೆ ಅಂದರೆ ಶಿವಲಿಂಗದ ಮೇಲೆ ಸೂರ್ಯನ ಕಿರಣಗಳು ಸಂಜೆ ಗೋಧೂಳಿ ಲಗ್ನದಲ್ಲಿ ಸ್ಪರ್ಶಿಸುತ್ತದೆ. ಅದನ್ನು ಕಂಡು ಎಲ್ಲರೂ ಭಕ್ತಿಯಿಂದ ಪುನೀತರಾಗುತ್ತಾರೆ.




18 ಪಡಿ (ಮೆಟ್ಟಿಲುಗಳ) ಒಡೆಯನಾದ ಸ್ವಾಮಿ ಅಯ್ಯಪ್ಪ ನೆಲೆಸಿರುವ ಬೆಟ್ಟ ಶಬರಿಮಲೈ ಎಲ್ಲರೂ ಭಗವಂತನಿಗೆ ಮನಸಾಭಿಷ್ಟವನ್ನು ಕರುಣಿಸುವ ಪರಮಾತ್ಮನೆಂದು ಪೂಜಿ ಸುತ್ತಾರೆ. ಅಯ್ಯಪ್ಪ ಸ್ವಾಮಿಯ ದರ್ಶನಕ್ಕೆ ಇರುಮುಡಿಯನ್ನು ಹೊತ್ತು ಬರುವ ಭಕ್ತರು, ಮಕರ ಜ್ಯೋತಿಯನ್ನು ನೋಡುವ ಸೌಭಾಗ್ಯ ದೇವರು ಕರುಣಿಸಲಿ ಎಂದು ಪ್ರಾರ್ಥಿಸುತ್ತಾರೆ. ಈ ಮಕರಜ್ಯೋತಿಯನ್ನು ಶಬರಿಮಲೈನಲ್ಲಿ ವೀಕ್ಷಿಸ ಬಹುದು.

ಮೂರನೆಯ ದಿನದಂದು **"ಮಾಟು ಪೊಂಗಲ್"** ಎಂದು ಕರೆಯುತ್ತಾರೆ ಈ ದಿನದ ವಿಶೇಷ ಎಂದರೆ ದನ, ಕರುಗಳಿಗೆ ಬಣ್ಣಗಳಿಂದ ಅಲಂಕರಿಸಿ, ಘಂಟೆ ಕಟ್ಟಿ ಪೂಜಿಸುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಜನರು ಅತಿ ಸಡಗರ ದಿಂದ ಹಬ್ಬವನ್ನು ಆಚರಿಸುತ್ತಾರೆ.

ಇದು ಮುಖ್ಯವಾಗಿ ತಮಿಳುನಾಡಿನಲ್ಲಿ ಆಚರಿಸುತ್ತಾರೆ. ನೇಗಿಲನ್ನು ಹಿಡಿದ ರೈತನು. ಹೊಲದಲ್ಲಿ ದುಡಿಯುತ್ತಿರುವಾಗ, ಅವನಿಗೆ ಬೆನ್ನೆಲುಬಾಗಿ ನಿಂತಿ ರುವುದು ಜಾನುವಾರುಗಳು ಅವುಗಳೇ ರೈತನ ಆಪ್ತಮಿತ್ರ ಎಂದರೆ ತಪ್ಪಿಲ್ಲ. ಈ ದಿನ ರೈತನೇ ಗೆಳೆಯನಾದ ಜಾನುವಾರುಗಳಿಗೆ ಒಳ್ಳೆಯದನ್ನು ಬಯಸುವ ಹಾಗೂ ಪ್ರಾರ್ಥಿಸುವ ದಿನ.

ಈ ರೀತಿ ಮೂರು ದಿನದ ಸಂಕ್ರಾಂತಿ ಹಬ್ಬವನ್ನು ಎಲ್ಲರೂ ಮನತುಂಬಿ, ಆಚರಿಸುತ್ತಾರೆ. ಸಂಕ್ರಾಂತಿ ಹಬ್ಬವು ಎಲ್ಲರಿಗೂ ಸಂತೋಷ, ನೆಮ್ಮದಿ, ಕರುಣಿ ಸಲಿ ಎಂದು ಸೂರ್ಯದೇವನಲ್ಲಿ ಪ್ರಾರ್ಥಿಸೋಣ, ಎಲ್ಲರ ಬದುಕಿನಲ್ಲಿ ಇಷ್ಟಾ ರ್ಥವನ್ನು ಕರುಣಿಸಲಿ, ನೆಮ್ಮದಿಯ ಹಾದಿಯಲ್ಲಿ ಯಾವ ಅಡೆ ತಡೆಯು ಬರದಿ ರಲಿ.





# ಧನುರ್ಮಾಸ ಪುಣ್ಯ ಪೂರ್ಣಮಾಸ ಪರ್ವಪ್ರವರ ಪ್ರತಿಷ್ಠಿತ ಮಾಸ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
97393 69621

(ಕಳೆದ ಸಂಚಿಕೆಯಿಂದ)

**ದೇವತೆಗಳ ಬ್ರಾಹ್ಮಿ ಮುಹೂರ್ತ**

ನಾವು ಪಂಚಾಂಗದ ಪ್ರಕಾರ ಒಂದು ವರ್ಷವನ್ನು ಎರಡು ಭಾಗಗಳನ್ನಾಗಿ ಮಾಡಿದ್ದೇವೆ. ಉತ್ತರಾಯಣ ಪುಣ್ಯಕಾಲ ಮತ್ತು ದಕ್ಷಿಣಾಯನ ಪುಣ್ಯಕಾಲ ನಮ್ಮ ಒಂದು ವರ್ಷ ದೇವತೆಗಳಿಗೆ ಒಂದು ದಿನ. ಮಾರ್ಗಶೀರ್ಷ ಮಾಸ ದಕ್ಷಿಣಾಯನ ಪುಣ್ಯಕಾಲದಲ್ಲಿ ಬರುತ್ತದೆ. ಉತ್ತರಾಯಣ ಪುಣ್ಯಕಾಲ ದೇವತೆಗಳಿಗೆ ಬೆಳಗ್ಗೆ ದಕ್ಷಿಣಾಯನ ಪುಣ್ಯಕಾಲ ರಾತ್ರಿ. ಈ ಮಾಸ ರಾತ್ರಿ ಮುಗಿಯುತ್ತಿರುವ ಸಮಯ, ನಾವು ಬ್ರಾಹ್ಮೀಮುಹೂರ್ತವೆಂದು ಯಾವ ಸಮಯವನ್ನು ಕರೆಯುತ್ತೇವೋ ಅಂತಹ ಶ್ರೇಷ್ಠ ಮುಹೂರ್ತ ದೇವತೆಗಳಿಗೆ ಈ ಇಡೀ ಮಾಸ ಈ ತಿಂಗಳು ಪೂರ್ತಿ ಬ್ರಾಹ್ಮೀ ಮುಹೂರ್ತವೇ. ಈ ಮಾಸದಲ್ಲಿ ದೇಹವನ್ನು ದಂಡಿಸಿ, ಚಳಿಯಿದ್ದರೂ ನದಿಯಲ್ಲಿ ಸ್ನಾನ ಮಾಡಿ ಬರೀ ದೇವರ ಕಾರ್ಯಗಳನ್ನೇ ಮಾಡಿದರೆ ನಮ್ಮ ಇಷ್ಟಾರ್ಥಗಳು ಫಲಿಸುತ್ತವೆ. ಹಾಗಂತ ಈ ಸಮಯದಲ್ಲಿ ಬೇರೆ ಒಳ್ಳೆ ಕೆಲಸ ಮಾಡಬಾರದೂ ಅಂತಲ್ಲ. ಕೆಲವರು ಮದುವೆ, ನಾಮಕರಣ, ಬ್ರಹ್ಮೋಪದೇಶ ಅಷ್ಟೇ ಯಾಕೆ ಮನೆ, ಸೈಟು ಖರೀದಿಸುವವರು ಸಹ ಈಮಾಸವನ್ನು ಶೂನ್ಯಮಾಸವೆಂದು ಪರಿಗಣಿಸಿ ಎಲ್ಲವನ್ನೂ ಮುಂದೂಡುತ್ತಾರೆ.

**ಶೂನ್ಯಮಾಸ ಯಾವುದು?**

ಪುಷ್ಯ ನಕ್ಷತ್ರದಿಂದ ಪ್ರಾರಂಭವಾಗುವ ಮಾಸವನ್ನು ಶೂನ್ಯ ಮಾಸವೆನ್ನುತ್ತಾರೆ. ಏಕೆಂದರೆ ಅದು ಶನಿಗೆ ಸಂಬಂಧಪಟ್ಟ ಮಾಸ. ಆ ತಿಂಗಳಿನಲ್ಲಿ ಏನೇ ಕೆಲಸಕ್ಕೆ ಕೈ ಹಾಕಿದರೂ ಅದರ ಫಲಿತಾಂಶ ಶೂನ್ಯವಾಗಿರುತ್ತದೆ ಎಂಬ ನಂಬಿಕೆಯಿದೆ.

ಶೂನ್ಯಮಾಸ ಸಾಮಾನ್ಯವಾಗಿ ಜೂನ್, ಜುಲೈ, ಆಗಸ್ಟ್ ತಿಂಗಳಿನಲ್ಲಿ ಯಾವುದಾದರೂ ಒಂದು ತಿಂಗಳು ಬಂದು ಹೋಗುತ್ತದೆ. ಅದನ್ನು ಆಷಾಢ ಮಾಸವೆಂದು ಸಹ ಕರೆಯುತ್ತಾರೆ. ಆಷಾಢದಿಂದ ಉತ್ತರಾಯಣ ಪುಣ್ಯಕಾಲ ಮುಗಿದು, ದಕ್ಷಿಣಾಯನ ಪುಣ್ಯಕಾಲಕ್ಕೆ ಕಾಲಿಡುತ್ತೇವೆ.

**"ಧನುಷಿ ಧನುರಾಕಾರಃ- ಮಕರೇ ಕುಂಡಲಾಕೃತೀಃ"** ಎಂಬ ಉಕ್ತಿಗನುಸಾರವಾಗಿ ಚಳಿಯಿಂದ ತಪ್ಪಿಸಿಕೊಳ್ಳಲು ಮನುಷ್ಯನು ಬಿಲ್ಲಿನಂತೆ ಬಾಗಿ, ಕೈಕಾಲ ಮುದುಡಿಕೊಂಡಿರಲು ಇಷ್ಟಪಡುತ್ತಾನೆ. ಈ ವಾತಾವರಣದ ಫಲವಾಗಿ ಮಾನವನ ದೈನಂದಿನ ಕ್ರಿಯೆಗಳಾದ ವಿಸರ್ಜನಾಂಗಗಳ ಪ್ರಕ್ರಿಯೆಯಲ್ಲೂ ವೈಪರೀತ್ಯಗಳು ಕಂಡು ಬರುವುದು ಸಹಜವೆಂದು ವೈದ್ಯವಿಜ್ಞಾನವೂ ಒಪ್ಪಿಕೊಳ್ಳುತ್ತದೆ. ಇದನ್ನೇ **'ಸಾಮಾಯಿಕ ಬಾಧೆ'** (ಸೀಸನಿಕ್ ಅಲರ್ಜಿ) ಎನ್ನಬಹುದು. ಇದರ ನಿವಾರಣೆಗಾಗಿ ನಮ್ಮ ಪ್ರಾಚೀನರು ಧನುರ್ಮಾಸದಲ್ಲಿ ಅರುಣೋದಯದ ಹೊತ್ತಿಗೆ ಸ್ನಾನಾದಿಗಳು ಮುಗಿದಿರಬೇಕು ಎಂದರು. ನಂತರ ಹೊತ್ತಿಗೆ ಕುಳಿರ್ಗಾಳಿ ಹೆಚ್ಚಾಗಿ ಚರ್ಮವು ಶುಷ್ಕತೆಯನ್ನು ಪಡೆಯುವ ಸಾಧ್ಯತೆ ಹೆಚ್ಚು ಆದುದರಿಂದ ಆ ಕುಳಿರ್ಗಾಳಿ ಆರಂಭವಾಗುವ ಮುನ್ನ ಸ್ನಾನಾದಿಗಳನ್ನು ಮುಗಿಸಿ ವಸ್ತ್ರದಿಂದ ದೇಹವನ್ನು ಮುಚ್ಚುವ ಯತ್ನವಿದಾಗಿರಬಹುದು. ಈ ಸಮಯದಲ್ಲಿ ಸೇವಿಸುವ ಆಹಾರಗಳಲ್ಲಿ ಮುಖ್ಯವಾದುದು ಹುಗ್ಗಿ.

ಇದರ ಸಿದ್ಧತೆಗೆ ಬಳಸುವ ಕಡಲೇಬೀಜ, ಅವರೇಕಾಳು, ಜೀರಿಗೆ, ಮೆಣಸು, ಲವಂಗಗಳು, ದೇಹದಲ್ಲಿ ಆಂತರಿಕವಾಗಿ ಉಷ್ಣತೆಯನ್ನೂ ಹೆಚ್ಚಿಸುವುದರೊಂದಿಗೆ ನೈಮಿತ್ತಿಕ ಬಾಧೆಗಳನ್ನು ತಡೆಯುತ್ತವೆ. ಆಹಾರ, ಆಚಾರಗಳೆರಡೂ ನಮ್ಮ ಜೀವನ ಸುಖವಾಗಿ ಇರುವಂತೆ ಮಾಡುವುದಕ್ಕಾಗಿಯೇ ಧನುರ್ಮಾಸದ ವಿಧಿಯೆಂಬುದನ್ನು ಅರಿತು ಆಚರಿಸೋಣವೇ?

ಭಾಗವತದಲ್ಲಿ ಗೋಪಿಯರ ಕಾತ್ಯಾಯನಿ ವ್ರತವನ್ನು ಕುರಿತು ಹೇಳಲಾಗಿದೆ. ಧನುರ್ಮಾಸದ ಮುಂಜಾವಿನಲ್ಲಿ ಮಾಡುವ ವ್ರತದ ಫಲವು ಭಕ್ತರಿಗೆ ಸರ್ವವಿಧವಾದ ಇಷ್ಟಾರ್ಥವನ್ನು ಕೊಡುತ್ತದೆ ಎಂಬುದನ್ನು ಸೂಚಿಸುವುದಕ್ಕಾಗಿಯೇ ಈ ವ್ರತದ ವಿಧಿಯನ್ನು ಗೋಪಿಯರ ಕೂಡಿ ನಂದಗೋಪನ ಮಗನಾದ ಶ್ರೀಕೃಷ್ಣ ಪರಮಾತ್ಮನನ್ನು ಪತಿಯಾಗಿ ವರಿಸಲು ಈ ವ್ರತವನ್ನು ಮಾಡುತ್ತಾರೆ. ಅಂತಹ ಪರಮಾತ್ಮನ್ನೇ ದೊರಕಿಸಿ ಕೊಡುವ ಮಾಸವಾಗಿರುವುದರಿಂದ ಶೈವ, ವೈಷ್ಣವ, ಶಾಕ್ತ ಎಂಬ ಭೇದವಿಲ್ಲದೆ, ಎಲ್ಲರಿಗೂ ಎಲ್ಲ ದೇಗುಲಗಳಲ್ಲಿಯೂ ಧನುರ್ಮಾಸದ ಆಚರಣೆಗಳನ್ನು ನಡೆಸುತ್ತಾರೆ.


### ಮುಕ್ತಿಗಾಥೆ 'ತಿರುಪ್ಪಾವೈ'

ಧನುರ್ಮಾಸದಲ್ಲಿ ಮುಕ್ತಿಗಾಗಿ ಪಠಿಸುವ ತಿರುಪ್ಪಾವೈ ಕನ್ನಡ ನಾಡಿನಲ್ಲೂ ಬಲು ಪ್ರಸಿದ್ಧ. ತಿರುಪ್ಪಾವೈ ಎಂದರೇನು? ಇದು ಜನಪ್ರಿಯವಾದದ್ದು ಹೇಗೆ?

### ಮಾರ್ಗಶಿರ ಮಾಸ:

ಧನುರ್ಮಾಸವೆಂದೂ ಕರೆಯಲ್ಪಡುವ ಈ ಮಾಸ ಧಾರ್ಮಿಕವಾಗಿ,ಆಧ್ಯಾತ್ಮಿಕವಾಗಿ ಮಹತ್ವದ್ದು. ಧನುರ್ಮಾಸವೆಂದರೆ ಸಂಕ್ರಮಣದ ಪೂರ್ವಕಾಲ ಅಂದಿನ ದಿನಗಳಲ್ಲಿ ಮುಂಜಾವು ಬಹಳ ಶುದ್ಧ ಧರ್ನುಮಾಸಕ್ಕೂ ಮತ್ತು ಈ ತಿಂಗಳಲ್ಲಿಯೇ ಹಾಡಿ ಕೊಂಡಾಡಲ್ಪಡುವ ತಿರುಪ್ಪಾವೈಗೂ ಇರುವ ಸಂಬಂಧ ಕುತೂಹಲಕರ. ತಿರುಪ್ಪಾವೈ ದಿವ್ಯಪ್ರಬಂಧವು ಶ್ರೀವೈಷ್ಣವ ಧರ್ಮೀಯರಲ್ಲಿ ಒಂದು ನಿತ್ಯಾನುಸಂಧಾನ ಶ್ಲೋಕ. ಈ ಕೃತಿಯ ಕರ್ತೃವಾದ ಆಂಡಾಳ್ (ಗೋದಾದೇವಿ)ಯನ್ನು ಜನ ದೇವರನ್ನಾಗಿ ಆರಾಧಿಸುತ್ತಾರೆ.

ಜ್ಞಾನ, ಭಕ್ತಿ, ವೈರಾಗ್ಯಗಳಿಂದ ಇದರಲ್ಲಿನ ಹಾಡುಗಳು ಸರ್ವಜನಾದರಣೀಯವಾದವು. ನೃತ್ಯ ಸಂಗೀತ




ಗಳಿಗಂತೂ ಈ ಕೃತಿ ಬಹಳ ಮಧುರ,ಸಕಲ ವೇದಾರ್ಥಸಾರವೆಂದೂ, ಇದರ 30 ಪದ್ಯಗಳಲ್ಲಿ ಅಡಗಿದೆ ಎಂದೂ ನಂಬಲಾಗಿದೆ.

ಇದನ್ನು ಪ್ರತಿಯೊಬ್ಬ ಶ್ರದ್ಧಾವಂತ ಶ್ರೀವೈಷ್ಣವರೂ ದೇವಾಲಯದಲ್ಲಿ ಧನುರ್ಮಾಸದಲ್ಲಿ ಪ್ರತಿದಿನ ಶ್ರದ್ಧಾಭಕ್ತಿ ಯಿಂದ ಒಂದೊಂದು ಪಾಶುರುಗಳಂತೆ ಅರ್ಪಿಸಿ ಆರಾಧನೆ ಮಾಡುವರು.


ಈ ಮಾಸದಲ್ಲಿ ಇದರ ವಾಚನ ವ್ಯಾಖ್ಯಾನಗಳು ಅಲ್ಲಲ್ಲಿ ನಡೆಯುತ್ತದೆ. ಇದಕ್ಕಾಗಿ ಭಕ್ತಮಂಡಳಿಗಳು **'ಆಂಡಾಳ್ ಮಂಡಳಿ'** ಗಳು ರೂಪುಗೊಂಡಿರುತ್ತದೆ.

**"ಆಳ್ವಾರ್"** ಎಂಬ ತಮಿಳು ಮಾತಿಗೆ **"ಆಳವಾಗಿ ಮುಳುಗಿರುವವರು"** ಎಂದು ಅರ್ಥ. ಭಗವದನುಭವವೆಂಬ ಕಡಲಲ್ಲಿ ಮುಳುಗಿ ತಳವನ್ನು ಮುಟ್ಟಿದವರೆಂದು ವಿವರಣೆ. ಇವರೆಲ್ಲ ತಮಿಳು ದೇಶದ ಪ್ರಾಚೀನ ಸಂತರು.

**"ತಿರುಪ್ಪಾವೈ"** ಭಕ್ತಿ ಸರಸ್ವತಿಯ ಕಂಠ ಹಾರದ ನಾಯಿಕಮಣಿ. ಆಧ್ಯಾತ್ಮಶಾಸ್ತ್ರ ಕಾವ್ಯಗಳ ಸಾರ್ವಭೌಮ ಸಿಂಹಾಸನವನ್ನು ಅಲಂಕರಿಸಿರುವ ಭಗವದ್ಗೀತೆಯೊಡನೆ ಸಮಪೀಠದಲ್ಲಿ ಮಂಡಿಸಿರುವ ಭಗವತೀ ಗೀತೆ. ಆ ನಾಯಕ ಗೀತೆ ಮತ್ತು ಈ ನಾಯಿಕಾ ಗೀತೆ ಇವೆರಡೂ ತಮ್ಮ ಸರಳ ಸುಂದರ ಧ್ವನಿಪೂರ್ಣವಾದ ವಿಶಿಷ್ಟ ಶೈಲಿಗಳಿಂದ ಸಮಸ್ತ ವ್ಯಕ್ತಿ ಸರ್ವಜಗತ್ ಕಲ್ಯಾಣಕ್ಕಾಗಿ ತತ್ವಹಿತ ಪುರುಷಾರ್ಥಗಳ ದಿವ್ಯ ಸಂದೇಶವನ್ನು ಸಾರುತ್ತಿದೆ. ಇದು ವಿಶ್ವಮಾನವ ಸಹಬಾಳ್ವೆಗೆ ಒಂದು ಸಾಮಾಜಿಕ, ಭಾವನಾತ್ಮಕ ಮತ್ತು ಕ್ರಿಯಾತ್ಮಕ ಕೈಪಿಡಿ.

ಕನ್ನಡದ ಶ್ರೇಷ್ಠ ಭಕ್ತಕವಿ ಪು.ತಿ.ನ. ಹೇಳುವಂತೆ ಇದೊಂದು ಷೋಡಶೀ ಸ್ವಪ್ನಗೀತೆ ಇದು ದೇವರನ್ನು ಜಗತ್ತಿಗ ಭಿಮುಖವಾಗಿಸುವ ಸುಪ್ರಭಾತ ಕಾವ್ಯವೂ ಹೌದು ಭಗವದ್ಭ ಕ್ತರನ್ನು ಭಗವಂತನ ಬಳಿಗೊಯ್ಯುವ ಭಾಗವತ ಸುಪ್ರ ಭಾತವೂ ಹೌದು.

ತಿರುಪ್ಪಾವೈ ನಿಜಕ್ಕೂ ಒಂದು ಸುಂದರ ಭಾವಗೀತೆ. ಭಕ್ತಿಯ ಹೊದಿಕೆಯೊಳಗಿರುವ ಭಾವಜಗತ್ತು. ಆತ್ಮ ನಿವೇದನೆಯು, ಸ್ತ್ರೀ ಸಹಜವಾದ ಭಾವನೆಗಳ ಅಭಿವ್ಯಕ್ತಿಯ ಮಾಧ್ಯವಾಗಿರುವ ಆಂಡಾಳ್ ಹಾಡುಗಳು ಭಾರತೀಯ ಸಾಹಿತ್ಯದಲ್ಲಿ ಹೆಣ್ಣಿನ ಮನಸ್ಸಿನ ಸಹಜ ಚಿತ್ರ ಣದ ಪ್ರಥಮ ದಾಖಲೆ ಎನ್ನ ಬಹುದು.



ಅಲ್ಲದೆ ಈ ಪದ್ಯಮಾಲೆಯು **"ಮಾ"** ಎನ್ನುವ ಸಂಸ್ಕೃತ ಶಬ್ದದಿಂದ ಆರಂಭಿಸಿ, **"ಪಾವಯ್"** ಎಂಬ ತಮಿಳು ಪದದಿಂದ ಮುಗಿಯುತ್ತದೆ. ಇಲ್ಲಿ ಪ್ರತಿ ಪದ್ಯ ದಲ್ಲಿಯೂ ಎಂಟು ಸಾಲುಗಳಿವೆ.

ಪ್ರತಿಯೊಂದು ಸಾಲಿನಲ್ಲೂ ಶ್ರೀಮನ್ನಾ ರಾಯಣನ ನಾಮಸಂಕೀರ್ತನೆ ಇರುವುದ ರಿಂದ ಪ್ರತಿ ಪದ್ಯವು ಅಷ್ಟಾಕ್ಷರಿ ಮಂತ್ರದ ಛಾಯೆಯನ್ನು ಪಡೆದಿದೆ ಎಂಬುದು ಗಮ ನಾರ್ಹ. ಆದ್ದರಿಂದಲೇ ಇದನ್ನು ಗೋದೋಪ ನಿಷತ್ ಎಂದು ಕರೆಯಲಾಗುತ್ತದೆ.

ಆಕೆ ಮುಡಿದ ಹೂಗಳನ್ನು ದೇವರು ಇಷ್ಟ ಪಡುತ್ತಿದ್ದ !

ತಿರುಪ್ಪಾವೈ ರಚಿಸಿರುವ ಆಂಡಾಳ್ ತಮಿ ಳಿನ 12 ಮಂದಿ ಭಕ್ತ ಕವಿಗಳಾದ ಆಳ್ವಾರ್‌ಗಳಲ್ಲಿ ಒಬ್ಬಾಕೆ. ಭಗವಂತನನ್ನು ಭಕ್ತಿ ಮೂಲಕ ಒಲಿಸಿಕೊಂಡ, ತಾವು ಕಂಡ ದಿವ್ಯಕ್ಷೇತ್ರಗಳಲ್ಲಿನ ದೇವ ದೇವಿಯರನ್ನು ಹಾಡಿ ಪೂಜಿಸುವ ಈ ಆಳ್ವಾರ್‌ಗಳು ಹಾಡಿದ ಹಾಡುಗಬ್ಬವೇ ತಿರುಪ್ಪಾವೈ.

ತತ್ವ ವೇದಾಂತಗಳ ಗೋಜಿಲ್ಲದೆ ಭಾಷಾ ಪ್ರೌಢಿಮೆಯ ಅಹಂ ಇಲ್ಲದೆ ಮುಕ್ತಿ ಮಾರ್ಗವನ್ನು ಸುರಳೀತವಾಗಿ ಕಾಣಿ ಸಿದ ಮಹಾನ್ ನುಡಿಕಾಣ್ಕೆ ಇದು. ಇಲ್ಲಿರುವುದೆಲ್ಲ ಶುದ್ಧ ಪ್ರೀತಿ, ದೈವದ ಕಡೆಗಿನ ವಿನೀತಭಾವ ತಮಿಳುನಾಡಿನ ಶ್ರೀವಿಲ್ಲಿಪುತ್ತೂರಿನಲ್ಲಿ ವಿಷ್ಣುಚಿತ್ತ ಎಂಬ ಭಕ್ತಶ್ರೇಷ್ಠರು ವಾಸ ವಿರುತ್ತಾರೆ. ಅವರು ಪ್ರತಿದಿನದ ದೇವತಾರ್ಚನೆಗೆ ತುಳಸಿ ದಳ ಸಂಗ್ರಹಿಸಲು ತುಳಸಿವನಕ್ಕೆ ಹೋದಾಗ ಅಲ್ಲೊಂದು ಸುಂದರವಾದ ಹೆಣ್ಣುಮಗು ಸಿಗುತ್ತದೆ. ಅದನ್ನು **'ಗೋದಾ ದೇವಿ'** ಎಂದು ಕರೆದು ತುಂಬಾ ಮಮತೆಯಿಂದ ಆಧ್ಯಾತ್ಮಿಕ ವಾತಾವರಣದಲ್ಲಿ ಬೆಳೆಸುತ್ತಾರೆ.


ಆಂಡಾಳ್ ಸುಂದರಿಯೂ, ಕೋಮಲೆಯೂ ಆಗಿ ಪ್ರವರ್ಧಮಾನಕ್ಕೆ ಬಂದಳು. ಈಕೆಗೆ ಮೊದಲಿನಿಂದಲೂ ಶ್ರೀಕೃಷ್ಣನ ಮೇಲೆ ಅಪ್ರತಿಮ ಭಕ್ತಿ. ಶ್ರೀಕೃಷ್ಣನೇ ತನ್ನ ಗಂಡನಾಗಬೇಕೆಂದು ಧ್ಯಾನಿಸುವ ಭಕ್ತೆ ಈಕೆ. ದಿನವೂ ತಂದೆ ದೇವ ರಿಗೆ ಅರ್ಪಿಸಲು ತೋಟದಿಂದ ತರುತ್ತಿದ್ದ ಸುಗುಂಧ ಪುಷ್ಪಗಳಿಂದ ಸುಂದರ ವಾದ ಮಾಲೆ ಕಟ್ಟಿ ತನ್ನ ಇಷ್ಟ ದೈವಕ್ಕೆ ಅರ್ಪಿಸುವಷ್ಟು ಸೊಗ ಸಾಗಿ ಬಂದಿದೆಯೋ ಇಲ್ಲವೋ ಎಂದು ನೋಡಲು ತಾನು ಮೊದಲು ಮುಡಿದು ಕನ್ನಡಿಯಲ್ಲಿ ನೋಡಿಕೊಂಡು ಪರೀ ಕ್ಷಿಸಿ, ನಂತರ ತನ್ನ ತಂದೆಯ ಕೈಗೆ ಕೊಡುತ್ತಿ ದ್ದಳು. ಒಂದು ದಿನ ವಿಷ್ಣುಚಿತ್ತರಿಗೆ ಹೂ ಮಾಲೆಯಲ್ಲಿ ನೀಳವಾದ ಕೂದಲೆಳೆ ಕಂಡು ಬಂತು ಆ ಮಾಲೆ ಅಶುದ್ಧವೆಂದು ಅಂದು ದೇವರಿಗೆ ಆ ಮಾಲೆಯನ್ನು ಅರ್ಪಿಸಲೇ ಇಲ್ಲ, ಆಂಡಾಳ್ ಮಾಲೆಯನ್ನು ತಾನು ಮೊದಲು ಮುಡಿದು ಅನಂತರ ದೇವರಿಗೆ ಕೊಡುತ್ತಿದ್ದಳು ಎಂದು ಅವರಿಗೆ ಗೊತ್ತಾಗಿ ಮಗಳ ಮೇಲೆ ಕೋಪ, ಅಸಮಾಧಾನವುಂಟಾ ಯಿತು.




ಆ ರಾತ್ರಿ ದೇವರು ಅವರ ಕನಸಿನಲ್ಲಿ ಬಂದು ಆಂಡಾಳ್ ಮುಡಿದ ಮಾಲೆಯೇ ತನಗೆ ಪ್ರಿಯವೆಂದೂ, ಅದನ್ನೆ ಅರ್ಪಿಸಬೇಕೆಂದು ಹೇಳಿದಂತೆ ಆಯಿತಂತೆ ತಮ್ಮ ಸಾಕು ಮಗಳು ದೇವರ ವಿಶೇಷ ಕೃಪೆಗೆ ಪಾತ್ರಳಾಗಿರು ವುದನ್ನು ತಿಳಿದು ಆಳ್ವಾರರಿಗೆ ಅಪಾರ ಸಂತೋಷವಾಯಿ ತಂತೆ ಈ ಘಟನೆಯು ಆಂಡಾಳ್‌ನ ಭಕ್ತಿ ಪರಾಕಾಷ್ಠೆಯ ಮಹತ್ವವನ್ನು ನಮಗೆ ತಿಳಿಸಿ ಕೊಡುತ್ತದೆ.

# ಪುರಂದರೋಪನಿಷತ್ ಒಂದು ಸಮೀಕ್ಷೆ

– ಕೆ. ಭೀಮರಾವ್
96326 16074



ವ್ಯಾಸ ಸಾಹಿತ್ಯ - ದಾಸ ಸಾಹಿತ್ಯ ಭಗವಧಾರನೆಯ ಎರಡು ಮುಖಗಳು. ಒಂದು ಜ್ಞಾನವಾಹಿನಿಯಾದರೆ ಇನ್ನೊಂದು ಭಕ್ತಿ ಗಂಗೆ. ವ್ಯಾಸ ಕೂಟದವರಾದರೋ ದೇವಭಾಷೆಯಾದ ಸಂಸ್ಕೃತ ಪ್ರಿಯರು. ಅವರ ಪಾಂಡಿತ್ಯ ಪ್ರಮೇಯ ಜ್ಞಾನ ಪಿಪಾಸುಗಳಿಗೆ ರಸದೌತಣ. ದಾಸ ಕೂಟದವರ ಭಾಷೆಯಾದರೋ ದೇಶಿ ಭಾಷೆ ಅವರ ಗುರಿ ಶ್ರೀಸಾಮಾನ್ಯ. ವ್ಯಾಸ ಸಾಹಿತ್ಯ ಕರ್ತರು ಮೂಲತಃ ಪೀಠಸ್ಥ ಯತಿಗಳು ಅಥವಾ ಅವರ ಅನುಯಾಯಿಗಳು. ವೇದ, ಉಪನಿಷತ್ತು ಮತ್ತು ಬ್ರಹ್ಮಸೂತ್ರಗಳನ್ನು ಕರತಲಮಲಗೊಳಿಸಿಕೊಂಡವರು ಅವರು. ಅವುಗಳಿಗೆ ಭಾಷ್ಯ ಟೀಕು, ಟಿಪ್ಪಣಿಗಳನ್ನು ಬರೆದು ಅಂತರಾರ್ಥಗಳನ್ನು ಅನಾವರಣ ಮಾಡಿದವರು ಮೂಲ ಮಂತ್ರ ಅಥವಾ ಶ್ಲೋಕ ರೂಪದಲ್ಲಿದ್ದರೆ ಅವುಗಳಿಗೆ ಪ್ರತಿ ಪದಾರ್ಥ ಬರೆದು ಸಂದಿಗ್ಧತೆಯನ್ನು ಪರಿಹರಿಸಿದವರು. ದೇವಭಾಷೆಯ ಏಕಪದದ, ಏಕ ಅಕ್ಷರದ ವಿವಿಧ ರೂಪಗಳನ್ನು ಅರ್ಥವೈವಿಧ್ಯವನ್ನು ವಿಸ್ತರಿಸಿ ಪಂಡಿತರ ಪ್ರಿಯರಾದವರು. ಆದರೆ ದೇಶಿ ಭಾಷೆಯ ಹರಿಕಾರರಾದ ಈ ದಾಸರುಗಳಾದರೋ ಬೀದಿಗಳಲ್ಲಿ ಗೆಜ್ಜೆ ಕಟ್ಟಿ ಕುಣಿಯುತ್ತ ಹರಿನಾಮ ಸಂಕೀರ್ತನೆ ಮಾಡಿದವರು. ಇವರ ಶ್ರೋತಗಳಾದರೂ ಪಾಮರರು, ಅನೇಕ ವೇಳೆ ನಿರಕ್ಷರ ಕುಕ್ಷಿಗಳು ಪೀಠಸ್ಥಲ ಯತಿಗಳು ರಾಜಮಾನ್ಯರಾದರೆ ಹರಿದಾಸರು ರೈತ ಬಂಧುಗಳು ಈ ಎರಡೂ ಕೂಟಸ್ಥರಲ್ಲಿ ಅನೇಕ ಪ್ರಭೇದಗಳಿದ್ದರೂ ಈರ್ವರ ಗುರಿಯೂ ಒಂದೆ. ಬದುಕಿನ ನಶ್ವರತೆಯನ್ನು, ಜೀವನ ಮಾಯಾ ಲೀಲಾ ವಿನೋದವವನ್ನು ಮನವರಿಕೆ ಮಾಡಿ, ಮನುಷ್ಯನ ಅಂತಃ ಸತ್ವವನ್ನು ಜಾಗೃತಗೊಳಿಸಿ ಅವನ ಪ್ರಜ್ಞೆಯನ್ನು ಮೇಲೆತ್ತಿ ಪರಬ್ರಹ್ಮನೊಂದಿಗೆ ಅನುಸಂಧಾನಗೊಳಿಸುವುದು. ಹೀಗಾಗಿ ವ್ಯಾಸ ಕೂಟ - ದಾಸಕೂಟದವರ ಮಾರ್ಗಗಳು ಬೇರೆಯಾಗಿದ್ದರೂ ಅವರು ಪರಸ್ಪರ ಮಾನ್ಯರು. ಹಾಗೆ ನೋಡ ಹೊರಟರೆ ವ್ಯಾಸ ಕೂಟದವರೆ ದಾಸಕೂಟದ ಪ್ರವರ್ತಕರೂ ಕೂಡ.

**"ದಾಸರೆಂದರೆ ಪುರಂದರದಾಸರಯ್ಯ"** ಎಂದು ಶಿಷ್ಯನನ್ನು ಹಾಡಿ ಹೂಗಳಿದ ಯತಿವರೇಣ್ಯ ಶ್ರೀ ವ್ಯಾಸರಾಜರೆ ವಜ್ರ ವ್ಯಾಪಾರಿ ಶ್ರೀನಿವಾಸನಾಯಕ **"ಪುರಂದರ"** ಅಂಕಿತ ನೀಡಿದ್ದು, ದಾಸದೀಕ್ಷೆ ಅನುಗ್ರಹಿಸಿದ್ದು. ಆ ಗುರುಗಳೆ ಪುರಂದರ ದಾಸರ ಕೀರ್ತನೆ, ಸುಳಾದಿ, ಉಗಾಭೋಗಗಳ, ಸಮುಚ್ಚಯಕ್ಕೆ **"ಪುರಂದರೋಪನಿಷತ್"** ಎಂದು ನಾಮಕರಣ ಮಾಡಿದ್ದು. ಈ ನಾಮಕರಣವನ್ನು ಕೇಳಿದ ಅನೇಕ ಜನರು ಆ ದಿನಗಳಲ್ಲಿಯೇ ದಾಸರ ಬೀದಿಪದಗಳಲ್ಲಿ, ಉಪನಿಷತ್‌ಗಳನ್ನು ತತ್ವಗಳಲ್ಲಿ ಎಂದು ವ್ಯಂಗಮಾಡಿದ್ದುಂಟು. ಇಂದಿಗೂ ಅನೇಕರು ದಾಸರ ಪದಗಳ ಸರಳತೆಯನ್ನು ಗಮನಿಸಿ ಅದರಲ್ಲಡಕವಾಗಿರುವ ಉಪನಿಷತ್ತಿನ ಸಾರವನ್ನು ಗಮನಿಸದೆ ಹೋಗಿರುವುದುಂಟು.

ಪುರಂದರದಾಸರ ಕೀರ್ತನೆ - ಪದಗಳೆಂದರೆ ಮನಸ್ಸಿಗೆ ಬಂದಿದ್ದನ್ನು ಬಾಯಲ್ಲಿ ಹಾಡಿದ ಅಪಕ್ವ ಮಾತುಗಳಲ್ಲ ಅವರ ಕೀರ್ತನದ ಒಂದೊಂದು ಪದವೂ ಆಳವಾಗಿ ವಿಚಾರ ಮಾಡಿ ಆಡಿದ ಅಮೃತ ಬಿಂದುಗಳು. ದಂಡಿಗೆ ಬೆತ್ತಹಿಡಿದ ದಾಸರದು ಅಭಾವ ವೈರಾಗ್ಯವೂ ಅಲ್ಲ ಅಥವಾ ಮಸಣ ಸನ್ಯಾಸವೂ ಅಲ್ಲ, ಚಿನ್ನ,ವಜ್ರ, ವ್ಯಾಪಾರಿ ಮನೆತನದಲ್ಲಿ ಹುಟ್ಟಿ ಬೆಳೆದ ಅವರು ಬಾಲ್ಯದಿಂದಲೆ ವಿದ್ಯಾ ಸಂಪನ್ನರು ಸಂಸ್ಕೃತ - ಕನ್ನಡ ಭಾಷೆಗಳನ್ನು ಆಳವಾಗಿ ಅಧ್ಯಯನ ಮಾಡಿದವರು. ಸಂಗೀತದ ಸವಿಯನ್ನು ಸವಿದವರು. ಧಾರ್ಮಿಕ ಗ್ರಂಥಗಳ ಅಧ್ಯಯನ ಮಾಡಿ ಕಾವ್ಯ ಛಂದೋಬದ್ಧವನ್ನು ಅರಿತವರು. ಆದರೆ ಅವರ ಒಂದೇ



ಅವಗುಣ ಎಂದರೆ ಧನವ್ಯಾಮೋಹ, ಪರಮ ಲೋಭಿ ತನ. ಈ ಲೋಭಿತನವಾದರೋ ಪಿತ್ರಾರ್ಜಿತವಲ್ಲ, ಸ್ವಯೋರ್ಜಿತ ಹಾಗೆ ನೋಡ ಹೊರಟರೆ ಅವರ ಮನೆ ತನ ಸುಸಂಕೃತ ವಣಿಕ ವಂಶ, ಧನಾಢ್ಯರಾದರೂ ಧರ್ಮಬೀರುಗಳು.

ಜಿಪುಣರಲ್ಲಿ ಜಿಪುಣರಾದ ಶ್ರೀನಿವಾಸ ನಾಯಕರ ಮನಃ ಪರಿವರ್ತನೆಗೆ ಪತ್ನಿ ನೆಪ ಮಾತ್ರ ನಾರದಾಂಶರಾದ ಅವರ ಸ್ವರೂಪದರ್ಶನ ಶ್ರೀಮನ್ನಾರಾಯಣನಿಂದಲೆ ಬಡ ಮುದುಕನ ವೇಷದಲ್ಲಿ ಬಂದು, ಮಗನ ಉಪನಯನಕ್ಕಾಗಿ ಧನ ಯಾಚಿಸಿ, ಶ್ರೀನಿವಾಸ ನಾಯಕನಿಂದ ಛೀಮಾರಿ ಹಾಕಿಸಿಕೊಂಡು ಅವನ ಪತ್ನಿ ಸರಸ್ವತಿಯೆಡೆಗೆ ಬರುತ್ತಾನೆ. ಬಡವನ ಕರುಣಾಜನಕ ಸ್ಥಿತಿಯನ್ನು ಕಂಡ ಸರಸ್ವತಿ ತನ್ನ ತವರುಮನೆಯ ಕೊಡುಗೆಯಾದ ತಾನು ಧರಿಸಿದ್ದ ವಜ್ರ ಮೂಗುತಿಯನ್ನೇ ಅವನಿಗೆ ದಾನವಾಗಿ ನೀಡುತ್ತಾಳೆ. ಆ ಮುದುಕನಾದರೋ ಅದನ್ನು ಮಾರಲು ನಾಯಕನ ಅಂಗಡಿಗೆ ಬರುತ್ತಾನೆ. ಬಡವನ ಕೈಯಲ್ಲಿ **"ವಜ್ರದ ಮೂಗುತಿ"** ಯನ್ನು ಕಂಡ ನಾಯಕ ಸಂಶಯಗ್ರಸ್ಥನಾಗಿ, ಮುದುಕನನ್ನು ಅಂಗಡಿಯಲ್ಲಿ ಕೂರಿಸಿ ಮನೆಗೆ ತೆರಳಿ ಪತ್ನಿಯನ್ನು ಮೂಗುತಿಯ ಬಗೆಗೆ ಪ್ರಶ್ನಿಸುತ್ತಾನೆ. ಬೆದರಿದ ಸರಸ್ವತಿ ಶ್ರೀಹರಿಯ ಮೊರೆ ಹೊಕ್ಕಾಗ, ಅವಳು ವಿಷ ಸೇವನೆಗೆಂದು ಸಿದ್ಧ ಪಡಿಸಿದ್ದ ಪಾತ್ರೆಯಲ್ಲಿ ಮೂಗುತಿ ಗೋಚರಿಸುತ್ತದೆ. ಅಚ್ಚರಿಗೊಂಡ ಆಕೆ ಅದನ್ನು ತಂದು ಪತಿಯ ಕೈಯಲ್ಲಿರಿಸಿದಾಗ ತನ್ನ ಕಣ್ಣನ್ನು ತಾನೆ ನಂಬದ ಸ್ಥಿತಿ ತಲುಪಿದ ನಾಯಕ ಪುನಃ ಅಂಗಡಿಗೆ ಬಂದು ನೋಡಲು ಬಡ ಮುದುಕ ಕಾಣೆಯಾಗಿರುತ್ತಾನೆ.

ಈ ಪವಾಡದಿಂದ ಜಾಗೃತಗೊಂಡ ನಾಯಕ ಲೋಭತನವನ್ನು ಬಿಟ್ಟು ದಾನಶೂರ ಕರ್ಣನಂತೆ ತನ್ನ ಸಂಪತ್ತೆಲ್ಲವನ್ನೂ ತೃಣ ಸಮಾನವೆನಿಸಿ ದಂಡಿಗೆ ಬೆತ್ತ ಹಿಡಿದು ಪತ್ನಿಯೊಂದಿಗೆ ಯಾಯಿವಾರದಿಂದ ಬದುಕನ್ನು ಮುನ್ನಡೆಸುತ್ತಾನೆ. ಶ್ರೀವ್ಯಾಸರಾಜರಿಂದ ಪುರಂದರದಾಸ ದೀಕ್ಷೆ ಪಡೆಯುತ್ತಾನೆ.

ಹೀಗಾಗಿ ನೋಡಲಿಕ್ಕೆ **"ಆಕಸ್ಮಿಕ"** ವೆಂದು ಕಂಡು ಬಂದರೂ ದಾಸರ ಭಗವರಾರಾಧನೆಯ ಸಿದ್ಧತೆ ಬಾಲ್ಯದಿಂದಲೆ ನಡೆದಿತ್ತೆಂಬುದು ನಿರ್ವಿವಾದ ಹಾಗೆಂದೇ ಅವರ ಪ್ರತಿಯೊಂದು ಪದವೂ, ಪ್ರತಿಯೊಂದು ಕೀರ್ತನೆಯೂ ಅರ್ಥಗರ್ಭಿತ .

**"ಉಪನಿಷತ್"** ಎಂದರೆ ಗುರು ಮುಖೇನ ಉಪದೇಶ ಪಡೆಯಬೇಕಾದ ರಹಸ್ಯವಿದ್ಯೆ. ಇಲ್ಲಿ 'ರಹಸ್ಯ ' ಪದದ ಅರ್ಥ ಅರ್ಹತೆ ಉಳ್ಳವರು ಮಾತ್ರ ಪಡೆಯಬಹುದಾದ ಜ್ಞಾನ **'ಅರ್ಥಾತ್ ಬ್ರಹ್ಮಜ್ಞಾನ'** ವೈದೀಕದ ಸರ್ವಸಾರವೂ ಇರುವುದು ಉಪನಿಷತ್‌ಗಳಲ್ಲಿಯೇ ಅದು ಇರುವುದು ಸಂಸ್ಕೃತ ಭಾಷೆಯಲ್ಲಿ ನೂರೆಂಟು ಉಪನಿಷತ್‌ಗಳಿವೆಯೆಂದು ಪ್ರಚಲಿತ ವಾಗಿದ್ದರೂ ಅದರಲ್ಲಿ ಹತ್ತು ಉಪನಿಷತ್‌ಗಳು ಪ್ರಸಿದ್ಧ.

ಉಪನಿಷತ್ತಿನ ಭಾಷೆಯೂ ಒಗಟಿನಂತೆಯೇ ಇತಿಹಾಸ ಪುರಾಣಗಳ ಸಮಗ್ರ ಅಧ್ಯಯನವಿಲ್ಲದೆ ಅವುಗಳ ಅಂತರಾರ್ಥ ಗ್ರಹಿಸುವುದು ಕಷ್ಟಕರ ಅಂತಹ ಉಪನಿಷತ್ ರಾಜಮಾರ್ಗಕ್ಕೆ ಮೈಲಿಗಲ್ಲುನಂತಿವೆ ಪುರಂದರರ ಕೀರ್ತನೆಗಳು ಸಂಸ್ಕೃತ ಬಾರದ ಶ್ರೀ ಸಾಮಾನ್ಯನಿಗೆ ಆಧ್ಯಾತ್ಮಿಕ ಮಾರ್ಗದ ದರ್ಶನ ಮಾಡಿಸುವುದು ಮತ್ತು ಆ ದಾರಿಯಲ್ಲಿ ನಡೆದು ಗುರಿ ಮುಟ್ಟಲು ಕೈಮರಗಳನ್ನು ನೀಡುವುದು ಅವರ ಗೀತೆಗಳ ಗುರಿ. ಇದಕ್ಕಾಗಿಯೇ ಅವುಗಳನ್ನು **"ಪುರಂದರೋಪನಿಷತ್"** ಎಂದು ಕರೆಯುವುದು.

# ಮಹಾನ್ ಪತಿವ್ರತೆ ಅನಸೂಯೆ

– ಹನುಮಂತ ಮ. ದೇಶಕುಲಕರ್ಣಿ
94803 64915


ಅನಸೂಯೆ ಕರ್ದಮ ಮುನಿ ಹಾಗೂ ದೇವಹೂತಿಯರ ಮಗಳು. ಅತ್ರಿ ಮಹರ್ಷಿಯ ಹೆಂಡತಿ. ಪರಮ ಪತಿವ್ರತೆ. ಇವಳ ಪಾತಿವ್ರತ್ಯವನ್ನು ಪರೀಕ್ಷಿಸಲು ಬಂದ ತ್ರಿಮೂರ್ತಿಗಳನ್ನು ಮಕ್ಕಳನ್ನಾಗಿಸಿ, ತೊಟ್ಟಿಲಲ್ಲಿಟ್ಟು ತೂಗಿ, ಸರಸ್ವತಿ, ಲಕ್ಷ್ಮೀ, ಪಾರ್ವತಿಯರನ್ನು ಕಂಗಾಲು ಗೊಳಿಸಿದವಳು. ನಂತರ ಅವರನ್ನು ಮೆಚ್ಚಿಸಿ ವರ ಪಡೆದು ತ್ರಿಮೂರ್ತಿಗಳ ಸ್ವರೂಪವಾದ ದತ್ತಾತ್ರೇಯ, ದೂರ್ವಾಸಮುನಿ ಮತ್ತು ಚಂದ್ರ ದೇವರೆಂಬ ಮೂವರು  ಮಕ್ಕಳನ್ನು ಹೆತ್ತಳು.

ಮಧ್ಯಪ್ರದೇಶದ ಸತ್ನಾ ಜಿಲ್ಲೆಯ ಚಿತ್ರಕೂಟ ಎಂಬ ಸಣ್ಣ ಪಟ್ಟಣದಲ್ಲಿ ಮಂದಾಕಿನ ನದಿ ತೀರದ ಸಮೀಪದ ಕಾಡಿನಲ್ಲಿ ಹಳೆಯ ಆಶ್ರಮವನ್ನು ಕಾಣಬಹುದು. ಇದಕ್ಕೆ ಅನಸೂಯ ಆಶ್ರಮ ಎಂದು ಹೆಸರಿದ್ದು, ಇದೇ ಜಾಗದಲ್ಲಿ ಋಷಿ ಅತ್ರಿ ಮತ್ತು ಸತಿ ಅನಸೂಯ ವಾಸಿಸುತ್ತಿದ್ದರು ಎಂದು ಪ್ರತೀತಿ ಇದೆ.

ರಾಮಾಯಣದಲ್ಲಿ ಅನಸೂಯಳ ಬಗ್ಗೆ ಉಲ್ಲೇಖವಿದೆ. ರಾಮ, ಸೀತೆ ಮತ್ತು ಲಕ್ಷ್ಮಣರು ವನವಾಸದಲ್ಲಿದ್ದ ಸಂದರ್ಭದಲ್ಲಿ ತನ್ನ ಪತಿಯೊಂದಿಗೆ ಅನಸೂಯ ಚಿತ್ರಕೂಟದ ಕಾಡಿನಲ್ಲಿ ಒಂದು ಸಣ್ಣ ಗುಡಿಸಿಲಿನಲ್ಲಿ ವಾಸವಿದ್ದಾಗ ಭೇಟಿ ನೀಡಿದ್ದರು ಎಂದು ನಂಬಲಾಗಿದೆ. ಶ್ರೀ ರಾಮನ ಅರಣ್ಯವಾಸದಲ್ಲಿ ಸೀತೆಗೆ ಈಕೆ ಮಾಂಗಲ್ಯವೃದ್ಧಿಯ ಧರ್ಮರಹಸ್ಯಗಳನ್ನು ತಿಳಿಸಿದಳು. ಅನಸೂಯಳು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರಿಗೆ ಸಮಾನವಾಗಿರುವ ಮಗನಿಗಾಗಿ ಹರಿಸಿಕೊಂಡಾಗ, ದೇವತೆಗಳಾದ ಸರಸ್ವತಿ, ಲಕ್ಷ್ಮಿ ಮತ್ತು ಪಾರ್ವತಿ ತಮ್ಮ ಪತಿಗಳಿಗೆ ವರವನ್ನು ನೀಡುವ ಮೊದಲು ಅನಸೂಯಳ ಪತಿವ್ರತಾ ಧರ್ಮವನ್ನು ಪರೀಕ್ಷಿಸಿ, ನಿರ್ವಾಣ ಭಿಕ್ಷೆಯನ್ನು ಕೋರುವಂತೆ ಸೂಚಿಸಿದರು. ತ್ರಿಮೂರ್ತಿಗಳು ಜ್ಞಾನ-ದೃಷ್ಟಿ ಮೂಲಕ ಎಲ್ಲವನ್ನೂ ಅರಿತು ಇದಕ್ಕೆ ಒಪ್ಪಿಕೊಂಡರು.

ಆ ಸಾಧ್ವಿ ಅನಸೂಯ ಪತಿಸೇವಾ ಪರಾಯಣಳು. ಆಕೆಯ ಮಹಿಮೆಯನ್ನರಿತ ಇಂದ್ರಾದಿ ದೇವತೆಗಳು ಆಕೆಯಿಂದ ತಮಗೆ ಸ್ವರ್ಗವನ್ನು ಹರಣವಾಗುವುದೇನೋ ಎಂದು ಹೆದರಿ ತ್ರಿಮೂರ್ತಿಗಳಲ್ಲಿ ಶರಣು ಬೇಡಿ, ಆ ಸಾಧ್ವೀಮಣಿಯ ಮಹಿಮೆಯನ್ನು ನಿವೇದಿಸಿದರು. ಇಂದ್ರನಾಡಿದ ಮಾತುಗಳನ್ನು ಕೇಳಿ ತ್ರಿಮೂರ್ತಿಗಳು ಕೃದ್ಧರಾಗಿ, ಆಹಾ, ಆ ಪತಿವ್ರತೆ ಅಂತಹ ಮಹಿಮಾನ್ವಿತಳೇ? ನಾವು ಈಗಲೇ ಹೋಗಿ, ಆಕೆಯ ವ್ರತಭಂಗ ಮಾಡುವೆವು. ನೀವು ಹೋಗಿ ಎಂದು ದೇವತೆಗಳನ್ನು ಕಳುಹಿಸಿಕೊಟ್ಟರು.


ತಕ್ಷಣವೇ ಅತ್ರಿ ಮಹರ್ಷಿಯ ಆಶ್ರಮಕ್ಕೆ ಅತಿಥಿಗಳ ರೂಪದಲ್ಲಿ ಬಂದರು. ಆಗ ಅತ್ರಿಮುನಿ ಅನುಷ್ಠಾನಕ್ಕೆಂದು ನದಿಗೆ ಹೋಗಿದ್ದರು. ಆ ಅತಿಥಿ ವೇಷದಲ್ಲಿ ಬಂದ ಮೂವರೂ ಆಶ್ರಮ ಪ್ರವೇಶ ಮಾಡಿ, ಅನಸೂಯಾದೇವಿಯನ್ನು ಕಂಡು, "ಹೇ ಮಾತೆ, ನಾವು ಹಸಿದುಕೊಂಡು ಬಂದಿದ್ದೇವೆ. ಬೇಗ ನಮಗೆ ಅನ್ನವನ್ನು ನೀಡು. ಅನ್ನ ನೀಡಲು ಸಾಧ್ಯವಿಲ್ಲದಿದ್ದರೆ ಹೇಳು. ನಾವು ಇನ್ನೆಲ್ಲಿಯಾದರೂ ಹೋಗುತ್ತೇವೆ. ಪ್ರತಿನಿತ್ಯವೂ ನಿಮ್ಮ ಈ ಆಶ್ರಮದಲ್ಲಿ ಅತಿಥಿಗಳಿಗೆ ಅದ್ದೂರಿಯಾದ ಅತಿಥ್ಯ ನಡೆಯುತ್ತದೆ ಎಂಬ ಕೀರ್ತಿ ಕೇಳಿ, ನಾವು ಕೋರಿದ ಹಾಗೆ ಅತಿಥ್ಯ ದೊರೆಯುತ್ತದೆ ಎಂಬ ಆಸೆಯಿಂದ ಬಹಳ ದೂರದಿಂದ ಬಳಲಿ ಇಲ್ಲಿಗೆ ಬಂದಿದ್ದೇವೆ." ನೀನು ಅತಿಥಿ ಪರಾಯಣಳು ಎಂಬ ನಿನ್ನ ಯಶಸ್ಸನ್ನು ಬಹಳವಾಗಿ ಕೇಳಿದ್ದೇವೆ, ಎಂದು ಹೇಳಿದರು. ಅವರು ಹೇಳಿದ್ದನ್ನೂ ಕೇಳಿ ಅನಸೂಯಾ ಮಾತೆ, ಅವರಿಗೆ ನಮಸ್ಕರಿಸಿ, ಅವರ ಪಾದಗಳನ್ನು ತೊಳೆದು, ಪೀಠಗಳ ಮೇಲೆ ಕೂಡಿಸಿ, ಅರ್ಘ್ಯ ಕೊಟ್ಟು, ಗಂಧ ಪುಷ್ಪಾದಿಗಳಿಂದ ಪೂಜಿಸಿ, ನೀವು ನಿಮ್ಮ ಆಹ್ನಿಕವನ್ನು ಮುಗಿಸಿ, ಅಷ್ಟರಲ್ಲಿ ನಾನು ನಿಮ್ಮ ಭೋಜನಕ್ಕೆ ಏರ್ಪಾಡು ಮಾಡುತ್ತೇನೆ ಎಂದಳು. ಅದಕ್ಕೆ ಆ ವೇಷಧಾರಿಗಳು, ಮಹರ್ಷಿಗಳು ಅನುಷ್ಠಾನಕ್ಕೆ ಹೋಗಿರುವಂತೆ ಕಾಣುತ್ತದೆ. ಅವರು ಬರುವುದು ತಡವಾಗಬಹುದು ನಮಗೆ ಈಗಲೇ ಭೋಜನವಿಡು ಎಂದರು.



ಅದಕ್ಕೆ ಒಪ್ಪಿ ಆಕೆ ಅವರನ್ನು ಭೋಜನಗೃಹಕ್ಕೆ ಕರೆದು ಕೊಂಡು ಹೋಗಿ, ಆಸನಗಳನ್ನು ಕೊಟ್ಟು, ಎಲೆ, ಹಾಕಿ, ರಂಗೋಲಿ ಯಿಟ್ಟು ಅನ್ನವನ್ನು ಬಡಿಸಲು ಸಿದ್ಧಳಾದಳು. ಆಗ ಅತಿಥಿವೇಷ ದಲ್ಲಿದ್ದ ತ್ರಿಮೂರ್ತಿಗಳು, ಹೇ ಸಾಧ್ವಿಮಣಿ, ನೀನು ನಮ್ಮ ಅಭೀಷ್ಟ ವನ್ನು ಪಾಲಿಸುವುದಾದರೆ ನಮ್ಮ ಯಾಚನೆಯನ್ನೂ ಪಾಲಿಸಬೇಕು. ಅದೇನೆಂದರೆ ನೀನು ದಿಗಂಬರೆಯಾಗಿ ನಮಗೆ ಅನ್ನವನ್ನು ಬಡಿ ಸಬೇಕು. ಅದು ಸಾಧ್ಯವಾಗದಿದ್ದರೆ ಹೇಳು ನಾವು ಮತ್ತೊಂದೆಡೆಗೆ ಹೋಗುತ್ತೇವೆ ಎಂದರು. ಅನಸೂಯ ಸನ್ಯಾಸಿಗಳ ಬೇಡಿಕೆ ಯನ್ನು ತಿರಸ್ಕರಿಸಲೂ ಆಗದೆ, ಪತಿವ್ರತಾ ಧರ್ಮವನ್ನು ಮುರಿ ಯಲೂ ಆಗದೆ ಸಂದಿಗ್ಧ ಸ್ಥಿತಿಯಲ್ಲಿದ್ದಾಗ,ತನ್ನ ಪತಿಯನ್ನು ಧ್ಯಾನಿಸಿ, ಮೂರೂ ಸನ್ಯಾಸಿಗಳ ಮೇಲೆ ನೀರನ್ನು ಪ್ರೋಕ್ಷಿಸಿ ಅವರನ್ನು ಶಿಶು ಗಳನ್ನಾಗಿ ಮಾರ್ಪಾಡು ಮಾಡಿದಳು. ಈ ಮೂರು ಮಕ್ಕಳನ್ನು ತನ್ನ ಸ್ವಂತ ಮಕ್ಕಳು ಎಂದು ಭಾವಿಸಿ ಶಿಶುಗಳಿಗೆ ಎದೆಹಾಲು ನೀಡಿದಳು. ಇತ್ತ ತ್ರಿಲೋಕ ಸಂಚಾರಿಯಾದ ನಾರದಮುನಿಯು ಸರಸ್ವತಿ, ಲಕ್ಷ್ಮಿ ಮತ್ತು ಪಾರ್ವತಿಯರಿಗೆ ತಮ್ಮ ಪತಿಯರು ಅನಸೂಯಳ ಪತಿವ್ರತಾ ಶಕ್ತಿಯಿಂದ ಹಸುಳೆಗಳಾಗಿ ಪರಿವರ್ತನೆಯಾದ ವಿಷಯ ವನ್ನು ತಿಳಿಸಿದರು, ಮತ್ತೆ ಅವರು ವಾಪಸ್ಸು ಬರಬೇಕಾದರೆ ನೀವು ಅನಸೂಯಳ ಬಳಿ ಪತಿಭಿಕ್ಷೆ ಕೇಳಬೇಕು. ಇಲ್ಲದಿದ್ದರೆ ಅವರು ವಾಪಸ್ಸು ಬರಲು ಸಾಧ್ಯವಿಲ್ಲ ಎಂದು ಹೇಳಿದರು. ಮೂವರು ಪತ್ನಿಯರು ಅನಸೂಯಳ ಮುಂದೆ ಪ್ರತ್ಯಕ್ಷರಾಗಿ ಪತಿಭಿಕ್ಷೆ ಬೇಡಿದರು. ಅನಸೂಯ ಒಪ್ಪುತ್ತಾಳೆ ಆದರೆ ತನ್ನ ಪುತ್ರೇಷ್ಟವನ್ನು ಪೂರೈಸುವಂತೆ ಕೇಳಿಕೊಳ್ಳುತ್ತಾಳೆ. ನಂತರ, ತಮ್ಮ ಮೂಲ ಸ್ವರೂ ಪಕ್ಕೆ ಹಿಂದಿರುಗಿದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ತೆರಳುವ ಮೊದಲು ತಮ್ಮ ತಾಯಿಯಾದ ಅನಸೂಯಳೊಂದಿಗಿರಲು ದತ್ತಾತ್ರೇಯ ರೂಪವನ್ನು (ಏಕೈಕ ರೂಪವನ್ನು) ಪಡೆದು ಕೊಂಡರು.ಹೀಗೆ ಮಹಾಸತಿ ಅನಸೂಯ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಈ ಮೂವರಿಗೆ ಸಮನಾದ ದತ್ತಾತ್ರೇಯನ ತಾಯಿಯಾಗುತ್ತಾಳೆ.

ಪ್ರಜ್ಞಾವಂತರಾದ ಚಂದ್ರ ದೂರ್ವಾಸರು ತಮ್ಮ ಗೃಹ ವನ್ನು ಬಿಟ್ಟು ಹೋಗಲು ನಿಶ್ಚಯಿಸಿ, ತಮ್ಮ ಮಾತೆಯಾದ ಅನ ಸೂಯೆಯ ಅನುಮತಿ ಬೇಡಿದರು. ದೂರ್ವಾಸ, ಅಮ್ಮ ನಾನು ತಪಸ್ಸನ್ನು ಆಚರಿಸುತ್ತಾ ತೀರ್ಥ ಪರ್ಯಟನೆ ಮಾಡ ಬೇಕೆಂದಿದ್ದೇನೆ ಎಂದು ಅನುಜ್ಞೆ ಪಡೆದರು.ಅದೇ ರೀತಿ ಚಂದ್ರನು ಸಹ ಚಂದ್ರಮಂಡಲದಲ್ಲಿ ನೆಲೆಸುತ್ತೇನೆ ನನ್ನ ದರ್ಶನ ನಿನಗೆ ನಿತ್ಯವೂ ಆಗುತ್ತದೆ ದುಃಖಿಸಬೇಡ ಎಂದು ಹೇಳಿ ಈ ಶ್ರೀದತ್ತ ತ್ರಿಮೂರ್ತಿ ಸ್ವರೂಪನು ನಿಮ್ಮೊಡನೆ ಸದಾ ಕಾಲವೂ ಇರುತ್ತಾನೆ.

ನಿಮಗೆ ಅವನ ವಿಯೋಗವಿರುವುದಿಲ್ಲ. ನಿಮ್ಮ ಚಿತ್ತಾನು ಸಾರವಾಗಿ ಶ್ರೀದತ್ತನು ನಿಮ್ಮೊಡನಿರುತ್ತಾನೆಂದು ಹೇಳಿ, ಚಂದ್ರನು ಮಾತೆಯ ಅಪ್ಪಣೆ ಪಡೆದು ಚಂದ್ರಮಂಡಲ ಸೇರಿ ದನು. ಚಂದ್ರನು ಹೇಳಿದಂತೆ ಶ್ರೀದತ್ತನು ತನ್ನ ತಾಯಿಯೊ ಡನೆ ಗೃಹದಲ್ಲೇ ನಿಂತನು.




**ಪುಸ್ತಕ ಪರಿಚಯ:** ಮಕ್ಕಳಿಗಾಗಿ ಭಾಗವತದಿಂದ ಆಯ್ದ ಕಥೆಗಳು

**ಲೇಖಕರು :** ಬೇಲೂರು ರಾಮಮೂರ್ತಿ

**ಪ್ರಕಾಶಕರು :** ಸಪ್ನಬುಕ್‌ಹೌಸ್, ಬೆಂಗಳೂರು

**ಮಕ್ಕಳು ತಾವೇ ಓದಿ ಸುಲಭವಾಗಿ ಅರ್ಥ ಮಾಡಿಕೊಳ್ಳುವಂಥಾ ಸುಲಭವಾದ ಭಾಷೆಯಲ್ಲಿ ಬರೆದಿರುವ ಈ ಗ್ರಂಥದಲ್ಲಿ ನಾರದರ ಕಥೆಯಿಂದ ಆರಂಭವಾಗಿ ಭಕ್ತದೈವ, ಅಜಮಿಳ, ಭಕ್ತ ಪ್ರಹ್ಲಾದ, ಗಜೇಂದ್ರ ಮೋಕ್ಷ, ವಾಮನಾವತಾರ, ಮತ್ಸ್ಯಾವ ತಾರ, ಗೋವರ್ಧನ ಗಿರಿ ದಾರಿ ಮುಂತಾದ 60 ಕಥೆಗಳನ್ನು ಅಳವಡಿಸಲಾಗಿದೆ. ಒಂದೊಂದು ಕಥೆ ಯನ್ನು ದೊಡ್ಡವರೂ ಮಕ್ಕಳಿಗೆ ಓದಿ ಹೇಳಬಹುದು. ಮಕ್ಕಳೂ ತಾವೇ ಓದಬಹುದು. ವಿದ್ಯಾವಾಚಸ್ಪತಿ ಡಾ॥ ಅರಳುಮಲ್ಲಿಗೆ ಪಾರ್ಥಸಾರಥಿಯವರ ಮುನ್ನುಡಿ ಗ್ರಂಥಕ್ಕೆ ಶಿಖರಪ್ರಾಯವಾಗಿದೆ. ಪ್ರತಿ ಯೊಬ್ಬರ ಮನೆಯಲ್ಲೂ ಇರಬೇಕಾದ ಗ್ರಂಥ ಮಕ್ಕಳಿಗಾಗಿ ಭಾಗವತದಿಂದ ಆಯ್ದ ಕಥೆಗಳು.**



# ಉಮ್ಮತ್ತೂರಿನ ಶ್ರೀ ರಂಗನಾಥ ಮತ್ತು ಸುಮುಖ ಆಂಜನೇಯ ದೇವಾಲಯ

50

– ಕೆಂಗೇರಿ ಚಕ್ರಪಾಣಿ
94483 86886

ಚಾಮರಾಜನಗರ ಜಿಲ್ಲೆಯ, ಅದೇ ತಾಲ್ಲೂಕಿನ, ನಂಜನಗೂಡು ಕೊಳ್ಳೆಗಾಲ ರಸ್ತೆಯಲ್ಲಿ ಯಳಂದೂರಿನಿಂದ 14 ಕಿ.ಮೀ. ಹಾಗೂ ಚಾಮರಾಜನಗರದಿಂದ 28 ಕಿ.ಮೀ.ದೂರದಲ್ಲಿರುವ ಗ್ರಾಮ ಉಮ್ಮತ್ತೂರು. ಇದು ವಿಜಯನಗರಸರ ಕಾಲದಲ್ಲಿ ಉಮ್ಮತ್ತೂರಿನ ಅರಸರ ಆಡಳಿತಕ್ಕೊಳಪಟ್ಟಿತ್ತು.

ವಿಜಯನಗರಸರ ಕಾಲದಲ್ಲಿದ್ದ, ಉಮ್ಮತ್ತೂರು ದೊರೆಗಳು ಚಾಮರಾಜನಗರ ಜಿಲ್ಲೆ, ನಂಜನಗೂಡು ತಾಲ್ಲೂಕು, ತಮಿಳುನಾಡಿನ ಕೊಯಂಬತ್ತೂರು ಜಿಲ್ಲೆ ಮುಂತಾದ ಸ್ಥಳಗಳಲ್ಲಿ ಆಡಳಿತ ನಡೆಸಿದ್ದರು. ಈ ವಂಶದ ಮೂಲಪುರುಷ ಹನುಮಂತ ಒಡೆಯ. ವಿಜಯನಗರದ ದೊರೆ ಕೃಷ್ಣದೇವರಾಯನು ತನ್ನ ಆಡಳಿತ ಅವಧಿಯ ಪ್ರಾರಂಭದಲ್ಲಿ ಇಲ್ಲಿಯ ನಾಯಕ ಗಂಗರಾಜನನ್ನು ನಿಗ್ರಹಿಸಿದನೆಂದು ತಿಳಿದುಬರುತ್ತದೆ. ಈಗಲೂ ಇಲ್ಲಿ ಕೆಲವು ಕಡೆ ಕೋಟೆಯ ಅವಶೇಷಗಳಿವೆ ಹಾಗೂ ಅರಮನೆ ಸ್ಥಳ ಎಂದು ಹೇಳುವ ಪ್ರದೇಶವು ಕಂಡುಬರುತ್ತದೆ. ಉಮ್ಮತ್ತೂರಿನಲ್ಲಿ ಹಲವು ದೇವಾಲಯಗಳಿವೆ. ಪ್ರಮುಖವಾಗಿ ಭುಜಂಗೇಶ್ವರ, ರಂಗನಾಥ, ಸುಮುಖ ಆಂಜನೇಯ, ವೀರಭದ್ರ, ಸಪ್ತಮಾತೃಕಾ, ಮಹಾವೀರ ತೀರ್ಥಂಕರರ ಬಸದಿ ಮುಂತಾದ ದೇವಾಲಯಗಳಿವೆ. ರಂಗನಾಥ ದೇವಾಲಯ-ಉಮ್ಮತ್ತೂರಿನ ಪ್ರಮುಖ ದೇವಾಲಯವು ಭುಜಂಗೇಶ್ವರ ದೇವಾಲಯದ ಸಮೀಪದಲ್ಲಿಯೇ ಇದ್ದು ಪೂರ್ವಾಭಿಮುಖವಾಗಿದೆ. ವಿಜಯನಗರಸರ ಕಾಲದಲ್ಲಿ ನಿರ್ಮಿತವಾಗಿರುವ ಈ ದೇವಾಲಯವು ಹೊಯ್ಸಳ ಶೈಲಿಯಂತೆ ತ್ರಿಕೂಟಾಚಲವಾಗಿರುವುದು ಗಮನಾರ್ಹ. ಈ ದೇವಾಲಯವು ಮೂರು ಗರ್ಭಗೃಹ, ನವರಂಗ, ಸಣ್ಣ ತೆರೆದ ಮಂಟಪ, ಪ್ರವೇಶ ದ್ವಾರ ಹಾಗೂ ಸುತ್ತಲೂ ಬೃಹತ್ ಗೋಡೆಗಳನ್ನೊಳಗೊಂಡಿದೆ. ಈ ದೇವಾಲಯದ ಪ್ರಧಾನ ಗರ್ಭಗುಡಿಯಲ್ಲಿ ಸರ್ಪಶಯನನಾಗಿರುವ ರಂಗನಾಥನು ಶ್ರೀದೇವಿ, ಭೂದೇವಿಸಹಿತನಾಗಿರುವನು. ಈ ದೇವಾಲಯದ ದಕ್ಷಿಣ ಗರ್ಭಗುಡಿಯಲ್ಲಿರುವ ನವನೀತಕೃಷ್ಣನ ಮೂರ್ತಿಯು ವಿಜಯನಗರದ ಕಾಲದ ಶ್ರೇಷ್ಠ ಕಲಾಕೃತಿ. ಸುಮಾರು ನಾಲ್ಕು ಅಡಿ ಎತ್ತರವಿರುವ ಸ್ವಾಮಿಯ ಬಲಗೈಯಲ್ಲಿ ಬೆಣ್ಣೆಯ ಉಂಡೆಯನ್ನು ಹಿಡಿದಿದ್ದು ಸೌಮ್ಯವದನನಾಗಿರುವನು. ಈ ದೇವಾಲಯದ ಉತ್ತರ ಗರ್ಭಗುಡಿಯಲ್ಲಿ ರಂಗನಾಯಕಿ







ಅಮ್ಮನವರ ಪುತ್ಥಳಿಯಿದೆ. ಈ ದೇವಾಲಯದ ದೀಪಸ್ತಂಭದಲ್ಲಿರುವ ಭಕ್ತನ ವಿಗ್ರಹವನ್ನು, ಆತನು ಧರಿಸಿರುವ ದಿರಿಸಿನಿಂದ, ದೇವಾಲಯದ ಸ್ಥಾಪಕ ನಾದ ಉಮ್ಮತ್ತೂರಿನ ದೊರೆಯಿರಬಹುದೆಂದು ನಿರ್ಧರಿಸಬಹುದು. ಉಮ್ಮತ್ತೂರಿನ ರಂಗನಾಥ ಮತ್ತು ಮಹಾವೀರ ತೀರ್ಥಂಕರರ ಬಸದಿಯನ್ನು ಸ್ಥಳೀಯರ ನೆರವಿನಿಂದ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್‌ನಿಂದ ಮೂಲ ಸ್ವರೂಪಕ್ಕೆ ದಕ್ಕೆ ಬಾರದಂತೆ ಜೀರ್ಣೋದ್ಧಾರ ಮಾಡಲಾಗಿದೆ.

**ಸುಮುಖ ಆಂಜನೇಯ ದೇವಾಲಯ :**

ಉಮ್ಮತ್ತೂರಿನ ಮುಖ್ಯ ರಸ್ತೆಯಲ್ಲಿ ಆಂಜನೇಯ ದೇವಾಲಯವಿದೆ. ದೇವಾಲಯವು ಹೊರನೋಟಕ್ಕೆ ಸಾಧಾರಣ ದೇವಾಲಯದಂತೆ ಕಂಡರೂ, ಒಳಗಿರುವ ಮಾರುತಿಯ ಮೂರ್ತಿಯು ಬಹಳ ನಯನ ಮನೋಹರವಾಗಿ ವಿಶೇಷವಾಗಿದೆ. ಮಾರುತಿಯು ಪಾರ್ಶ್ವಕ್ಕೆ ತಿರುಗಿದಂತಿರದೆ, ನೇರವಾಗಿ ಮುಖಮಾಡಿ ನಿಂತಿರುವನು. ಮಾರುತಿಯು ನಗು ಮುಖದಲ್ಲಿದ್ದು ಹೆಸರಿಗೆ ಅನ್ವರ್ಥವಾಗಿದೆ. ಈ ಅಪರೂಪದ ಆಂಜನೇಯನ ಮೂರ್ತಿಯು ಬಹಳಷ್ಟು ಭಕ್ತಾದಿಗಳಿಗೆ ತಮ್ಮ ಮನೋಭಿಲಾಷೆಯನ್ನು ಈಡೇರಿಸುವ ದೈವನಾಗಿರುವನು.

ಉಮ್ಮತ್ತೂರಿನ ದೇವಾಲಯಗಳಲ್ಲಿಯೇ ಪ್ರಾಚೀನ ದೇವಾಲಯ ಭುಜಂಗೇಶ್ವರ ದೇವಾಲಯವಾಗಿರುವುದು. ದೇವಾಲಯವು ಮೂಲತಃ 10-11 ನೆಯ ಶತನಮಾನದ ಗಂಗರ ಕಾಲದ ದೇವಾಲಯವಾಗಿದ್ದು, ಉಮ್ಮತ್ತೂರು ಒಡೆಯರ ಕಾಲದಲ್ಲಿ ಬೃಹದಾಕಾರವಾಗಿ ವಿಸ್ತರಣೆಗೊಂಡಿದೆ. ದೇವಾಲಯದ ಪ್ರಧಾನ ಗರ್ಭಗುಡಿಯಲ್ಲಿ ಭುಜಂಗೇಶ್ವರ ಲಿಂಗವಿದೆ. ನವರಂಗದಲ್ಲಿ ಹತ್ತನೆಯ ಶತಮಾನಕ್ಕೆ ಸೇರುವ ಸೂರ್ಯ ಕಾಲಭೈರವ, ಕಾಲೀಯ ಮರ್ದನ ಕೃಷ್ಣರ ಸೊಗಸಾದ ಮೂರ್ತಿಗಳಿವೆ.

ನವರಂಗದಲ್ಲಿ ನಾಲ್ಕು ದುಂಡಾದ (ರುದ್ರಕಾಂತ) ಕುಬ್ಜ ಕಂಬಗಳಿವೆ. ಕಂಬಗಳ ಬುಡಗಳು ಚೌಕಾಕಾರದಲ್ಲಿದ್ದು, ಅಲ್ಲಿ ಸುಂದರಕಾಂಡ ರಾಮಾಯಣದ ದೃಷ್ಯಗಳನ್ನು ಚಿತ್ರಿಸಲಾಗಿದೆ.

ಈ ದೇವಾಲಯದ ಹಿಂಬದಿಯ ಪ್ರಾಕಾರ ಮಂಟಪದಲ್ಲಿ ಆರು ಶಿವ ಲಿಂಗಗಳಿದ್ದು, ಅದರಲ್ಲಿ ಒಂದು ಶಿವಲಿಂಗವು ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ಶಿವಲಿಂಗದ ಶಿರೋಭಾಗದಲ್ಲಿ ಜಟೆಯಿದ್ದು ಅದರ ಮೇಲೆ ಚತುರ್ಭುಜಳಾದ ಗಂಗೆಯು ಆಸೀನಳಾಗಿರುವಳು.

ಈ ದೇವಾಲಯಕ್ಕೆ ಹೊಂದಿಕೊಂಡಂತೆ ಪಾರ್ವತಿ ಅಮ್ಮನವರು ಮತ್ತು ಸುಬ್ರಹ್ಮಣ್ಯ ಗುಡಿಗಳಿವೆ. ಈ ದೇವಾಲಯವನ್ನು ಬೆಂಗಳೂರಿನ ಶ್ರೀ ವಿಭೂ ಆಕೆಡಮಿಯವರು ಮೂಲ ಸ್ವರೂಪದಂತೆ ಜೀರ್ಣೋದ್ಧಾರ ಮಾಡಿ ಇತ್ತೀಚೆಗೆ ಲೋಕಾರ್ಪಣೆ ಮಾಡಿರುವುದು ಅಭಿನಂದನೀಯ.

**ಹೀಗೆ ಬನ್ನಿ :**

ಚಾಮರಾಜನಗರ ಜಿಲ್ಲೆ, ಅದೇ ತಾಲ್ಲೂಕಿನಲ್ಲಿರುವ ಉಮ್ಮತ್ತೂರು ಗ್ರಾಮವನ್ನು ಯಳಂದೂರು, ನಂಜನಗೂಡು. ಟಿ. ನರಸೀಪುರ ಜಿಲ್ಲಾ ಕೇಂದ್ರದಿಂದ ಸುಲಭವಾಗಿ ಸೇರಬಹುದು. ನಂಜನಗೂಡು-ಕೊಳ್ಳೆಗಾಲ ರಸ್ತೆಯಲ್ಲಿರುವ ಉಮ್ಮತ್ತೂರನ್ನು ನಂಜನಗೂಡಿನ ಕಡೆಯಿಂದ ಬರುವ ಪ್ರವಾಸಿಗರು ನಂಜನಗೂಡು ಚಾಮರಾಜನಗರ ರಸ್ತೆಯಲ್ಲಿ ಸುಮಾರು 15 ಕಿ.ಮೀ. ದೂರಬಂದರೆ ಕೌಲಂದೆ ಎಂಬ ಗ್ರಾಮ ಸಿಗುತ್ತದೆ.

ಇಲ್ಲಿ ಎಡಕ್ಕೆ ತಿರುಗಿ, ಚುಂಚನಹಳ್ಳಿ, ಹನುಮಪುರ ಮುಖಾಂತರ ಉಮ್ಮತ್ತೂರಿಗೆ ಬರಬಹುದು. (ಒಟ್ಟು ದೂರ 32 ಕಿ.ಮೀ.) ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ಉಮ್ಮತ್ತೂರು 28 ಕಿ.ಮೀ. ದೂರದಲ್ಲಿದೆ.

# ಮಹಾತಪಸ್ವಿನಿ ವೃದ್ಧ ಕನ್ಯಾ

- ಡಾ॥ ವಾಣಿಶ್ರೀ ಬಿ.ಎಂ.
9480322475

ಭಾರತೀಯರ ನೆಚ್ಚಿನ ಮಹಾಕಾವ್ಯ ಮಹಾಭಾರತವು ಧರ್ಮಮಯವಾದ ಸಂಸ್ಕೃತಿಯ ದರ್ಶನವನ್ನು ಮೂಡಿಸುತ್ತದೆ. ಇದರ ಮಹಿಮೆ ಅಪಾರವಾದುದು. ಅಜ್ಞಾನದ ಕತ್ತಲೆಯಿಂದ ಹಾದಿ ಕಾಣದೇ ಬಳಲುವ ಜನರಿಗೆ ದಾರಿ ತೋರುವ ದಿವ್ಯ ಜ್ಯೋತಿ. ಇಂತಹ ಮಹಾಭಾರತದಲ್ಲಿ ಇರುವಂತಹದ್ದು ಬೇರೆಡೆಯೂ ಇರಬಹುದು ಆದರೆ ಇಲ್ಲಿ ಇಲ್ಲದ್ದು ಬೇರೆಲ್ಲಿಯೂ ಇಲ್ಲ. ಈ ಮಹತ್ಕೃತಿಯ ತವರಾದ ಪುಣ್ಯಭೂಮಿ ಭಾರತದಲ್ಲಿ ಹಲವಾರು ತೀರ್ಥ ಕ್ಷೇತ್ರಗಳಿವೆ. ಬಲರಾಮನು ತೀರ್ಥಕ್ಷೇತ್ರ ಪರ್ಯಟನೆ ಮಾಡುತ್ತಾ ಬರುವಾಗ ಅನೇಕ ತೀರ್ಥಗಳನ್ನು ಸಂದರ್ಶಿಸುತ್ತಾನೆ. ಅವುಗಳ ಮಹಿಮೆಯನ್ನು ಮಹಾಭಾರತದಲ್ಲಿ ವಿವರಿಸಲಾಗಿದೆ. ಅಂತಹ ಒಂದು ಪುಣ್ಯಕ್ಷೇತ್ರದಲ್ಲಿ ವೃದ್ಧಕನ್ಯೆ ಎಂಬ ತಪಸ್ವಿನಿಯಿದ್ದಳು. ಮಹಾಭಾರತದ ಶಲ್ಯ ಪರ್ವದಲ್ಲಿ ಬರುವ ವೃದ್ಧ ಕನ್ಯೆ ವಿಚಾರವನ್ನು ಜನಮೇಜಯನಿಗೆ ವೈಶಂಪಾಯನರು ಹೇಳುತ್ತಾರೆ. ಹಿಂದೆ ಯಶೋವಂತನಾದ ಕುಣಿಗರ್ಗ ಎಂಬ ಹೆಸರಿನ ಋಷಿಯಿದ್ದನು. ತಪಸ್ವಿಗಳಲ್ಲಿ ಶ್ರೇಷ್ಠನಾದ ಆ ಮಹರ್ಷಿಯು ತನ್ನ ಮನಃ ಸಂಕಲ್ಪದಿಂದಲೇ ಕಡು ಚೆಲುವೆಯಾದ ಮಗಳನ್ನು ಸೃಷ್ಟಿಸಿದನು. ಕಮಲದಳನಯನೆಯಾಗಿ ಸುಂದರ ಹುಬ್ಬುಗಳು ಹೊಂದಿದ್ದ, ನಿಷ್ಕಳಂಕಳಾದ ಅವಳಿಗೆ ವಿವಾಹ ಮಾಡಿಸಲು ಕುಣಿಗರ್ಗನು ಯತ್ನಿಸಿದರೂ ಅವಳು ತಪಸ್ಸಿನಲ್ಲಿ ಹೆಚ್ಚು ಆಸಕ್ತಿಯುಳ್ಳವಳಾದ ಕಾರಣ ವಿವಾಹವನ್ನು ನಿರಾಕರಿಸಿದಳು. ಕೆಲಕಾಲಾನಂತರ ಕುಣಿಗರ್ಗನು ಶರೀರವನ್ನು ತ್ಯಜಿಸಿ ಸ್ವರ್ಗ ಲೋಕಕ್ಕೆ ಹೊರಟು ಹೋದನು. ನಂತರ ಕನ್ಯೆಯು ಒಂದು ಆಶ್ರಮವನ್ನು ಮಾಡಿಕೊಂಡು ಉಗ್ರ ತಪಸ್ಸಿನಿಂದ ಉಪವಾಸ ವ್ರತಾದಿ ನೇಮಗಳಿಂದ ಪಿತೃಗಳನ್ನು ಸುಪ್ರೀತಗೊಳಿಸುತ್ತಿದ್ದಳು.

ಉಗ್ರವಾದ ತಪಸ್ಸಿನಲ್ಲಿ ನಿರತಳಾದ ಆ ಕನ್ಯೆಯು ತನಗೆ ಅನುರೂಪನಾದ ವರನು ದೊರೆಯಲಾರನು ಎಂದು ಚಿಂತಿಸಿ ಆ ಕಾರಣದಿಂದ ಕನ್ಯೆಯಾಗಿಯೇ ಉಳಿದಳು. ಕಠೋರವಾದ ತಪಸ್ಸಿನಿಂದ ಆಕೆ ಬಳಲಿ ಹೋದಳು. ದಿನ ಕಳೆದಂತೆ ವೃದ್ಧಾಪ್ಯ ಆವರಿಸಿ ಕೃಶಳಾಗಿ ಹೋದಳು. ಇತರರ ಸಹಾಯವಿಲ್ಲದೆ ನಡೆಯಲೂ ಆಗದ ಸ್ಥಿತಿ ತಲುಪಿ ಆಕೆ ಪರಲೋಕಕ್ಕೆ ಹೋಗಬೇಕೆಂದು ನಿಶ್ಚಯಿಸಿ ದೇಹ ತ್ಯಾಗಕ್ಕೆ ಮುಂದಾದಳು. ಆಗ ನಾರದರು ಅವಳನ್ನು ಕುರಿತು ವಿವಾಹ ಸಂಸ್ಕಾರವಿಲ್ಲದೆ ಕನ್ಯೆಯಾಗಿಯೇ ಉಳಿದಿರುವ ಅವಳಿಗೆ ಪುಣ್ಯಲೋಕಗಳು ಲಭಿಸಲಾರವು ಎಂದರು. ದೇವಲೋಕದಲ್ಲಿ ಆಕೆಯ ವಿಚಾರ ತಾವು ಕೇಳಿರುವುದಾಗಿ ಹೇಳಿ ಅಪಾರ ತಪಸ್ಸು ಮಾಡಿ ಪುಣ್ಯ ಸಂಪಾದಿಸಿದರೂ ವಿವಾಹವಾಗದೆ ಉತ್ತಮ ಲೋಕಗಳು ದೊರೆಯವು ಎಂದರು ಅದನ್ನು ಕೇಳಿ ಆ ಋಷಿಕನ್ಯೆಯು ತಪಸ್ವಿಗಳ ಸಮ್ಮುಖದಲ್ಲಿ,

ತಪಸೋಽರ್ಧಂ ಪ್ರಯಚ್ಛಾಮಿ ಪಾಣಿಗ್ರಾಹಸ್ಯ ಸತ್ತಮಾಃ

ತನ್ನನ್ನು ವಿವಾಹಮಾಡಿಕೊಂಡವರಿಗೆ ತನ್ನ ತಪಸ್ಸಿನ ಫಲದ ಅರ್ಧವನ್ನು ಅರ್ಪಿಸುವುದಾಗಿ ಘೋಷಿಸಿದಳು. ಇದನ್ನು ಕೇಳಿ ಗಾಲವನ ಪುತ್ರನಾದ ಶೃಂಗವಂತನೆಂಬ ಋಷಿಯು ವಿವಾಹಕ್ಕೆ ಮೊದಲೇ ಅವಳ ಪಾಣೀಗ್ರಹಣವನ್ನು ಮಾಡಿದನು. ಆಕೆಯನ್ನು ವಿವಾಹವಾಗಲು ವಿವಾಹಾ ನಂತರ ಒಂದು ರಾತ್ರಿ ಮಾತ್ರ ಆಕೆ ತನ್ನೊಂದಿಗಿರಬೇಕು ಎಂಬ ನಿಬಂಧನೆಯನ್ನು ಹಾಕಿದನು. ಇದನ್ನು ಕೇಳಿ ಋಷಿಕನ್ಯೆಗೆ ಆನಂದವೇ ಆಯಿತು.

ಆಕೆಗೆ ವೈವಾಹಿಕ ಬಂಧನದ ಅಪೇಕ್ಷೆಯೇನೂ ಇರಲಿಲ್ಲ. ಕೇವಲ ಸಂಸ್ಕಾರಯುಕ್ತಳಾಗಲು ಬಯಸಿ ಮದುವೆಯಾಗಲು ಮುಂದಾಗಿದ್ದಳು. ತಾನು ಆತನ ನಿಬಂಧನೆಗೆ ಒಪ್ಪಿರುವುದಾಗಿ ಹೇಳಿ ಆಕೆ ಪ್ರತಿವಚನವಿತ್ತು ತನ್ನ ಕೈಯನ್ನು ಆತನ ಕೈಯಲ್ಲಿಟ್ಟಳು. ಗಾಲವಿಯು ಯಥಾವಿಧಿಯಾಗಿ ಅಗ್ನಿಯನ್ನು ಪ್ರತಿಷ್ಠಾಪಿಸಿ, ವಿವಾಹ ಮಂತ್ರಗಳಿಂದ ಹೋಮ ಮಾಡಿ ಅವಳನ್ನು ವಿವಾಹವಾದನು. ಆ ರಾತ್ರಿ ಆಕೆ ಗಾಲವಿಯೊಂದಿಗೆ ಕಳೆಯಲು ಬಂದಳು. ಆಗ ಆಕೆ ವೃದ್ಧೆಯಾಗಿರಲಿಲ್ಲ. ದಿವ್ಯಾಭರಣಗಳನ್ನು ತೊಟ್ಟ ಸುಂದರಳಾದ ಶ್ರೇಷ್ಠ ವರ್ಣದ ತರುಣಿಯಾಗಿದ್ದಳು. ಮನೋಹರವಾದ ವಸ್ತ್ರಗಳಿಂದ ಅಲಂಕೃತಳಾಗಿ, ದಿವ್ಯಗಂಧಗಳನ್ನು ಲೇಪಿಸಿಕೊಂಡು ಶರೀರ ಕಾಂತಿಯಿಂದ ಬೆಳಗುತ್ತಿದ್ದ ಆಕೆಯನ್ನು ಕಂಡ ಶೃಂಗವಂತನು ಪರಮ ಪ್ರೀತನಾಗಿ ಅವಳೊಡನೆ ರಾತ್ರಿಯನ್ನು ಕಳೆದನು. ಬೆಳಗಾದ ಕೂಡಲೇ ಆಕೆ ಗಾಲವಿಗೆ,

యస్త్వయా సమయోऽవిప్రకృతో మే
తపతాం వర
తేనోऽస్మితాస్మి భద్రం తే స్వస్తి తేऽస్తు
వ్రజామ్యహమ్

“ನಿನ್ನ ಶರತ್ತಿಗೆ ಅನುಗುಣವಾಗಿ ಒಂದು ರಾತ್ರಿ ಕಳೆದಿದ್ದೇನೆ, ನಿನಗೆ ಮಂಗಳವಾಗಲಿ, ಕಲ್ಯಾಣವಾಗಲಿ ನನಗೆ ಅನುಜ್ಞೆ ನೀಡು ಎಂದು ಕೇಳಿಕೊಂಡಳು”.

ಅಲ್ಲಿಂದ ಹೊರಟ ನಂತರ ಮತ್ತೆ ಆಕೆ ಹೇಳಿದಳು “ಕುರುಕ್ಷೇತ್ರದ ಸಮೀಪದಲ್ಲೇ ಇರುವ ಆ ತೀರ್ಥದ ಸಮೀಪದಲ್ಲಿ ಯಾರು ಏಕಾಗ್ರಚಿತ್ತದಿಂದ ದೇವತೆಗಳನ್ನು ಅರ್ಚಿಸಿ ಒಂದು ರಾತ್ರಿ ಕಳೆಯುವರೋ ಅವರಿಗೆ 58 ವರ್ಷಗಳವರೆಗೆ ವಿಧ್ಯುಕ್ತವಾಗಿ ಬ್ರಹ್ಮಚರ್ಯವನ್ನು ಪಾಲಿಸಿದಂಥ ಫಲ ಲಭಿಸುವುದು” ಎಂದು ಹೇಳಿದಳು.

ನಂತರ ಶರೀರತ್ಯಾಗ ಮಾಡಿದ ಸಾಧ್ವಿಯಾದ ಋಷಿಪತ್ನಿಯು ಸ್ವರ್ಗಕ್ಕೆ ಹೊರಟು ಹೋದಳು. ಅವಳ ರೂಪವನ್ನೇ ಚಿಂತಿಸುತ್ತಾ ಶೃಂಗವಂತನು ಧೈರ್ಯಗೆಟ್ಟನು.

ನಿಬಂಧನೆಯಂತೆ ಆಕೆಯ ತಪಸ್ಸಿನ ಫಲದ ಅರ್ಧಭಾಗವನ್ನು ಬಹಳ ಕಷ್ಟದಿಂದ, ಒಲ್ಲದ ಮನಸ್ಸಿನಿಂದ ಸ್ವೀಕರಿಸಿದನು. ಅವಳ ರೂಪದಿಂದ ಅತ್ಯಂತ ಆಕರ್ಷಿತನಾಗಿದ್ದ ಆತ ಅವಳ ವಿರಹ ತಾಳದೆ ತಾನೂ ದೇಹತ್ಯಾಗ ಮಾಡಿ ಅವಳ ದಾರಿಯನ್ನೇ ಹಿಡಿದು ಹೊರಟು ಹೋದನು.

ವೃದ್ಧಕನ್ಯೆಯ ಏಕಾಗ್ರಚಿತ್ತತೆ, ಹಿಡಿದ ಕಾರ್ಯ ಸಾಧಿಸದೆ ಬಿಡೆನೆಂಬ ಛಲ ಮತ್ತು ಕೊಟ್ಟ ಮಾತಿಗೆ ತಪ್ಪದ ಅವಳ ನಿಷ್ಠೆ ಅನುಕರಣೀಯ.

ಕೇವಲ ಸಂಸ್ಕಾರಯುಕ್ತಳಾಗಲು ಆಶಿಸಿ ವಿವಾಹವಾಗಿ, ಪತಿಯ ಇಚ್ಛೆಗೆ ವಿರೋಧವಾಗದಂತೆ ನಡೆದುಕೊಂಡು ತನ್ನ ತಪಸ್ಸಿನ ಫಲದಲ್ಲಿ ಅರ್ಧಭಾಗವನ್ನು ಅವನಿಗೆ ಧಾರೆಯೆರೆದು ಕಠೋರ ತಪಸ್ಸಿನ ಪ್ರಭಾವದಿಂದ ಉತ್ತಮಲೋಕ ಪಡೆದು ವೃದ್ಧಕನ್ಯೆಯ ಚರಿತ್ರೆಯನ್ನು ಈ ರೀತಿ ಹೇಳಲಾಗಿದೆ.


ಹೆಣ್ಣಿಗೆ ವಿವಾಹ ಸಂಸ್ಕಾರದ ಅಗತ್ಯತೆಯನ್ನು ಈ ವೃತ್ತಾಂತ ತಿಳಿಸುತ್ತದೆ.






ಓದುಗರಿಗೂ, ಚಂದಾದಾರರಿಗೂ
ಮತ್ತು ಏಜೆಂಟರಿಗೂ
ನೂತನ ಆಂಗ್ಲ
ಹೊಸವರ್ಷಾರಂಭದ
ಶುಭಾಶಯಗಳು ಮತ್ತು
ಮಕರ ಸಂಕ್ರಾಂತಿ ಹಬ್ಬದ
ಹಾರ್ದಿಕ ಶುಭಾಶಯಗಳು

– ಪ್ರಧಾನ ಸಂಪಾದಕರು



# ತಿರು ಅರಿಮೇಯವಿಣ್ಣಗರಮ್





**ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**

**ಅನುವಾದ : ಶ್ರೀಮತಿ. ಸೂರ್ಯವಂಶಿ**

ನೂರಾಎಂಟು ದಿವ್ಯ ದೇಶಗಳಲ್ಲಿ **'ಕುಡಮೂಡು ಕೂತ್ತನ್'** ದೇವಾಲಯ ಎಂದು ಕರೆಯಲ್ಪಡುವ ಈ **'ತಿರು ಅರಿಮೇಯವಿಣ್ಣಗರಂ'** ಕೂಡಾ ಒಂದಾಗಿದೆ. ಈ ದೇವಾಲಯ ಮೂರು ಅಂತಸ್ತುಗಳಿಂದ ಕೂಡಿರುವ ರಾಜ ಗೋಪುರವನ್ನು ಹೊಂದಿದೆ. ಗರ್ಭಗುಡಿ ಅರ್ಧಮಂಡಪ, ಮಹಾಮಂಟಪಗಳೂ ಇವೆ. ಶೀರ್ಗಾಳಿ ಎಂಬ ಕ್ಷೇತ್ರದಿಂದ ಇದು 8 ಕಿ.ಮೀ. ದೂರದಲ್ಲಿದೆ. ಈ ದೇವಾಲಯದಲ್ಲಿ ಮೂಲಮೂರ್ತಿ ಪೂರ್ವ ದಿಕ್ಕಿನಲ್ಲಿ ಬಲಪಾದವನ್ನು ಕೆಳಗೆ ಚಾಚಿಕೊಂಡು, ಎಡಗಡೆಯ ಪಾದವನ್ನು ಮಡಿಸಿಟ್ಟುಕೊಂಡು ಕುಳಿತಿರುವ ಭಂಗಿಯಲ್ಲಿ ಶ್ರೀ ಭೂಸಮೇತನಾಗಿ ರಾರಾಜಿಸುತ್ತಿದ್ದಾನೆ.

**ಸ್ಥಳಪುರಾಣ :**

ವಿನತ, ಕದ್ರುವ ಇಬ್ಬರೂ ಕಶ್ಯಪ ಋಷಿಯ ಪತ್ನಿಯರು. ಹಿರಿಯ ಪತ್ನಿ ವಿನತನ ಮಗ ಗರುಡ. ಕಿರಿಯ ಪತ್ನಿಯಾದ ಕದ್ರುವ ನಾಗಗಳ ಮಾತೆ. ವಿನತಳನ್ನು ದಾಸಿಯನ್ನಾಗಿ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಕದ್ರುವ ದೇವೇಂದ್ರನ ಅಶ್ವವಾದ ಉಚ್ಚೈಶ್ರವದ ಬಾಲವು ಕಪ್ಪು ಬಣ್ಣದಲ್ಲಿದೆ ಎಂದು ವಿನತಳೊಂದಿಗೆ ವಾದ ಮಾಡಿದಳು. ವಿನತ ಅದಕ್ಕೆ ಒಪ್ಪದೇ ಅಶ್ವದ ಬಾಲವು ಬಿಳಿಯ ವರ್ಣದಲ್ಲೇ ಇದೆ ಎಂದು ವಾದಿಸಿದಳು. ಈ ವಿಷಯದಲ್ಲಿ ಇಬ್ಬರಿಗೂ ವಾದ ವಿವಾದಗಳು ನಡೆದವು. ಆಗ ಕದ್ರುವ ಅಶ್ವದ ಬಾಲ ಕಪ್ಪಾಗಿದೆ ಎಂದು ನಾನು ಪ್ರಮಾಣ ಮಾಡಿ ತೋರಿಸಿದರೆ ನೀನು ನನಗೆ ದಾಸಿಯಾಗಬೇಕು, ಒಂದು ವೇಳೆ ಅದರ ಬಾಲ ಬಿಳಿಯ ಬಣ್ಣದ್ದೇ ಆದರೆ ನಾವೆಲ್ಲರೂ ನಿನಗೆ ದಾಸರಾಗುತ್ತೇವೆ, ಎಂದು ಪಂದ್ಯ ಕಟ್ಟಿದಳು.

ಈ ಪಂದ್ಯದಲ್ಲಿ ಹೇಗಾದರೂ ತಾನೇ ಗೆಲ್ಲಬೇಕೆಂಬ ಹಠದಿಂದ ತನ್ನ ಮಗನಾದ ಕಾರ್ಕೋಟಕನನ್ನು ಕರೆದು ಉಚ್ಚೈಶ್ರವದ ಬಾಲವನ್ನು ಸುತ್ತಿಕೊಳ್ಳಬೇಕೆಂದು ತಿಳಿಸಿದಳು. ಹಾಗೇ ಕದ್ರುವ ಉಚ್ಚೈಶ್ರವದ ಬಾಲ ಕಪ್ಪು ಎಂದು ನಿರೂಪಿಸಿ ವಿನತಳನ್ನು ತನ್ನ ದಾಸಿಯನ್ನಾಗಿ ಮಾಡಿಕೊಂಡಳು.

ಈ ವಿಷಯವನ್ನು ಅರಿತ ಗರುಡನು ತನ್ನ ತಾಯಿಯನ್ನು ದಾಸ್ಯದಿಂದ ವಿಮುಕ್ತಳನ್ನಾಗಿ ಮಾಡಬೇಕೆಂದು ಯೋಚಿಸಿ, ತನ್ನ ಚಿಕ್ಕಮ್ಮನಾದ ಕದ್ರುವಳನ್ನು ಇದಕ್ಕೆ ಉಪಾಯ ತಿಳಿಸಬೇಕೆಂದು ಕೇಳಿದ. ಆಗ ಕದ್ರುವ ತನಗೆ ದೇವಲೋಕದಿಂದ ಅಮೃತವನ್ನು ತಂದುಕೊಟ್ಟರೆ ವಿನತಳನ್ನು ದಾಸ್ಯದಿಂದ ಮುಕ್ತಿಗೊಳಿಸುತ್ತೇನೆಂದು ಹೇಳಿದಳು. ಕೂಡಲೇ ಗರುಡನು ದೇವಲೋಕಕ್ಕೆ ಹೋಗಿ ಅಲ್ಲಿ ಅನೇಕ ಅಡತಡೆಗಳನ್ನು ಎದುರಿಸಿ ಕೊನೆಗೆ ಅಮೃತಕಲಶವನ್ನು ಸಾಧಿಸಿ, ತನ್ನ ತಾಯಿಯನ್ನು ಹಾಗೇ ತನ್ನ ವರನ್ನು ಕದ್ರುವಳ ದಾಸ್ಯದಿಂದ ವಿಮುಕ್ತಿಗೊಳಿಸಿದ.

ಮಾಯಾವಿ ಎಂಬ ಅಸುರನು ಅಮೃತಕಲಶವನ್ನು ಅಪಹರಿಸಿಕೊಂಡು ಹೋಗುತ್ತಿರುವಾಗ ಭಗವಂತನು ಅವನನ್ನು ಒಂದು ಬಾಣದಿಂದ ಹೊಡೆದಾಗ ಅದು ಅವನಿಗೆ ತಗುಲಿ ಆ ಅಸುರನ ಕೈ ಕತ್ತರಿಸಿ ಅಮೃತಕಲಶವು ಅರಿಮೇಯವಿಣ್ಣಗರ್ ಎಂಬ ದಿವ್ಯದೇಶದಲ್ಲಿ ಬಿತ್ತು. ಅದೇ ಅಮೃತಪಾಲಿ ಅಂದರೆ ಅಮೃತಪುಷ್ಕರಿಣಿಯೆಂದು ಹೆಸರು ಪಡೆಯಿತು.

**ಸ್ವಾಮಿಯವರ**


| | |
|---|---|
| **ಮೂಲಮೂರ್ತಿ :** | **ಕುಡಮಾಡುಕೂತ್ತನ್** |
| **ಉತ್ಸವಮೂರ್ತಿ :** | **ಚತುರ್ಭುಜ ಗೋಪಾಲನ್** |

**ಅಮ್ಮನವರ**

| | |
|---|---|
| **ಮೂಲಮೂರ್ತಿ :** | **ಅಮೃತಘಟವಲ್ಲಿ ತಾಯಾರ್** |
| **ಉತ್ಸವಮೂರ್ತಿ :** | **ಅಮೃತಘಟವಲ್ಲಿ ತಾಯಾರ್** |
| **ಸ್ಥಳ ವೃಕ್ಷ :** | **ಪುರಸಮಾರ ವೃಕ್ಷ** |
| **ಪುಷ್ಕರಿಣಿ:** | **ಕೋಟಿ ತೀರ್ಥ, ಅಮೃತ ತೀರ್ಥ** |
| **ವಿಮಾನ :** | **ಉಚ್ಚಶೃಂಗ ವಿಮಾನ** |
| **ಪ್ರತ್ಯಕ್ಷ :** | **ಉದಂಕ ಮಹರ್ಷಿಗೆ** |
| **ಮುಖ/ಸ್ಥಿತಿ :** | **ಪೂರ್ವ / ಕುಳಿತಿರುವ ಭಂಗಿ** |
| **ಮಂಗಳಾಶಾಸನ :** | **ತಿರುಮಂಗೈ ಆಳ್ವಾರರು (10)** |

ಉದಂಕ ಮಹರ್ಷಿ ತನ್ನ ಪತ್ನಿಯಾದ ಪ್ರಭಳೊಂದಿಗೆ ನದಿಯಲ್ಲಿ ಸ್ನಾನಮಾಡುತ್ತಿದ್ದ ಸಮಯದಲ್ಲಿ ನದಿಯ ರಭಸಕ್ಕೆ ಆಕೆ ನದಿಯಲ್ಲಿ ಕೊಚ್ಚಿಕೊಂಡು ಹೋದಳು. ಇದರಿಂದ ದುಃಖ ತಪ್ತನಾದ ಉದಂಕನಿಗೆ ಅರಿಮೇಯವಿಣ್ಣಗರಮ್ ಉತ್ಸವ ಮೂರ್ತಿಯಾದ ಗೋಪಾಲಕೃಷ್ಣನು ಚತುರ್ಭುಜಗ ಳೊಂದಿಗೆ ದರ್ಶನ ನೀಡಿ ಅವನ ಹೆಂಡತಿಯಾದ ಪ್ರಭ ಮುಕ್ತಿಯನ್ನು ಹೊಂದಿದ್ದಾಳೆಂದು ತಿಳಿಸಿದ. ಆಗ ಮಹರ್ಷಿಯು ಪ್ರಶಾಂತತೆಯನ್ನು ಪಡೆದುಕೊಂಡ.

ಪಾಂಚರಾತ್ರಾಗಮೋಕ್ತವಾಗಿ ಪೂಜೆಗಳನ್ನು ಸ್ವೀಕರಿಸುವ ಈ ದೇವದೇವನನ್ನು ಸೇವಿಸಿದವರಿಗೆ ಭಗವಂತನ ಶ್ರೀಪಾದಗಳನ್ನು ಬಿಟ್ಟು ಇನ್ನೆಲ್ಲೂ ದಾಸ್ಯವಿರುವುದಿಲ್ಲ.




# ವಿಜಯ ವಿಟ್ಠಲ

ಪರ್ಯಾಯ ಪೀಠಾಧೀಶರಾದ ಶ್ರೀ ಸುಗುಣೇಂದ್ರ ತೀರ್ಥರ ಆಶೀರ್ವಾದದೊಂದಿಗೆ ಶ್ರೀವಾದಿರಾಜ ಸಂಶೋಧನಾ ಪ್ರತಿಷ್ಠಾನ ಪುತ್ತಿಗೆ ಮಠ ಮತ್ತು ಶ್ರೀನಿವಾಸ ಉತ್ಸವ ಬಳಗದ ಸಹಯೋಗದೊಂದಿಗೆ ಶ್ರೀ ವಿಜಯದಾಸರ ಆರಾಧನಾ ಪ್ರಯುಕ್ತವಾಗಿ ಉಡುಪಿ ಕ್ಷೇತ್ರದಲ್ಲಿ ವಿಜಯದಾಸರ ಆರಾಧನೆಯ ಸಮಯದಲ್ಲಿ ಶ್ರೀ ವಿಜಯದಾಸರ ಉಡುಪಿ ಕೃಷ್ಣನ ಮಹಾತ್ಮೆಯನ್ನು ಹೇಳುವ ಅನೇಕ ಕೃತಿಗಳು ಶ್ರೀ ಕೃಷ್ಣನ ಕುರಿತಾದ ಶ್ರೀ ವಿಜಯದಾಸರ ಕೃತಿಗಳನ್ನು ಸವಿವರವಾಗಿ ಓಳಾರ್ಥಗಳನ್ನು ತಿಳಿಯುವ ಉದ್ದೇಶದಿಂದ ಸಂಶೋಧನಾ ಲೇಖನಗಳ ಆಹ್ವಾನ ಮಾಡಿ ಸರಿ ಸುಮಾರು 51 ಆಯ್ದು ಕೃತಿಗಳನ್ನು ಆರಿಸಿಕೊಂಡು ಶ್ರೀ ವಿಜಯದಾಸರ ಕುರಿತಾದ ನುಡಿ ನಮನದ ಕೃತಿಗಳು ಇದೀಗ ಬಿಡುಗಡೆಗೊಂಡಿದೆ. ಶ್ರೀ ವಿಜಯದಾಸರ ಕೃತಿಗಳಲ್ಲಿ ಪ್ರಸ್ಥಾನತ್ರಯ, ವಿಜಯದಾಸರು ಕಂಡಂತೆ ಉಡುಪಿ ಕೃಷ್ಣ ವಿಜಯದಾಸರ ಕೃತಿಗಳಲ್ಲಿ ನೀತಿ , ಹರಿದಾಸರು ವರ್ಣಿಸಿದ ಶ್ರೀ ಕೃಷ್ಣ ಉಡುಪಿ ಯಾತ್ರೆ, ಆನಂದ ಯಾತ್ರೆ, ವಿಜಯದಾಸರ ಸುಳಾದಿಗಳು, ವಿಜಯದಾಸರ ಉಡುಪಿ ಯಾತ್ರೆ ವಿಜಯದಾಸರ ತೀರ್ಥಕ್ಷೇತ್ರಗಳ ವರ್ಣನೆ, ವಿಜಯದಾಸರ ಕೊಡುಗೆ ಹೀಗೆ 47 ಕನ್ನಡ ಲೇಖನಗಳು ಹಾಗೂ 3 ಆಂಗ್ಲ ಲೇಖನಗಳಿಂದ ಜ್ಞಾನಪೂರ್ಣ ಲೇಖನಗಳನ್ನೊಳಗೊಂಡ **"ವಿಜಯ ವಿಟ್ಠಲ"** 280 ಕ್ಕೂ ಹೆಚ್ಚು ಪುಟಗಳ ಸುಂದರ ಪುಸ್ತಕ ಪ್ರಧಾನ ಸಂಪಾದಕರಾಗಿ ಡಾ.ಬಿ. ಗೋಪಾಲಚಾರ್ಯರು ಮತ್ತು ಸಂಪಾದಕರಾದ ಡಾ.ಗುರುರಾಜ ಪೋಶೆಟ್ಟಿಹಳ್ಳಿ ಯವರು ಉತ್ತಮ ಕಾರ್ಯವನ್ನು ಮಾಡಿದ್ದಾರೆ.

ವಿಜಯದಾಸರ ಕೃತಿಗಳಲ್ಲಿ ವೇದ ಉಪನಿಷತ್ತುಗಳ ಪ್ರಭಾವ ಸೃಷ್ಟಿ ಪ್ರಕರಣ ಹರಿನಾಮಸ್ಮರಣೆ, ಸಂಸಾರ ಸಾರ ರಹಿತವಾದದ್ದು, ಮನಸ್ಸಿನ ನಿಯಂತ್ರಣದ ಬಗೆ, ಹರಿಸರ್ವೋತ್ತಮತ್ವ, ಜೀವನ ಅತಂತ್ರತೆ, ಸಂಸಾರದಲ್ಲಿದ್ದು ಭಗವಂತನ ಆರಾಧನೆಯ ಬಗೆ, ಉಡುಪಿಯ ಕೃಷ್ಣನ ಕ್ಷೇತ್ರದ ಮಹಿಮೆ ಉಡುಪಿಯ ದೇವಾಲಯಗಳು ಮತ್ತು ಅವುಗಳ ಕುರಿತಾದ ಕೀರ್ತನೆಗಳು, ವಿಜಯದಾಸರ ಕೀರ್ತನೆಗಳಲ್ಲಿ ಲೋಕ ನೀತಿ, ಗೋಪಿ ಚಂದನದಲ್ಲಿ ಶ್ರೀ ಕೃಷ್ಣ ಉಡುಪಿಗೆ ಬಂದ ಕುರಿತಾದ ಕೃತಿ ಅದರ ಹಿನ್ನೆಲೆ, ಪಾತ್ರರ ಸಂಗ ಯಾತ್ರೆಯನ್ನು ಮಾಡುವಾಗ ಉಡುಪಿಯ ಯಾತ್ರೆಯ ಮಹತ್ವ ಆ ಯಾತ್ರೆ ಯಾವ ರೀತಿಯಲ್ಲಿ ಆನಂದಮಯವಾಗಿರುವುದು ಎಂಬುದರ ಕುರಿತು ವಿಜಯದಾಸರು ರಚಿಸಿದ ಸುಳಾದಿಗಳ ಮಹತ್ವ ಪ್ರಾರ್ಥನಾ ಸುಳಾದಿ, ತೀರ್ಥಕ್ಷೇತ್ರಗಳ ಮಹಿಮೆಯ ಸುಳಾದಿಗಳು, ಉಪಾಸನಾ ಸುಳಾದಿಗಳ ಸವಿವರ ಲೇಖನಗಳು, ವಿಜಯದಾಸರು ತೀರ್ಥಕ್ಷೇತ್ರಯಾತ್ರೆಗಳ ಬಗೆಗೆ ಅದರಲ್ಲೂ ವಿಶೇಷವಾಗಿ ಉಡುಪಿ ಯಾತ್ರೆಯ ಬಗೆಗೆ ವರ್ಣಿಸಿದ ಸ್ತುತಿ ಮತ್ತು ಸುಳಾದಿಗಳನ್ನು ಬಹಳ ಸೊಗಸಾಗಿ ಬರೆದಿದ್ದಾರೆ, ಅದರ ಕುರಿತಾದ ಲೇಖನಗಳು, ಕೃಷ್ಣನ ಕುರಿತಾಗಿ ವಿಜಯದಾಸರು ರಚಿಸಿದ ಅರಿಷ್ಟಾಪಹಾರಿ ಕೃಷ್ಣ ಅವನ ವಿಶೇಷತೆಯ ಕುರಿತಾದ ಲೇಖನ, ಉಡುಪಿ ಕ್ಷೇತ್ರದ ಶ್ರೀಕೃಷ್ಣ ಪರಮಾತ್ಮನ ಪ್ರಸಾದ ಮತ್ತದರ ವಿಶೇಷತೆಯ ಕುರಿತಾಗಿ ಲೇಖನ, "ನಿನ್ನ ಒಲುಮೆಯಿಂದ ಮೊದಲಾದ ಕೀರ್ತನೆಗಳಿಂದ ಲೋಕ ನೀತಿ ಮತ್ತು ಶಿಕ್ಷಣಗಳ ಕುರಿತು ಲೇಖನ, ವಿಜಯದಾಸರು ರಚಿಸಿದ ಶ್ರೀ ಶೈಲ ಕ್ಷೇತ್ರ ಸುಳಾದಿ, ವಿಜಯದಾಸರು ದಾಸಸಾಹಿತ್ಯಕ್ಕೆ ಕೊಟ್ಟ ಕೊಡುಗೆ ವಿಜಯರಾಯರ ಕವಚ ಹೀಗೆ ಅನೇಕ ರೀತಿಯಿಂದ ವಿಜಯದಾಸರ ಕುರಿತು ಅನೇಕ ಲೇಖನಗಳಲ್ಲಿ ಅವರ ಸಮಗ್ರ ಜೀವನ ರಚನೆಗಳು ಉಡುಪಿ ಶ್ರೀ ಕೃಷ್ಣನೊಂದಿಗೆ ಅವರ ನಂಟಿನ ಬಗೆಗೆ ಉತ್ತಮವಾದ ಬೆಳಕನ್ನು ಚೆಲ್ಲುವುದರೊಂದಿಗೆ ವಿಜಯದಾಸರು ಮತ್ತು ಅವರ ಜೀವನದ ಸಮಗ್ರ ಪರಿಚಯ ಮಾಡಿಸುವ ಉತ್ತಮ ಗ್ರಂಥವಾಗಿದೆ. ಇದರಲ್ಲಿ ಲೇಖನಗಳಲ್ಲಿ ಶ್ರೀ ಕೃಷ್ಣ ಭಕ್ತಿ ವಿಜಯದಾಸರ ಕುರಿತಾದ ಭಕ್ತಿ ಹರಿದಾಸ ಮಹಿಮೆ ಮಹತ್ವಗಳ ಬಗೆಗೆ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಜ್ಞಾನ ಮತ್ತು ಧರ್ಮ ಕಾರ್ಯಗಳ ಬೆಳಕನ್ನು ಕಾಣಬಹುದಾಗಿದೆ. ಮಹಿಳೆಯರು ಪುರುಷರ ಎಲ್ಲ ಚಿಂತಕರು, ವಿದ್ವಾಂಸರು ತಮ್ಮ ವಿಚಾರಗಳನ್ನು ಅಭಿವ್ಯಕ್ತ ಪಡಿಸಿದ್ದಾರೆ. ಉತ್ತಮ ವಿಚಾರಗಳನ್ನು ಲೇಖನಗಳನ್ನು ಆಯ್ದುಕೊಂಡು ಪುಸ್ತಕ ಸಂಪಾದನೆಯನ್ನು ಮಾಡಲಾಗಿದೆ.

ಈ ರೀತಿಯ ಕೆಲಸಗಳು ಜನರ ಜ್ಞಾನವನ್ನು ಸಹೃದಯರೊಂದಿಗೆ ಹಂಚಿಕೊಳ್ಳಲು ಸಹಾಯಕವಾಗುತ್ತದೆ. ಜನ ಸಾಮಾನ್ಯರು ಕೂಡ ಇಂತಹ ಲೇಖನಗಳನ್ನು ಬರೆಯುವಾಗ ಅವರ ಜ್ಞಾನಾವೃದ್ಧಿಯನ್ನು ಮಾಡಿಕೊಂಡು ಅಧ್ಯಯನ ಮಾಡಿ ಲೇಖನ ಬರೆದು ಅದನ್ನು ಪ್ರಸ್ತುತಿ ಪಡಿಸುವ ಬಗೆ ಅನನ್ಯವಾಗಿದೆ. ಮೊಟ್ಟ ಮೊದಲ ಬಾರಿಗೆ ಇಂತಹದೊಂದು ದಾಸರ ಮತ್ತು ಕ್ಷೇತ್ರದ ನಂಟಿನ ವಿಷಯವನ್ನು ಪ್ರಧಾನವಾಗಿಟ್ಟುಕೊಂಡು ನಡೆಸುತ್ತಿರುವ ಸಮ್ಮೇಳನವು ಮುಂದೆ ಅನೇಕ ಹೊಸ ಹೊಸ ವಿಷಯಗಳ ಮತ್ತು ಉತ್ತಮ ಕಾರ್ಯಗಳಿಗೆ ನಾಂದಿ ಹಾಡಲಿದೆ.

**ಪ್ರತಿಗಳಿಗೆ : ಬೆಂಗಳೂರು ಬಸವನಗುಡಿ ಪುತ್ತಿಗೆ ಮಠ ಗೋವರ್ಧನ ಕ್ಷೇತ್ರವನ್ನು ಸಂಪರ್ಕಿಸಬಹುದು.**

**ಮಾಧುರಿ ದೇಶಪಾಂಡೆ**




# ಶ್ರೀ ವೆಂಕಟೇಶ್ವರ ಅನ್ನ ಪ್ರಸಾದ ಟ್ರಸ್ಟ್ (ಒಂದು ದಿನದ ದೇಣಿಗೆ ಕೊಡುವ ಯೋಜನೆ)

ಅನ್ನವೇ ಪರಬ್ರಹ್ಮ ಸ್ವರೂಪ, ಹಸಿದವನಿಗೆ ಅನ್ನ ನೀಡುವುದಕ್ಕಿಂತ ಉತ್ತಮವಾದ ಪುಣ್ಯ ಮತ್ತೊಂದಿಲ್ಲ. ಇದೇ ಸಂದರ್ಭದಲ್ಲಿ ತಿರುಮಲೆ ತಿರುಪತಿ ದೇವಸ್ಥಾನವು ತಿರುಮಲೆ,ತಿರುಪತಿ ಮತ್ತು ತಿರುಚಾನೂರಿನಲ್ಲಿ ನಿತ್ಯವೂ ಅನ್ನಪ್ರಸಾದ ವಿತರಣೆಯನ್ನು ನಡೆಸುತ್ತಿದೆ. ಈ ಕಾರ್ಯಕ್ಕೆ ಅನೇಕ ದಾನಿಗಳು ಉದಾರವಾಗಿ ದೇಣಿಗೆ ನೀಡುತ್ತಾರೆ, ಎಂಬುದು ತಿಳಿದಿರುವ ವಿಷಯ! ಪ್ರತಿಯೊಬ್ಬರೂ ಭೂಮಿಯನ್ನು ದಾನ ಮಾಡಲು ಸಾಧ್ಯವಿಲ್ಲ. ಇದನ್ನು ಗಮನಿಸಿದ ತಿ.ತಿ.ದೇ., ಒಂದು ದಿನದ ಅನ್ನಪ್ರಸಾದದ ವೆಚ್ಚವನ್ನು ಭಕ್ತರಿಂದ ಕಾಣಿಕೆಯಾಗಿ ಸ್ವೀಕರಿಸಲು ಸಹ ಸಿದ್ಧತೆ ಮಾಡಿಕೊಳ್ಳಲಾಗಿದೆ. ಭಕ್ತರೇ ಈ ಕಾರ್ಯಕ್ಕೆ ಸ್ಪಂದಿಸಿ ! ಮತ್ತೊಬ್ಬರ ಹಸಿವನ್ನು ತೀರಿಸಿ! ಮಾಧವನ ಕೃಪೆಗೆ ಪಾತ್ರರಾಗಿ !!!

ಈ ವಿರಾಳವನ್ನು ಕೇವಲ ವೈಯಕ್ತಿಕವಾಗಿ ಮಾತ್ರವಲ್ಲದೆ ಕಂಪನಿಗಳು, ಸಂಸ್ಥೆಗಳು ಮತ್ತು ಟ್ರಸ್ಟ್‌ಗಳು ಜಂಟಿಯಾಗಿ ನೀಡಬಹುದು.

ದಾನಿಗಳು ದೈನಂದಿನ ಮೊತ್ತವನ್ನು (ರೂ. 44 ಲಕ್ಷಗಳು ) ಬೆಳಗಿನ ಉಪಾಹಾರ (ರೂ. 10 ಲಕ್ಷಗಳು) ಮಧ್ಯಾಹ್ನದ ಭೋಜನ (ರೂ. 17 ಲಕ್ಷಗಳು ) ಅಥವಾ ರಾತ್ರಿ ಊಟ (ರೂ. 17 ಲಕ್ಷಗಳು) ಆಯ್ಕೆ ಮಾಡಿ ವಿತರಿಸಬಹುದು. ಒಟ್ಟು ರೂ.44 ಲಕ್ಷ ವಿರಾಳ ಅಥವಾ 25 ಲಕ್ಷ ವಿರಾಳ ನೀಡುವ ದಾನಿಗಳಿಗೆ , 10 ಲಕ್ಷ ವಿರಾಳ ನೀಡುವ ದಾನಿಗಳಿಗೆ ಅಲ್ಪಾಹಾರ, ಮಧ್ಯಾಹ್ನ ಮತ್ತು ರಾತ್ರಿಯ ಊಟಕ್ಕೆ ತಿ.ತಿ.ದೇ., ದಾನಿಗಳಿಗೆ ಒದ ಗಿಸುವ ಸೌಲಭ್ಯಗಳು ಒಂದೇ ಆಗಿರುತ್ತದೆ. ಈ ಕಾರ್ಯ ಕ್ರಮದಲ್ಲಿ ಪಾಲ್ಗೊಳ್ಳುವ ಭಕ್ತರು ತಮ್ಮ ಕೋರಿಕೆಯಂತೆ ಭಕ್ತರಿಗೆ ಸೇವೆ ಸಲ್ಲಿಸಲು ಅವಕಾಶವಿದ್ದು ಅವರ ಹೆಸರನ್ನು ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನ ಪ್ರಸಾದ ವಿತ ರಣಾ ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಇದರಲ್ಲಿ ಪಾಲ್ಗೊಂಡ ಭಕ್ತ ದಾತರು ಭಕ್ತರಿಗೆ ತಾವೇ ಸೇವೆ ಸಲ್ಲಿಸುವ ಅವಕಾಶವಿರುತ್ತದೆ. ಮಾತೃಶ್ರೀ ತರಿಗೊಂಡವೆಂಗಮಾಂಬ ಅನ್ನ ಪ್ರಸಾದ ವಿತರಣಾ ಕೇಂದ್ರದಲ್ಲಿ ಅವರ ಹೆಸರನ್ನು ಪ್ರದರ್ಶಿಸಲಾಗುತ್ತದೆ.

## ಒಂದು ದಿನದ ಖರ್ಚು

| | |
|---|---|
| 1. ಅಲ್ಪಹಾರ (ಟಿಫಿನ್ ) | - 10 ಲಕ್ಷಗಳು |
| 2.ಮಧ್ಯಾಹ್ನ ಭೋಜನ | - 17 ಲಕ್ಷಗಳು |
| 3. ರಾತ್ರಿ ಭೋಜನ | - 17 ಲಕ್ಷಗಳು |
| ಒಟ್ಟು ಮೊತ್ತ | - 44 ಲಕ್ಷಗಳು |

ಈ ಮೊತ್ತವನ್ನು ದಾನಿಗಳು ಅನ್ನಪ್ರಸಾದ ಟ್ರಸ್ಟ್‌ಗೆ ನೀಡಬಹುದು.

**ಹೆಚ್ಚಿನ ವಿವರಗಳಿಗಾಗಿ :**

ಉಪಕಾರ್ಯನಿರ್ವಹಣಾಧಿಕಾರಿ, ಎಫ್.ಎ.ಸಿ.,
(ಡೋನಾರ್‌ಸೆಲ್) ಆದಿಶೇಷು ಅತಿಥಿ ಗೃಹ
ತಿ.ತಿ.ದೇ., ತಿರುಮಲೆ.
ದೂರವಾಣಿ ಸಂಖ್ಯೆ :- 0877 - 2263001, 2263472.

ಈ ಮೇಲ್ ಐ.ಡಿ. :-
cdmc.ttd@tirumala.org



## ಧಾರಾವಾಹಿ

# ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ

## ತಿರುಮಲೆಯ ಆಲಯ ವಿವರ

- ಡಿ॥ ಬಿ.ಎನ್.ಶ್ರೀನಿವಾಸನ್

**ಬಂಗಾರದ ಬಾಗಿಲು:**

ಗರ್ಭಗೃಹದತ್ತ ನಡೆಯಲು ತಿರುಮಾಮಣಿ ಮಂಟಪದಿಂದ ಬಂಗಾರದ ಬಾಗಿಲಿನ ಮೂಲಕ ಒಳಹೋಗಬೇಕು. ಬಂಗಾರದ ಬಾಗಿಲಿನ ಎರಡೂ ಬದಿಗಳಲ್ಲಿ ಎತ್ತರವಾದ ಜಯ ವಿಜಯ ದ್ವಾರಪಾಲಕರ ತಾಮ್ರ ವಿಗ್ರಹಗಳನ್ನು ಕಾಣಬಹುದು. ಬಾಗಿಲುಗಳು ಬಂಗಾರದ ತೆಳುವಾದ ತಗಡಿನಿಂದ ಹೊದಿಸಲ್ಪಟ್ಟಿದ್ದಾಗಿ ವಿವಿಧ ಭಂಗಿಗಳಲ್ಲಿ ಇರುವ ವಿಷ್ಣುಪ್ರತಿಮೆಗಳನ್ನು ಹೊಂದಿವೆ. ವಿಷ್ಣುವು ತನ್ನ ಐದೂ ರೂಪಗಳಲ್ಲಿ - ಪರ,ವ್ಯೂಹ, ವಿಭವ, ಅರ್ಚಾ ಅಂತರ್ಯಾಮಿ ರೂಪಗಳಲ್ಲಿ ಚಿತ್ರಿತವಾಗಿರುವ ಈ ಬಾಗಿಲ ಬಳಿಯಲ್ಲಿಯೇ ಸುಪ್ರಭಾತವನ್ನು ಹಾಡಲಾಗುತ್ತದೆ. ಗರ್ಭಗೃಹದಲ್ಲಿರುವ ಅರ್ಚಾಮೂರ್ತಿಯ ಮುಂದೆ ಅಲ್ಲವೆಂಬುದೂ ಗಮನಾರ್ಹವಾಗುತ್ತದೆ.

**ಸ್ನಪನ ಮಂಟಪ**

ಬಂಗಾರದ ಬಾಗಿಲನ್ನು ದಾಟಿ ಅರೆಗತ್ತಲಾದ ಸ್ನಪನ ಮಂಟಪಕ್ಕೆ ಬರುತ್ತೇವೆ. ಇದನ್ನು ತಿರುವಿಳಂಕೋಯಿಲ್ ಎಂದೂ ಕರೆಯುವರು. ಈ ಮಂಟಪದ ಮುಂಭಾಗವನ್ನು ಎರಡೂ ಕಡೆಯಲ್ಲಿ ಎರಡು ಕೋಣೆಗಳಾಗಿ ವಿಂಗಡಿಸಲಾಗಿದೆ. ಈಗಿರುವ ಸ್ನಪನಮಂಟಪವನ್ನು ವಿಜಯನಗರದ ಕಾಲಕ್ಕೆ ಒಯ್ಯಬಹುದು. ಇಲ್ಲಿನ ಕಂಬಗಳಲ್ಲಿ ಉತ್ತಮವಾದ ಉಬ್ಬು ಶಿಲ್ಪಗಳಿದ್ದು ವಿಜಯನಗರ ಕಾಲಕ್ಕೆ ಸೇರಿದ ಮಾದರಿಗಳಾಗಿವೆ. ಬಾಲಕೃಷ್ಣ, ಯೋಗನರಸಿಂಹ,ಕಾಳೀಯಮರ್ದನ ಮುಂತಾದ ಶಿಲ್ಪಗಳಿವೆ. ಒಂದು ಗಮನಾರ್ಹ ಉಬ್ಬು ಶಿಲ್ಪವೆಂದರೆ ಕುಳಿತ ಭಂಗಿಯ ವಿಷ್ಣುಮೂರ್ತಿ. ನಾಲ್ಕು ಕೈಗಳಿದ್ದು ಮೇಲಿನ ಕೈಗಳಲ್ಲಿ ಚಕ್ರಶಂಖಗಳನ್ನು ಹಿಡಿದಿದ್ದಾನೆ. ಶ್ರೀದೇವಿ ಭೂದೇವಿಯರು ಎಡ ಬಲಗಳಲ್ಲಿ ಸುಖಾಸನ ಭಂಗಿಯಲ್ಲಿ ಕುಳಿತಿದ್ದಾರೆ.

**ರಾಮರ್ ಮೇಡೈ:**

ಸ್ನಪನ ಮಂಟಪವನ್ನು ದಾಟಿದ ನಂತರ ರಾಮರ್ ಮೇಡೈಗೆ ಬರುತ್ತೇವೆ. ಮೊದಲಿಗೆ ಮುಕ್ಕೋಟಿ ಪ್ರದಕ್ಷಿಣದ ಮೂರು ಕಡೆಗಳ ಪ್ರದಕ್ಷಿಣಾಪಥ ರಾಮರ್‌ಮೇಡೈಯೊಡನೆ ಸೇರಿ ಪೂರ್ತಿಯಾದ ಪ್ರದಕ್ಷಿಣಾಪಥವಾಗಿದ್ದಿರಬೇಕು. ಕ್ರಿ.ಶ.1262-1265ರಲ್ಲಿ ರಾಮರ್‌ಮೇಡೈಯ ಎರಡು ಕಡೆಗಳಲ್ಲಿ ಪಥವನ್ನು ಮುಚ್ಚಿ ಒಂದು ಕೋಣೆಯನ್ನಾಗಿಸಿರಬೇಕು. ಈಗ ರಾಮರ್‌ಮೇಡೈಯಲ್ಲಿ ಎರಡು ಸಣ್ಣ ಜಗಲಿಗಳಿದ್ದು ಅಂಗದ, ಹನುಮಂತ ಮೊದಲಾದ ವಿಗ್ರಹಗಳನ್ನು ಇಡಲಾಗಿದೆ. ಒಬ್ಬ ಪರಿಚಾರಕನು ದೀಪವನ್ನು ಹಿಡಿದಿರುವ ವಿಗ್ರಹವೂ ಒಂದಿದೆ. ಮೂಗಿನ ಮೇಲೆ ಬೆರಳಿಟ್ಟು ಆಶ್ಚರ್ಯವನ್ನು ಸೂಚಿಸುತ್ತಿರುವ ವಾನರ ಶಿಲ್ಪ ಗಮನಾರ್ಹವಾದದ್ದು. ಈ ಶಿಲ್ಪವನ್ನು ವಾಲಿಯ ಸೋದರ ಸುಗ್ರೀವನದೆಂದು ಕಲಾ ಚರಿತ್ರಕಾರ ಪ್ರಾಚಾರ್ಯ ಸಿ.ಶಿವರಾಮ ಮೂರ್ತಿ ಅವರು ಸರಿಯಾಗಿಯೇ ಗುರುತಿಸಿದ್ದಾರೆ. ಈಗ ಮದರಾಸು ಪುರಾವಸ್ತು ಸಂಗ್ರಹಾಲಯದಲ್ಲಿರುವ ತಂಜಾವೂರಿನ ವಡಕ್ಕು ಪುನಿಯೂರಿನ ಹನುಮಂತ ವಿಗ್ರಹದಂತೆಯೇ ಈ ವಿಗ್ರಹವೂ ಇರುವುದರಿಂದ ಎರಡೂ ವಿಗ್ರಹಗಳೂ ಚೋಳರ ಆದಿಕಾಲಕ್ಕೆ ಸೇರಿದವಾಗಿರಬೇಕು.

**ಮುಕ್ಕೋಟಿ ಪ್ರದಕ್ಷಿಣ:**

ಮೂಲ ಗರ್ಭಗುಡಿಗೂ ಅದರ ಮುಖಮಂಟಪವಾದ-ಇಂದು ಸಾಯಣ ಮಂಟಪವೆಂದು ಕರೆಯಲಾಗುವ ಅದರ ಮುಖ ಮಂಟಪಕ್ಕೂ, ಹತ್ತಿರವಾದ ಮೂಲ ಪ್ರದಕ್ಷಿಣಾ ಪಥವೆಂದರೆ ಮುಕ್ಕೋಟಿ ಪ್ರದಕ್ಷಿಣ. ಆಲಯದಲ್ಲಿ ಈಗ ಈ ಪ್ರದಕ್ಷಿಣಾ ಪಥವನ್ನು ವೈಕುಂಠ ಏಕಾದಶಿಯಂದು ಮಾತ್ರವೇ ತೆರೆಯಲಾಗುತ್ತದೆ. ಇದು ಉತ್ತರ ದಕ್ಷಿಣ ಪಶ್ಚಿಮಗಳಲ್ಲಿ ಮಾತ್ರವೇ ಸುತ್ತು ಬರುವುದು. ಇದೊಂದು ಮೂರು ಭಾಗದ ಕಂಬಗಳಿಂದ

ಕೂಡಿದ ನಿರ್ಮಾಣ.ದಕ್ಷಿಣಭಾಗದಲ್ಲಿ ಆರು ಕಂಭಗಳು, ಪಶ್ಚಿಮದಲ್ಲಿ ನಾಲ್ಕು, ಉತ್ತರದಲ್ಲಿ ಏಳು ಕಂಬಗಳ ಎರಡು ಸಾಲುಗಳಿವೆ. ಎಲ್ಲ ಕಂಬಗಳೂ ದುಂಡಗಿದ್ದು ಚೋಳರ ಕಾಲದ ಬೋದಿಗೆಗಳನ್ನು ಹೊಂದಿವೆ. ಉತ್ತರದಲ್ಲಿ ವಿಷ್ವಕ್ಸೇನರ ಮಂದಿರವಿದೆ. ಉತ್ತರದ ಗೋಡೆಯಲ್ಲಿ ಹಲವು ಶಿಲ್ಪಗಳಿವೆ.

**ಸಾಯಣ ಮಂಟಪ:**

ಇನ್ನೂ ಪಶ್ಚಿಮದಲ್ಲಿ ಮೊಟ್ಟಮೊದಲಿಗೆ ಅಂತರಾಳವಾಗಿರಬಹುದಾದ ಸಾಯಣ ಮಂಟಪವಿದೆ. 18 ಅಡಿ 6 ಅಡಿಗಳ ಆಯತಾಕಾರದ ಕೋಣೆಯಿದು. ಈ ಕೋಣೆಯಲ್ಲಿ ಗಮನಿಸತಕ್ಕ ಯಾವುದೇ ಶಿಲ್ಪವಾಗಲೀ ಚಿತ್ರವಾಗಲೀ ಇಲ್ಲ. ಸ್ವಾಮಿಯನ್ನು ಏಕಾಂತಸೇವೆಯ ಹೊತ್ತಿನಲ್ಲಿ ಇಲ್ಲಿ ನಿದ್ದೆ ಗೊಳಿಸಲಾಗುತ್ತದೆ. (ಶಯನ ಮಂಟಪವೇ ಸಾಯಣ ಮಂಟಪವಾಗಿದೆ.)

**ಗರ್ಭಗೃಹ:**

ಸಾಯಣ ಮಂಟಪದ ಪಶ್ಚಿಮಕ್ಕೆ ಇರುವುದೇ ಗರ್ಭಗೃಹ. ಗರ್ಭಗುಡಿಗೂ ಸಾಯಣ ಮಂಟಪಕ್ಕೂ ನಡುವೆಯಿರುವ ಹೊಸ್ತಿಲನ್ನು ಕುಲಶೇಖರ ಆಳ್ವಾರರ ಸ್ಮರಣಾರ್ಥವಾಗಿ ಗೌರವದಿಂದ ಕುಲಶೇಖರಪ್ಪಡಿ ಎನ್ನುವರು. ಯಾವ ಭಕ್ತರೂ ಇದರ ಮೇಲೆ ನಿಲ್ಲುವುದಾಗಲೀ,ಇಲ್ಲಿಂದ ಮುಂದಕ್ಕೆ ನಡೆದು ಗರ್ಭಗೃಹವನ್ನು ಸೇರುವುದಾಗಲೀ ಮಾಡುವುದಿಲ್ಲ.

ಗರ್ಭಗೃಹವು 12 ಅಡಿ ಚೌಕಾಕಾರದ ನಿರ್ಮಿತ. ಇದರ ಹಾಗೂ ಸಾಯಣ ಮಂಟಪದ ಗೋಡೆಗಳು ಮಧ್ಯೆ ಗಾಳಿಯಾಡುವ ಎರಡೆರಡು ಗೋಡೆಗಳ ಸಂಯುಕ್ತಗಳು. ಈಗಿರುವ ಗರ್ಭಗೃಹದ ಗೋಡೆಗಳು ಕತ್ತರಿಸಿದ ಕಲ್ಲುಗಳಿಂದಾಗಿದ್ದು 8-9 ನೇ ಶತಮಾನದ್ದಾಗಿರಬೇಕು. ದಕ್ಷಿಣ ಭಾರತದಲ್ಲಿ ಗರ್ಭಗೃಹ, ಮುಖಮಂಟಪ ಪ್ರದಕ್ಷಿಣಾ ಪಥಗಳ ಆಲಯ ನಮೂನೆಯು 8 ನೇ ಶತಮಾನದ ಹೊತ್ತಿಗೆ ಪ್ರತಿಸ್ಥಾಪಿತವಾಗಿರಬೇಕು,

**ಮುಖ್ಯಾಲಯದ ವಾಸ್ತುಶಿಲ್ಪ ಲಕ್ಷಣಗಳು:**

ಸಾಯಣಮಂಟಪ, ಅಂತರಾಳ,ಗರ್ಭಗೃಹಗಳಲ್ಲಿ ಕಂಡುಬರುವ ವಾಸ್ತು ಶಿಲ್ಪ ಲಕ್ಷಣಗಳು ವೈವಿಧ್ಯಮಯವಾಗಿದೆ. ಉತ್ತರ ದಕ್ಷಿಣದ ಗೋಡೆಗಳು ಪೂರ್ವಪಶ್ಚಿಮವಾಗಿ ನಾಲ್ಕು ವಿಭಾಗವಾಗಿವೆ. ನಡುವಣ ಎರಡು ವಿಭಾಗಗಳು ಹೆಚ್ಚು ಅಗಲವಾಗಿವೆ. 1,2,4 ನೇ ವಿಭಾಗಗಳು ಎತ್ತರದ ಅಧಿಷ್ಠಾನದಲ್ಲಿದ್ದು ಇಲ್ಲಿ ಉಪಾನ,ಪಟ್ಟ,ಅರ್ಧಪದ್ಮ, ಎರಡು ಪಟ್ಟಾಗಳು, ಪಟ್ಟ, ತ್ರಿಪಟ್ಟ, ಊರ್ಧ್ವಪದ್ಮ, ಪಟ್ಟ ಮೊದಲಾದವುಗಳಿವೆ.ಈ ಮೂರು ವಿಭಾಗಗಳಲ್ಲಿನ ಗೋಡೆಗಳ ಮೇಲಿನ ಅಲಂಕಾರಗಳೂ ವಿಭಿನ್ನವಾಗಿವೆ. ಒಂದನೇ ವಿಭಾಗದ ಗೋಡೆಗಳು-ಸಾಲ ಕೋಷ್ಠ. ಎರಡು ಗೋಡೆಗಂಬಗಳು,ಕೂಟ ಪಂಜರ ಹೊಂದಿವೆ. ಎರಡನೇ ವಿಭಾಗದ ಗೋಡೆಗಳು ಗೋಡೆಗಂಬ, ಎರಡು ಕಂಬಗಳ ನಡುವೆ ಕುಂಭ ಪಂಜರ,ಕೂಟ ಪಂಜರಗಳನ್ನು ಒಳಗೊಂಡಿವೆ. ಮೂರನೇ ವಿಭಾಗದ ಗೋಡೆಗಳು ಎರಡು ಒಳಕಂಬ ಗಳ ನಡುವೆ ಸಾಲ ಕೋಷ್ಠಗಳನ್ನು ಹೊಂದಿವೆ. ನಾಲ್ಕನೇ ವಿಭಾಗದ ಗೋಡೆಗಳಲ್ಲಿ ಕುಂಭಪಂಜರ ಕಂಬಗಳ ಅನುಕ್ರಮಣಿಕೆಯಲ್ಲಿವೆ. ಗರ್ಭಗೃಹದ ಹಿಂದಿನ ಗೋಡೆ ಮೂರು ಭಾಗವಾಗಿ ನಡು ವಿನದು ಸ್ವಲ್ಪ ಪಶ್ಚಿಮಕ್ಕೆ ಚಾಚಿದ್ದು. ಎರಡು ಗೋಡೆಗಂಬಗಳ ನಡುವೆ ಸಾಲಕೋಷ್ಠವಿದೆ. ಉತ್ತರ ದಕ್ಷಿಣಗಳಲ್ಲಿ ಒಳಗಂಬ, ಕೂಟಪಂಜರ, ಒಳಗಂಬ, ಕೂಟ ಪಂಜರ, ಒಳಗಂಬ, ಕುಂಭ ಪಂಜರಗಳುಂಟು. ಗರ್ಭಗೃಹ ಅಂತರಾಳಗಳು ಆಕಾರದಲ್ಲಿ ಚಚ್ಚೌಕವಾಗಿದ್ದು ಹೊರಗೋಡೆಗಳ ಮೇಲೆ ಹಲವು ವಾಸ್ತು ಲಕ್ಷಣಗಳನ್ನು ಕಾಣಬಹುದಾಗಿದೆ.

ಗರ್ಭಗೃಹದ ಗೋಡೆಗಳು 7 ಅಡಿ 2 ಅಂಗುಲ ದಪ್ಪವಾಗಿವೆಂದು ತಿಳಿದು ಬರುತ್ತದೆ. ಇದು ಒಟ್ಟು ಸುಮಾರು ಐದು ಹಸ್ತಗಳ ದಪ್ಪವಾಗುವುದು. ಗರ್ಭಗೃಹದ ಒಳ ಅಳತೆ 12 ಅಡಿ 9 ಅಂಗುಲ ಚೌಕ, ಅಥವಾ 9 ಹಸ್ತ ಚೌಕ. ಆಗಮಗಳಲ್ಲಿ ಹೇಳಿರುವಂತೆ ಇದು ಅತಿ ಹಿರಿದಾಗಿದ್ದು ಧ್ರುವಮೂರ್ತಿ ಎತ್ತರವಾಗಿರುವುದರಿಂದ ಈ ವಿಸ್ತಾರದ ಅಳತೆಯನ್ನು ಹೊಂದಲಾಗಿದೆ. ಗೋಡೆಗಳು ಅತಿ ದಪ್ಪವಾಗಿರಲು ಕಾರಣ ಹಿಂದೆಯೇ ತಿಳಿಸಿದಂತೆ ಗಾಳಿಯ ಸ್ಥಳವಿರುವ ಎರಡು ಗೋಡೆಗಳಿಂದಾಗಿರುವಿಕೆಯೇ ಆಗಿದೆ. ಆಲಯಗಳಲ್ಲಿ ಜೀರ್ಣೋದ್ಧಾರಕಾರ್ಯ ನಡೆಯುತ್ತಲೇ ಇರುವುದು ಎಂಬ ಮಾತಿಗೆ ತಿರುಮಲೆಯ ಆಲಯ ಹೊರತೇನಲ್ಲ. 3.3.17 ನೇ ಶಾಸನವು ವೀರನರಸಿಂಹ ಯಾದವರಾಯನು ತನ್ನ ಆಳ್ವಿಕೆಯ 40 ನೇ ವರ್ಷದಲ್ಲಿ ನಡೆಸಿದ ಜೀರ್ಣೋದ್ಧಾರ ಕಾರ್ಯವನ್ನು ವಿವರಿಸುತ್ತದೆ. ಗರ್ಭಗುಡಿಯಲ್ಲಿ ಒಂದೇ ಒಂದು ಮೂಲ ಮೂರ್ತಿಯಿದೆ. ಇದೊಂದು ವೈಶಿಷ್ಟ್ಯ. ಕಾರಣ ದೇಶದಲ್ಲಿರುವ ವೈಷ್ಣವ ಆಲಯಗಳಲ್ಲಿ ಇದು ಒಂದೇ ಏಕಮೂರ್ತಿ ಆಲಯವಾಗಿರುವುದು.

ಹೀಗಾಗಿ ಹಳೆಯ ಕಟ್ಟಡಗಳು ಬಹುಕಾಲ ನಿಲ್ಲದೆ ಪುನಃ ದುರುಸ್ತು ಹೊಂದಿ ಜೀರ್ಣೋದ್ಧಾರವಾದವೆಂದು ತಿಳಿಯುವುದರಲ್ಲಿ ತಪ್ಪೇನಿಲ್ಲ. ಗರ್ಭಗೃಹದ ಎರಡು ಗೋಡೆಗಳು ವಾಸ್ತು ಶಿಲ್ಪದ ಬೆಳವಣಿಗೆಯಲ್ಲಿ ಒಂದು ಸಮಸ್ಯೆಯನ್ನು ಸೃಷ್ಟಿಸಿದೆ. ಈ ಅಂಶವನ್ನು ಇನ್ನೊಂದು ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

**ಶ್ರೀವೆಂಕಟೇಶ್ವರಸ್ವಾಮಿ ಧ್ರುವಬೇರ-ಸ್ವಯಂಭು ಮೂರ್ತಿ ಪರಂಪರೆ:**

ತಿರುಮಲೆಯಲ್ಲಿರುವ ಮೂರ್ತಿಗಳೆಂದರೆ ಶ್ರೀ ವೆಂಕಟೇಶ್ವರಸ್ವಾಮಿಯ ಮೂಲಮೂರ್ತಿ-ಧ್ರುವಬೇರ ಜೊತೆಗಿರುವ ಪಂಚಲೋಹ ವಿಗ್ರಹಗಳು, ಹಾಗೂ ಕಂಚಿನ ರಾಮಕೃಷ್ಣರ ಉತ್ಸವಮೂರ್ತಿಗಳು.

ಪರಂಪರೆಯ ಹೇಳಿಕೆಯಂತೆ ತಿರುಮಲೆಯ ಆಲಯದಲ್ಲಿನ ಮೂರ್ತಿಯನ್ನು ಮಾನವ ಹಸ್ತವು ನಿರ್ಮಾಣ ಮಾಡದೆ, ದೇವರೇ ಮಾನವ ಮಸ್ತಿಷ್ಕಕ್ಕೆ ಅರಿವಾಗುವ ರೀತಿಯಲ್ಲಿ ವಿಗ್ರಹ ರೂಪದಲ್ಲಿ ಪ್ರತ್ಯಕ್ಷನಾದ. ಹೀಗಾಗಿ ಪರಮೂರ್ತಿಯೇ ನಮ್ಮ ಆಧ್ಯಾತ್ಮಿಕ ಉನ್ನತಿಕೆಗಾಗಿ ಭೂಮಿಗೆ-ತಿರುಮಲೆಗೆ ಅರ್ಚಾ ರೂಪದಲ್ಲಿ ಬಂದಿದೆಯೆಂದು ನಮ್ಮಾಳ್ವಾರರು ಹೇಳುತ್ತಾರೆ.

ನಾವು ಇಂದು ಪೂಜಿಸುತ್ತಿರುವಂತೆಯೇ ಸರ್ವ ದೇವತೆಗಳೂ ದಿನವೂ ಬೆಟ್ಟದಮೇಲಿನ ಸ್ವಾಮಿಯನ್ನು ಪೂಜಿಸುವರೆಂದು ಎಲ್ಲ ಆಳ್ವಾರರೂ ಹೇಳಿದ್ದಾರೆ.

ಶ್ರೇಷ್ಠ ಶ್ರೀವೈಷ್ಣವ ಸಂತರಾದ ರಾಮಾನುಜರು ತಮ್ಮ ಮೇರುಕೃತಿ ಶ್ರೀಭಾಷ್ಯದ ಮಂಗಳ ಶ್ಲೋಕಗಳಲ್ಲಿ ಶ್ರೀನಿವಾಸನನ್ನು ಬ್ರಹ್ಮನೆಂದೇ ಹೇಳುತ್ತ ಮಾನವ ಜಗತ್ತಿನ ಉದ್ಧಾರಕವಾದ ಸ್ವಾಮಿಯ ಕರುಣೆಯನ್ನು ಅವಧಾರಿಸುತ್ತಾರೆ. ಹೀಗಾಗಿ ನಮ್ಮ ಉದ್ಧಾರಕ್ಕಾಗಿಯೇ ಬ್ರಹ್ಮನು ಶ್ರೀನಿವಾಸನಾಗಿ ತಿರುಮಲೆಯಲ್ಲಿ ಸ್ವಯಂಭುವಾಗಿ ಅವತರಿಸಿದ ಎಂಬುದು ಪರಂಪರೆಯಾಗಿದೆ.

**ಆಗಮ ಪ್ರಮಾಣ:**

ವೈಖಾನಸ ಆಗಮ,ಪಾಂಚರಾತ್ರ ಆಗಮ,ತಂತ್ರಶಾಸ್ತ್ರ, ವಿಷ್ಣು ಧರ್ಮೋತ್ತರ-ಮೊದಲಾದ ಆಗಮ ಶಾಸ್ತ್ರ ಗ್ರಂಥಗಳು ದೇವಾಲಯ ನಿರ್ಮಾಣ ಹಾಗೂ ವಿಗ್ರಹ ರಚನಾ ವಿಧಾನಗಳಲ್ಲಿನ ನೀತಿ ನಿಯಮಗಳನ್ನು ತಿಳಿಸುವ ಮೂಲ ಗ್ರಂಥಗಳಾಗಿವೆ.

ಆಗಮ ಶಾಸ್ತ್ರ ಕೃತಿಗಳಲ್ಲಿ ವಿಗ್ರಹಗಳ ಪ್ರಮಾಣಗಳು, ಭಂಗಿಗಳು, ಕೈಕಾಲುಗಳ ಸ್ಥಿತಿ, ಆಯುಧಸ್ವರೂಪ,ಅವುಗಳಿಗೆ ಅಲಂಕಾರವಾಗಿ ತೊಡಿಸುವ ಆಭರಣಗಳು-ಮೊದಲಾದ ವಿವರಗಳನ್ನೆಲ್ಲ ನೀಡಲಾಗಿದೆ. ಇವುಗಳನ್ನು ಆಚರಣೆಗೆ ತರುವಲ್ಲಿ ದೋಷವೇನೇ ಇದ್ದರೂ,ಅಥವಾ ವ್ಯತ್ಯಾಸವೇನೇ ಆದರೂ ಆ ಮೂರ್ತಿಯನ್ನು ಪ್ರತಿಷ್ಠಾಪಿಸುವುದಾಗಲೀ,ಪೂಜಿಸುವುದಾಗಲೀ ನಡೆಯದು.

ಶುಕ್ರನೀತಿಯಂತೆ ದರ್ಶಕರನ್ನು ಧ್ಯಾನದ, ಕ್ರಿಯೆಯ ಮೇಲಿನ ಸ್ತರಕ್ಕೆ ತೆಗೆದುಕೊಂಡು ಹೋಗಬಲ್ಲ ವಿಗ್ರಹ ಮಾತ್ರವೇ ಆದರ್ಶವಾದದ್ದು. ಭಕ್ತರಿಗೆ ವಿಗ್ರಹದ ನೇತ್ರಗಳು ವಿಶೇಷ ಧ್ಯಾನಾಕರ್ಷಕವಾಗಿರುವುದರಿಂದ, ನಯನಗಳು ಮೇಲೆ ಕೆಳಗೆ ನೋಡದಂತೆ, ಮುಚ್ಚಿರದಂತೆ, ನೇರವಾಗಿ ನೋಡುತ್ತ ತೃಪ್ತಿದಾಯಕವಾಗಿರಬೇಕು. ಪ್ರತಿಮಾ ಮಾನ ಲಕ್ಷಣದ ಪ್ರಕಾರ ವಿಗ್ರಹದ ಬಾಯಿ ಮುಗುಳುನಗೆಯಿಂದಲೂ, ಮುದ ಸೂಚನೆಯಿಂದಲೂ, ಒಳ್ಳೆಯ ಗುಣಗಳಿಂದಲೂ ಆಕರ್ಷಕವಾಗಿರಬೇಕು. ಬಾಯಿ ಒರಟಾಗಿ, ಪ್ರಚೋದಕವಾಗಿ, ಕಹಿಯಾಗಿ, ವೃತ್ತಾಕಾರವಾಗಿ ಇರಬಾರದು. ಪ್ರತಿಮಾಮಾನ ಲಕ್ಷಣದ ಪ್ರಕಾರ ಕೊಡೆಯಂತೆ ಕೆತ್ತಿರುವ ಶಿರವು ವೃದ್ಧಿಯನ್ನು ಉಂಟು ಮಾಡುತ್ತದೆ. ಎತ್ತರವಾದ ಹಣೆ ಹಾಗೂ ಸುಂದರವಾಗಿ ಕೆತ್ತಲಾದ ಹುಬ್ಬುಗಳಿರುವ ವಿಗ್ರಹದಿಂದ ಶಾಶ್ವತವಾದ ಅಭಿವೃದ್ಧಿ ಉಂಟಾಗುತ್ತದೆ. ಗಳವು-ಕೊರಳು- ಶಂಖದಾಕಾರದಲ್ಲಿದ್ದು, ದೇಹ ಸಿಂಹ ಸದೃಶವಾಗಿ, ಕೈಗಳು ಆನೆಯ ಸೊಂಡಿಲನ್ನು ಹೋಲುತ್ತ, ತೊಡೆಗಳು ಬಾಳೆಯ ಕಂಭಗಳನ್ನು ಹೋಲುವಂತಿರಬೇಕು. ಸುಂದರವಾದ ಉದರ ಹಾಗೂ ಪ್ರಸನ್ನವಾದ ಪಾದಗಳು ಯಾವುದೇ ವಿಗ್ರಹಕ್ಕೂ ಶೋಭೆಯನ್ನು ತರುತ್ತವೆ. ವಿಗ್ರಹಗಳು ಸುಂದರವಾಗಿರಬೇಕೆಂದೂ ಶುಕ್ರನೀತಿ ಹೇಳುತ್ತದೆ. ಶಾಸ್ತ್ರೀಯ ಸೂತ್ರಗಳನ್ನು ಅನುಸರಿಸುತ್ತಲೇ ವಿಗ್ರಹವನ್ನು ಸುಂದರಗೊಳಿಸುವ ದಿಸೆಯಲ್ಲಿ ಶಿಲ್ಪಿಗಳಿಗೆ ತಕ್ಕಮಟ್ಟಿಗಿನ ಸ್ವಾತಂತ್ರ್ಯವನ್ನು ನೀಡಲಾಗಿದೆ.ಆದರೆ ವಿಗ್ರಹವನ್ನು ನಿರ್ಮಿಸುವಾಗ ವಿಗ್ರಹದ ಉದ್ದೇಶ ನೋಡುಗರ ಧ್ಯಾನಕ್ಕೆ ಯೋಗಕ್ಕೆ ಪ್ರೋತ್ಸಾಹ ನೀಡುವುದೇ ಆಗಿರಬೇಕು ಎಂಬ ಅಂಶವನ್ನು ಮನದಲ್ಲಿಟ್ಟು ಕೊಳ್ಳಬೇಕಿತ್ತು.


ಮರೀಚಿ ಸಂಹಿತೆಯು ವಿಷ್ಣುವಿನ ಅರ್ಚಾರೂಪವನ್ನು ಮೂರು ಮುಖ್ಯವಿಧಗಳಾಗಿ ಚಿತ್ರಿಸಿದೆ. ಸ್ಥಾನಕ (ನಿಂತಿರುವುದು) ಆಸನ (ಕುಳಿತಿರುವುದು) ಶಯನ (ಮಲಗಿರುವುದು) ಭಂಗಿಗಳಲ್ಲಿದ್ದು, ಈ ಮೂರೂ,ಅವುಗಳ ವಿವಿಧ ಸ್ವರೂಪಗಳನ್ನು ಅನುಸರಿಸಿ ಪುನಃ ನಾಲ್ಕು ವಿಧಗಳಾಗಿ ವಿಂಗಡಿಸಲ್ಪಟ್ಟಿವೆ. ಇವುಗಳೆಂದರೆ ಯೋಗ,ಭೋಗ,ವೀರ ಹಾಗೂ ಅಭಿಚಾರಕ. ಯಾವ ರೂಪದ ವಿಗ್ರಹವಾಗಿರಬೇಕು ಎಂಬುದನ್ನು ವಿಗ್ರಹ ಸ್ಥಾಪನೆಯ ಉದ್ದೇಶ ಹಾಗೂ ಪರಿಸರಗಳು ತೀರ್ಮಾನಿಸುತ್ತವೆ. ಭಕ್ತರು ಯೋಗ ಮಾರ್ಗವನ್ನು ಅಪೇಕ್ಷಿಸಿದರೆ ಯೋಗ ಮೂರ್ತಿಯನ್ನು ಆಯ್ಕೆ ಮಾಡಲಾಗುತ್ತದೆ.

**- ಮುಂದುವರೆಯುತ್ತದೆ.**

# ತಿರುಮಲೆ ತಿರುಪತಿ ದೇವಸ್ಥಾನಗಳು

## ಜನವರಿ - 2025

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |



ತಿರುಮಲೆ
ಶ್ರೀ ಭೂ ಸಮೇತ ಶ್ರೀಮಲೆಯಪ್ಪ ಸ್ವಾಮಿಯವರು

## ಫೆಬ್ರವರಿ - 2025

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | |

## ಮಾರ್ಚ್ - 2025

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

### ಜನವರಿ - 2025

01 ಆಂಗ್ಲ ಹೊಸ ವರ್ಷಾರಂಭ
06 -12 ರ ವರೆಗೆ ಶ್ರೀ ಆಂಡಾಳ್ ನೀರಾಟೋತ್ಸವ
10 ವೈಕುಂಠ ಏಕಾದಶಿ
13 ಭೋಗಿ, ಭೋಗಿತೇರು
14 ಮಕರ ಸಂಕ್ರಾಂತಿ
15 ಕನುಮ, ಶ್ರೀ ಗೋದಾದೇವಿ ಪರಿಣಯೋತ್ಸವ,
ತಿರುಮಲೆ, ಸ್ವಾಮಿಯವರ ಪ್ರಣಯ ಕಲಹ ಮಹೋತ್ಸವ
18 ಶ್ರೀ ತ್ಯಾಗರಾಜರ ಆರಾಧನೆ
26 ಗಣತಂತ್ರದಿನೋತ್ಸವ
29 ಶ್ರೀ ಪುರಂದರದಾಸರ ಆರಾಧನೆ
29-ಫೆಬ್ರವರಿ 06 ರ ವರೆಗೆ ದೇವುನಿ ಕಡಪ
ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

### ಫೆಬ್ರವರಿ - 2025

03 ವಸಂತ ಪಂಚಮಿ
04 ರಥಸಪ್ತಮಿ
05 ಭೀಷ್ಮಾಷ್ಟಮಿ
06 ಮಧ್ವನವಮಿ
06-12 ತಿರುಪತಿ, ಶ್ರೀ ಗೋವಿಂದರಾಜ ಸ್ವಾಮಿಯವರ ತೆಪ್ಪೋತ್ಸವಗಳು
08 ಭೀಷ್ಮ ಏಕಾದಶಿ
12 ರಾಮಕೃಷ್ಣತೀರ್ಥಮುಕ್ಕೋಟಿ
18-26 ಶ್ರೀನಿವಾಸಮಂಗಾಪುರಂ, ಶ್ರೀಕಲ್ಯಾಣವೆಂಕಟೇಶ್ವರ
ಸ್ವಾಮಿಯವರ ಬ್ರಹ್ಮೋತ್ಸವಗಳು
19-28 ತಿರುಪತಿ, ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
26 ಮಹಾಶಿವರಾತ್ರಿ

### ಮಾರ್ಚ್ - 2025

06-14 ತರಿಗೊಂಡ, ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯವರ
ಬ್ರಹ್ಮೋತ್ಸವಗಳು
09-13 ತಿರುಮಲೆ, ಸ್ವಾಮಿಯವರ ತೆಪ್ಪೋತ್ಸವಗಳು
14 ಶ್ರೀ ಲಕ್ಷ್ಮಿ ಜಯಂತಿ, ಹೋಳಿಹಬ್ಬ,
ಕುಮಾರಧಾರ ತೀರ್ಥ ಮುಕ್ಕೋಟಿ
26 ಅನ್ನಮಾಚಾರ್ಯ ವರ್ಧಂತಿ
27 ರಿಂದ ಏಪ್ರಿಲ್ 04 ರ ವರೆಗೆ ತಿರುಪತಿ,
ಶ್ರೀಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
30 ಶ್ರೀ ವಿಶ್ವಾವಸು ನಾಮ ಸಂವತ್ಸರ ಯುಗಾದಿ
31 ಮತ್ಸ್ಯ ಜಯಂತಿ

# ತಿರುಮಲೆ ತಿರುಪತಿ
# ದೇವಸ್ಥಾನಗಳು



ತಿರುಪತಿ
ಶ್ರೀ ಭೂ ಸಮೇತ ಶ್ರೀಗೋವಿಂದರಾಜ ಸ್ವಾಮಿಯವರು

## ಏಪ್ರಿಲ್ - 2025

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

## ಮೇ - 2025

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

## ಜೂನ್ - 2025

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |

## ಏಪ್ರಿಲ್ - 2025

**03-11** ವಾಯಲ್ಪಾಡು ,ಶ್ರೀ ಪಟ್ಟಾಭಿರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
**06** ಶ್ರೀರಾಮನವಮಿ
**06-14** ಒಂಟಿಮಿಟ್ಟ, ಶ್ರೀಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
**10-12** ತಿರುಮಲೆ ಸ್ವಾಮಿಯವರ ವಸಂತೋತ್ಸವಗಳು
**10-12** ತಿರುಪತಿ, ಶ್ರೀಕೋದಂಡರಾಮ ಸ್ವಾಮಿಯವರ ತೆಪ್ಪೋತ್ಸವಗಳು
**12** ತುಂಬುರು ತೀರ್ಥಮುಕ್ಕೋಟಿ
**13- 21** ನಾಗುಲಾಪುರಂ, ಶ್ರೀವೇದನಾರಾಯಣ ಸ್ವಾಮಿಯವರ ಬ್ರಹ್ಮೋತ್ಸವಗಳು
**14** ತಮಿಳು ಹೊಸವರ್ಷಾರಂಭ, ಡಾ॥ ಅಂಬೇಡ್ಕರ್ ಜಯಂತಿ
**30** ಅಕ್ಷಯ ತೃತೀಯ, ಶ್ರೀಪರಶುರಾಮ ಜಯಂತಿ

## ಮೇ - 2025

**01** ಕಾರ್ಮಿಕರ ದಿನಾಚರಣೆ
**02** ಶ್ರೀರಾಮಾನುಜ ಜಯಂತಿ, ಶ್ರೀ ಶಂಕರಾಚಾರ್ಯ ಜಯಂತಿ
**03** ಶ್ರೀರಾಮ ಜಯಂತಿ
**06-08** ತಿರುಮಲೆ, ಶ್ರೀಪದ್ಮಾವತಿ ಶ್ರೀನಿವಾಸರ ಪರಿಣಯೋತ್ಸವ
**09-12** ತಿರುಜಾನೂರು, ಶ್ರೀ ಪದ್ಮಾವತಿ ಅಮ್ಮನವರ ವಸಂತೋತ್ಸವಗಳು
**11** ನೃಸಿಂಹ ಜಯಂತಿ
**11-19** ಹೃಷಿಕೇಶ/ ನಾರಾಯಣವನಂ, ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
**12** ಶ್ರೀ ಕೂರ್ಮ ಜಯಂತಿ, ಶ್ರೀ ಅನ್ನಮಾಚಾರ್ಯ ಜಯಂತಿ
**13** ತಿರುಪತಿ ಗಂಗಜಾತ್ರೆ
**19-27** ಕಾರ್ವೇಟಿನಗರಂ, ಶ್ರೀ ವೇಣು ಗೋಪಾಲ ಸ್ವಾಮಿಯವರ ಬ್ರಹ್ಮೋತ್ಸವಗಳು
**22** ಹನುಮ ಜಯಂತಿ

## ಜೂನ್ - 2025

**02-10** ತಿರುಪತಿ, ಶ್ರೀ ಗೋವಿಂದ ರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು
**06-10** ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವಗಳು
**07- 15** ಅಪ್ಪಲಾಯಗುಂಟ, ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
**09-11** ತಿರುಮಲೆ, ಸ್ವಾಮಿಯವರ ಜ್ಯೇಷ್ಠಾಭಿಷೇಕ
**17- 19** ತಿರುಚಾನೂರು, ಶ್ರೀ ಸುಂದರರಾಜ ಸ್ವಾಮಿಯವರ ಅವತಾರೋತ್ಸವಗಳು
**30 ರಿಂದ** ಜುಲೈ 02 ರ ವರೆಗೆ ಶ್ರೀನಿವಾಸಮಂಗಾಪುರಂ, ಶ್ರೀಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಸಾಕ್ಷಾತ್ಕಾರ ವೈಭವೋತ್ಸವಗಳು

# ತಿರುಮಲ ತಿರುಪತಿ ದೇವಸ್ಥಾನಗಳು



ಶ್ರೀನಿವಾಸಮಂಗಾಪುರಂ
ಶ್ರೀ ಭೂ ಸಮೇತ ಶ್ರೀಕಲ್ಯಾಣ ವೆಂಕಟೇಶ್ವರ ಸ್ವಾಮಿಯವರು

## ಜುಲೈ - 2025

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

## ಆಗಸ್ಟ್ - 2025

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

## ಸೆಪ್ಟೆಂಬರ್ - 2025

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | | | | |

### ಜುಲೈ - 2025

| | |
|---|---|
| 06-08 | ತಿರುಪತಿ, ಶ್ರೀ ಗೋವಿಂದರಾಜ ಸ್ವಾಮಿಯವರ ಜ್ಯೇಷ್ಠಾಭಿಷೇಕ |
| 06-09 | ತಿರುಪತಿ, ಶ್ರೀ ಕಪಿಲೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು |
| 10 | ಗುರುಪೂರ್ಣಿಮೆ, ವ್ಯಾಸ ಪೂರ್ಣಿಮೆ |
| 16 | ತಿರುಮಲೆ, ಸ್ವಾಮಿಯವರ ಆಣಿವರ ಆಸ್ಥಾನ |
| 19-22 | ತಿರುಪತಿ, ಶ್ರೀ ಕೋದಂಡರಾಮ ಸ್ವಾಮಿಯವರ ಪವಿತ್ರೋತ್ಸವಗಳು |
| 20 | ಆಡಿಕೃತ್ತಿಕ |
| 29 | ಗರುಡ ಪಂಚಮಿ |
| 30 | ಕಶ್ಯಪ ಮಹರ್ಷಿ ಜಯಂತಿ |


### ಆಗಸ್ಟ್ - 2025

| | |
|---|---|
| 02 | ಮಾತೃಶ್ರೀ ತರಿಗೊಂಡ ವೆಂಗಮಾಂಬ ವರ್ಧಂತಿ |
| 04-07 | ತಿರುಮಲೆ, ಸ್ವಾಮಿಯವರ ಪವಿತ್ರೋತ್ಸವಗಳು |
| 06-08 | ಕಾರ್ವೇಟಿನಗರಂ, ಶ್ರೀ ವೇಣುಗೋಪಾಲ ಸ್ವಾಮಿಯವರ ತೆಪ್ಪೋತ್ಸವಗಳು |
| 08 | ಶ್ರೀ ವರಮಹಾಲಕ್ಷ್ಮೀ ವ್ರತ |
| 09 | ಶ್ರೀ ವಿಖನಸ ಮಹಾಮುನಿ ಜಯಂತಿ, ಶ್ರೀ ಹಯಗ್ರೀವ ಜಯಂತಿ, ರಾಖಿ ಪೌರ್ಣಮಿ |
| 10 | ಗಾಯತ್ರಿ ಜಪ |
| 15 | ಸ್ವಾತಂತ್ರ್ಯ ದಿನಾಚರಣೆ |
| 16 | ಶ್ರೀ ಕೃಷ್ಣಾಷ್ಟಮಿ, ಗೋಕುಲಾಷ್ಟಮಿ |
| 27 | ಗಣೇಶ ಚತುರ್ಥಿ |
| 25 | ಬಲರಾಮಜಯಂತಿ, ವರಹಾಜಯಂತಿ |
| 28 | ಋಷಿ ಪಂಚಮಿ |

### ಸೆಪ್ಟೆಂಬರ್ - 2025

| | |
|---|---|
| 02-05 | ತಿರುಪತಿ, ಶ್ರೀ ಗೋವಿಂದರಾಜ ಸ್ವಾಮಿಯವರ ಪವಿತ್ರೋತ್ಸವಗಳು |
| 04 | ಶ್ರೀ ವಾಮನ ಜಯಂತಿ |
| 04- 07 | ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ಪವಿತ್ರೋತ್ಸವಗಳು |
| 04-07 | ದೇವುನಿಕಡಪ, ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು |
| 06 | ಅನಂತ ಪದ್ಮನಾಭವ್ರತ |
| 16-19 | ಅಪ್ಪಲಾಯಗುಂಟ, ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು |
| 24 ರಿಂದ | ಅಕ್ಟೋಬರ್ 02 ರ ವರೆಗೆ ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ನವರಾತ್ರಿ ಉತ್ಸವ |
| 24 ರಿಂದ | ಅಕ್ಟೋಬರ್ 02 ರ ವರೆಗೆ ತಿರುಮಲೆ, ಶ್ರೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು |
| 28 | ತಿರುಮಲೆ, ಸ್ವಾಮಿಯವರ ಗರುಡಸೇವೆ |
| 30 | ದುರ್ಗಾಷ್ಟಮಿ |

# ತಿರುಮಲೆ ತಿರುಪತಿ ದೇವಸ್ಥಾನಗಳು



ಅಪ್ಪಲಾಯಗುಂಟ
ಶ್ರೀ ಭೂ ಸಮೇತ ಶ್ರೀಪ್ರಸನ್ನ ವೆಂಕಟೇಶ್ವರ ಸ್ವಾಮಿಯವರು

## ಅಕ್ಟೋಬರ್ - 2025

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

## ನವೆಂಬರ್ - 2025

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 30 | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

## ಡಿಸೆಂಬರ್ - 2025

| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

### ಅಕ್ಟೋಬರ್ - 2025

02 ಗಾಂಧಿ ಜಯಂತಿ,ವಿಜಯದಶಮಿ
04-12 ವಾಯಲ್ಪಾಡು, ಶ್ರೀ ಪಟ್ಟಾಭಿರಾಮ ಸ್ವಾಮಿಯವರ ಪವಿತ್ರೋತ್ಸವಗಳು
05-08 ಹೃಷಿಕೇಶ, ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು
16-19 ಶ್ರೀನಿವಾಸಮಂಗಾಪುರಂ, ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು
20 ನರಕ ಚತುರ್ದಶಿ
21 ಶ್ರೀ ಕೇದಾರ ಗೌರಿ ವ್ರತ
23 ಯಮದ್ವಿತಿಯ, ಭಗಿನಿಹಸ್ತ ಭೋಜನ
25 ನಾಗರ ಪಂಚಮಿ
29 ತಿರುಮಲೆ, ಸ್ವಾಮಿಯವರ ಪುಷ್ಪಯಾಗ
31 ಯಾಜ್ಞವಲ್ಕ್ಯ ಜಯಂತಿ

### ನವೆಂಬರ್ - 2025


01-05 ನಾರಾಯಣವನಂ, ಶ್ರೀ ಕಲ್ಯಾಣವೆಂಕಟೇಶ್ವರ ಸ್ವಾಮಿಯವರ ತೆಪ್ಪೋತ್ಸವಗಳು
02 ಕೈಶಿಕ ದ್ವಾದಶಿ
05 ಕಾರ್ತೀಕ ಪೌರ್ಣಮಿ
14 ಮಕ್ಕಳ ದಿನಾಚರಣೆ
17 ಶ್ರೀ ಧನ್ವಂತರಿ ಜಯಂತಿ
17-25 ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು
21 ತಿರುಚಾನೂರು, ಶ್ರೀಪದ್ಮಾವತಿ ಅಮ್ಮನವರ ಗಜವಾಹನ ಸೇವೆ
25 ಪಂಚಮೀ ತೀರ್ಥ
26 ತಿರುಚಾನೂರು, ಶ್ರೀಪದ್ಮಾವತಿ ಅಮ್ಮನವರ ಪುಷ್ಪಯಾಗ
26 ಸುಬ್ರಹ್ಮಣ್ಯ ಷಷ್ಠಿ, ಸ್ಕಂದ ಷಷ್ಠಿ

### ಡಿಸೆಂಬರ್ - 2025

01 ಗೀತಾ ಜಯಂತಿ
02 ಶ್ರೀ ಚಕ್ರತೀರ್ಥ ಮುಕ್ಕೋಟಿ
03 ತಿರುಪತಿ, ಶ್ರೀ ಕಪಿಲೇಶ್ವರ ಸ್ವಾಮಿಯವರ ಆಲಯದಲ್ಲಿ ಕೃತಿಕ ದೀಪೋತ್ಸವ
03 ಹನುಮದ್ ವ್ರತ
07 ತಿರುಪತಿ, ಶ್ರೀ ಕಪಿಲೇಶ್ವರ ಸ್ವಾಮಿಯವರ ಬಿಲ್ವಾರ್ಚನೆ
16 ಧನುರ್ಮಾಸ ಪ್ರಾರಂಭ
30 ವೈಕುಂಠ ಏಕಾದಶಿ

# ರಂಗೋಲಿ ದಾಸರು
# ಶ್ರೀ ಗೋಪಾಲದಾಸರು

**- ಶ್ರೀಧರ ರಾಯಸಂ**



ಹಸಿದವರಿಗೆ ಅನ್ನ ಕೊಡಿರಿ

ದೀನರಿಗೆ ದ್ರವ್ಯದಾನ ಮಾಡಿರಿ

ಶ್ರೀನಿವಾಸನ ಪಾದವನ್ನು ಭಜಿಸಿರಿ

ಎಂಬ ನಿತ್ಯ ಮಂತ್ರ ಜಪಿಸಿದ ಭಾಗಣ್ಣ ಮುಂದೆ ಶ್ರೀ ವಿಜಯದಾಸರ ಶಿಷ್ಯರಾಗಿ, ಗೋಪಾಲದಾಸರು ಎಂದು ನಾಮಾಂಕಿತರಾಗಿ ಅನೇಕ ಕೀರ್ತನೆಗಳನ್ನು ರಚಿಸಿದ ದಾಸ ಚತುಷ್ಟಯರಲ್ಲಿ ಪ್ರಮುಖರು.

ಶ್ರೀ ಗೋಪಾಲದಾಸರು, ಗೋಪಾಲವಿಠಲ ಎಂಬ ಅಂಕಿತ ಶ್ರೀ ವಿಜಯದಾಸರಿಂದ ಪಡೆದು ಅನೇಕ ದೇವರ ನಾಮಗಳನ್ನು ರಚಿಸಿ ಹರಿಸರ್ವೋತ್ತಮತ್ವ, ವಾಯುಜೀವೋತ್ತಮತ್ವ ಪ್ರಚಾರ ಮಾಡಿದ ಅಪರೋಕ್ಷ ಜ್ಞಾನಿಗಳು. ತಮ್ಮ ಆಯುಷ್ಯದಲ್ಲಿ 40 ವರ್ಷಗಳಷ್ಟು ತಮ್ಮ ಶಿಷ್ಯರಾದ ಶ್ರೀಜಗನ್ನಾಥದಾಸರಿಗೆ ದಾನ ಮಾಡಿ ಅದ್ಭುತಗ್ರಂಥ **"ಹರಿಕಥಾಮೃತಸಾರ"** ರಚಿಸಲು ಕಾರಣ ರಾದ ಮಹಾನ್ ಜ್ಞಾನಿಗಳು.

ಬಿಂಬೋಪಾಸನಾಕ್ರಮವನ್ನು ಚಿತ್ರಪಟದಂತೆ ಬರೆದು ಅನೇಕ ಶಿಷ್ಯರಿಗೆ, ಭಕ್ತ ಜನರಿಗೆ ಉಪದೇಶ ಮಾಡಿದ ಮಹ ನೀಯರು, ಗೋಪಾಲದಾಸರು, ಶ್ರೀ ವಿಜಯದಾಸರು ರಚಿಸಿದ ಅದ್ಭುತ ಕಂಕಣಾಕಾರ ಸುಳಾದಿಯನ್ನು, ಚಕ್ರಾಬ್ಜದಲ್ಲಿಟ್ಟು, ಬೀಜಾಕ್ಷರಗಳನ್ನು ಆಯಾ ಸ್ಥಳಗಳಲ್ಲಿ ಗುರುತಿಸಿ, ಉಪಾಸಕ ರಿಗೆ ಸೌಲಭ್ಯ ನೀಡಿದ ಮಹಾತ್ಮರು! ಚಿತ್ರಗಳನ್ನು ಪೂಜಿಸಿ, ಅನೇಕ ಜನರು ತಮ್ಮ ಇಷ್ಟಾರ್ಥಗಳನ್ನು ಸುಲಭವಾಗಿ ಪಡೆದು ಕೊಂಡು ಧನ್ಯರಾದರು. ಗೋಪಾಲದಾಸರಿಗೆ ಸ್ತ್ರೀಯರೂ ಶಿಷ್ಯ ರಾಗಿದ್ದು ವಿಶೇಷ ಅದರಲ್ಲೂ ಮಹಾ ಹರಿಭಕ್ತೆ ಹೆಳವನಕಟ್ಟೆ ಗಿರಿಯಮ್ಮನವರು ಇವರ ಶಿಷ್ಯೆಯಾಗಿ ದೇವರನ್ನು ಸಾಕ್ಷಾತ್ಕರಿಸಿ ಕೊಂಡ ಮಹಾಸಾಧ್ವಿಮಣಿ!

ಕರ್ನಾಟಕದ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಚಿಕ್ಕ ಗ್ರಾಮ ಮೊಸರುಕಲ್ಲು ಇವರ ಜನನವಾದ ಪುಟ್ಟಗ್ರಾಮ. ಮೊಸರುಕಲ್ಲು ಪ್ರಖ್ಯಾತವಾಗಲು, ಗೋಪಾಲ ದಾಸರು ರಚಿಸಿದ ಅನೇಕ ಕೀರ್ತನೆಗಳು ದಾಸಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯಿಂದ ಪ್ರಸಿದ್ಧಿಯಾಗಿವೆ. ಮುರಾರಿ ರಾಯ ಮತ್ತು ವೆಂಕಮ್ಮ ದಂಪತಿಗಳಿಗೆ ಕ್ರಿ.ಶ. 1717 ರಂದು ಹರಿತಸ ಗೋತ್ರದಲ್ಲಿ ಭಾಗಣ್ಣ ಜನಿಸಿದನು. ತಾಯಿ ವೆಂಕಮ್ಮ ಕಷ್ಟಪಟ್ಟು ತಮ್ಮ ಮಗ ಭಾಗಣ್ಣನನ್ನು ಸಾಕಿ ಸಂಕಾಪುರ ಶಾನುಭೋಗ ಗುಂಡಪ್ಪನ ಸಹಾಯಪಡೆದು ಧರ್ಮೋಪದೇಶ ಮಾಡಿಸಿದಳು. ಸಂಧ್ಯಾವಂದನೆ, ಅಗ್ನಿಕಾರ್ಯ ಮೊದಲಾದ ಮಂತ್ರಗಳನ್ನು ಭಾಗಣ್ಣ ಬಹು ಶೀಘ್ರವಾಗಿ ಕಲಿತುಕೊಂಡು ವಿದ್ಯಾ ಗುರುಗಳಿಗೆ ಪ್ರೀತಿಪಾತ್ರನಾದನು. ತಾಯಿ ವೆಂಕಮ್ಮ ಪುತ್ರನ ವಿದ್ಯಾಭ್ಯಾಸದ ಪ್ರೌಢಿಮೆ ಕಂಡು ತನ್ನ ಕಷ್ಟಗಳನ್ನು ದುಃಖವನ್ನು ಮರೆಯಲು ಪ್ರಾರಂಭಿಸಿದಳು. ಸಕಲ ಅರಿಷ್ಟಗಳು ಪರಿಹಾರ ವಾಗಲು, ಭಾಗಣ್ಣ ಗಾಯತ್ರಿ ಪುರಶ್ಚರಣೆ ಮಾಡಲು ಪ್ರಾರಂಭಿಸಿ ದನು. ಬಾವಿಯ ಹತ್ತಿರ ವಟವೃಕ್ಷದ ಹತ್ತಿರ ಕುಳಿತು ಗಾಯತ್ರಿ ಮಂತ್ರ ಜಪ ಮಾಡಿ ಪೂಜೆ ಮುಗಿಸುತ್ತಿದ್ದನು. ಭಾಗಣ್ಣನಿಗೆ ಅಪರೋಕ್ಷವಾದ ಸ್ಥಳವೆಂದು ಈಗಲೂ ವಟವೃಕ್ಷದ ಬಾವಿ ಸಾಕ್ಷಿಯಾಗಿದೆ!

ಗದ್ವಾಲ್ ವಿದ್ವತ್ ಸಭೆಯಲ್ಲಿ ತ್ರಿಲಿಂಗ ದೇಶದ ಕವೀಶ್ವರ ನನ್ನು ಕವಿತ್ವ ಸ್ಪರ್ಧೆಯಲ್ಲಿ ಸೋಲಿಸಿ, ಜಯಶಾಲಿಯಾದನು ಭಾಗಣ್ಣ, ಗದ್ವಾಲದರಾಜ ರಾಜಾ ರಾಮ ಭೂಪಾಲ, ಭಾಗಣ್ಣ ನನ್ನು ಅನೇಕ ರೀತಿಯಿಂದ ಸನ್ಮಾನಿಸಿ ಗೌರವಿಸಿ ಕೆಲವು ಜಮೀನುಗಳನ್ನು, ಅಶ್ವ ಸಹಿತ ಇತರ ಗುರು ಮರ್ಯಾದೆಗ ಳೊಂದಿಗೆ ಸಮರ್ಪಿಸಿ ಕೃತಾರ್ಥನಾದನು. ಭಾಗಣ್ಣನಿಗೆ ದಾಸಪ್ಪ, ಸೀನಪ್ಪ, ರಂಗಪ್ಪ ಎಂಬ ಮೂರು ಸಹೋದರರಿ ದ್ದರು. ತಾಯಿ ವೆಂಕಮ್ಮ ಮತ್ತು ತಮ್ಮ ಇತರ ಸಹೋದರ ರೊಂದಿಗೆ ಭಾಗಣ್ಣ ಸುಂಕಾಪುರದಿಂದ ಉತ್ತನೂರಿಗೆ ಬಂದನು. ಉತ್ತನೂರಿನಲ್ಲಿ ಪ್ರತಿನಿತ್ಯ ಭವಿಷ್ಯ ಹೇಳುತ್ತಾ ವೆಂಕ ಟೇಶನ ಗುಡಿಯಲ್ಲಿ ನರ್ತನ ಸೇವೆ ಮಾಡುತ್ತಿದ್ದನು. ಬಾಲ್ಯದಲ್ಲಿ

ಭಾಗಣ್ಣ ವೆಂಕಟಕೃಷ್ಣ ಎಂಬ ಅಂಕಿತದಿಂದ ಅನೇಕ ಕವಿತೆಗಳನ್ನು ಹಾಡಿ ನರ್ತಿಸುತ್ತಿದ್ದ ದೃಶ್ಯವನ್ನು ವೀಕ್ಷಿಸಿದವರು ಪುಣ್ಯಾತ್ಮರು. ಮುಂದೆ ಗೋಪಾಲದಾಸರಾಗಿ ಚಿತ್ರಿಸಿದ ರಂಗೋಲಿಯಲ್ಲಿ ದೇವರನ್ನು ಸಾಕ್ಷಾತ್ಕರಿಸಿಕೊಂಡು ನರ್ತಿಸಿ, ರಂಗೋಲಿ ದಾಸರೆಂದು ಪ್ರಖ್ಯಾತರಾದರು. ಇವರ ಶ್ರದ್ಧಾಭಕ್ತಿಗೆ ವೆಂಕಟೇಶನೂ ಸಹ ಶ್ರೀಕೃಷ್ಣನ ರೂಪದಿಂದ ನರ್ತಿಸುವ ದೃಶ್ಯ ಅಪೂರ್ವವಾಗಿತ್ತು.

ಅಪರೋಕ್ಷ ಜ್ಞಾನ ಸಂಪಾದಿಸಿದ ಭಾಗಣ್ಣ ಸಣ್ಣ ವಯಸ್ಸಿನಲ್ಲೇ ದೇವರನ್ನು ಸಾಕ್ಷಾತ್ಕಾರ ಪಡೆದಿದ್ದು ಅಸಾಮಾನ್ಯ ಪುಣ್ಯ ಕಾಲವಾಗಿತ್ತು! ಭಾಗಣ್ಣನ ಭವಿಷ್ಯ ನುಡಿ ಸತ್ಯವಾಗುತ್ತಿದ್ದ ದರಿಂದ ಅನೇಕ ಜನರು ಭಾಗಣ್ಣನಿಗೆ ಧನ, ಕನಕ, ದವಸ, ಧಾನ್ಯ ನೀಡಿ ಧನ್ಯರಾಗುತ್ತಿದ್ದರು. ಬಡತನದ ದುಃಖವನ್ನು ಮರೆತು ಭಾಗಣ್ಣ ವೆಂಕಟೇಶನ ದಯದಿಂದ ಶ್ರೀಮಂತನಾದನು. ಬಂದ ಶ್ರೀಮಂತಿಕೆಯ ಜೊತೆಗೆ ಅನೇಕ ದಾನ ಧರ್ಮಗಳನ್ನು ಬಡವರಿಗೆ ಮಾಡಿ ಭಾಗಣ್ಣ ತನ್ನ ಮನೆಯನ್ನೇ ದೊಡ್ಡ ಅನ್ನ ಛತ್ರವನ್ನಾಗಿ ಮಾಡಿದ್ದನು.

ಕೆಲಕಾಲ ಭಾಗಣ್ಣ ಆದವಾನಿಯಲ್ಲಿ ದಿವಾನಗಿರಿ ಮಾಡುತ್ತಿದ್ದ ಪಂಗ ನಾಮದ ತಿಮ್ಮಣ್ಣಯ್ಯನವರ ಬಳಿ ವಾಸ ಮಾಡುತ್ತಿದ್ದನು. ಶ್ರೀಮಂತನಾಗಿ ಬಡವರಿಗೆ ದಾನಿಯಾಗಿದ್ದ ಭಾಗಣ್ಣ ಕಾಶಿಯಾತ್ರೆ ಮಾಡಲು ಯೋಚಿಸಿ ಪ್ರಯಾಣ ಬೆಳೆಸಿದನು. ಅಲ್ಲಿಯೂ ಸಹ ತಮ್ಮ ಅದೃಷ್ಟಬಲದಿಂದ ಖ್ಯಾತರಾದರು. ಆ ಸಮಯದಲ್ಲ ಶ್ರೀ ವಿಜಯದಾಸರ ದರ್ಶನ ಅನುಗ್ರಹ ಭಾಗ್ಯ ದೊರೆಯಿತು. ಶ್ರೀ ವಿಜಯದಾಸರು ಆಗಲೇ ಶ್ರೀಪುರಂದರ ದಾಸರಿಂದ ಅನುಗ್ರಹ ಪಡೆದು ಹರಿದಾಸರಾಗಿ ದೈವಾನುಗ್ರಹಕ್ಕೆ ಪಾತ್ರರಾಗಿ, ಅನೇಕ ಸುಳಾದಿಗಳನ್ನು ರಚಿಸಿದ್ದರು. ಭಾಗಣ್ಣನ ಮೇಲೆ ಕೃಪೆ ಮಾಡಿ ಪ್ರೀತಿಯಿಂದ, ಶ್ರೀವಿಜಯದಾಸರು "ಗೋಪಾಲವಿಠಲ" ಎಂಬ ಅಂಕಿತ ನೀಡಿದರು. (14-11-1746) ಗೋಪಾಲದಾಸರ ಸಹೋದರರಿಗೂ ಕ್ರಮವಾಗಿ ವರದಗೋಪಾಲವಿಠಲ, ಗುರುಗೋಪಾಲವಿಠಲ, ತಂದೆ ಗೋಪಾಲವಿಠಲ ಎಂಬ ಅಂಕಿತಗಳನ್ನು ನೀಡಿ ಅನುಗ್ರಹಿಸಿದರು.

ಗೋಪಾಲದಾಸರಂತೆ ಇವರೂ ಸಹ ಅಪರೋಕ್ಷ ಜ್ಞಾನಿಗಳಾಗಿ ದಾಸಸಾಹಿತ್ಯದ ಮೆರುಗನ್ನು ಹೆಚ್ಚಿಸಿದರು. ವೆಂಕಟ ನರಸಿಂಹಾಚಾರ್ಯರೆಂಬ ಪ್ರಖ್ಯಾತ ಪಂಡಿತರ ಮನಸ್ಸನ್ನು ಪರಿವರ್ತಿಸಿ, ಜ್ಞಾನೋಪದೇಶ ಮಾಡಿ ಒಂದು ಸುಳಾದಿಯನ್ನೇ ಗೋಪಾಲದಾಸರು ರಚಿಸಿದರು.

ವೈರಾಗ್ಯ ಮಾರ್ಗ ಕೇಳು ದಾರಿದ್ರ್ಯ ಮಾರ್ಗಕೇಳು।
ಮಾರಮಣನ ಪಾದ ಆರಾಧಿಸುವುದಕ್ಕೆ॥

ವೆಂಕಟನರಸಿಂಹ ಆಚಾರ್ಯರು ತಮ್ಮ ಅಹಂ ತೊರೆದು ಗೋಪಾಲದಾಸರಂಥಾ ಅಪರೋಕ್ಷ ಜ್ಞಾನಿಗಳ ಸಹವಾಸ ತಮ್ಮ ಪುಣ್ಯವೆಂದು ತಿಳಿದು ದಾಸರ ಮೊರೆ ಹೋದರು. ಗೋಪಾಲದಾಸರು ಆಚಾರ್ಯರಿಗೆ ಅಭಯ ನೀಡಿ ಸನ್ಯಾಸ ಸ್ವೀಕಾರ ಮಾಡಲು ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ದರ್ಶನ ಮಾಡುವಂತೆ ಮಾರ್ಗ ತೋರಿಸಿದರು. ಅದರಂತೆ ಮಂತ್ರಾಲಯದಲ್ಲಿ ಶ್ರೀಭುವನೇಂದ್ರತೀರ್ಥರು, ಶ್ರೀರಾಘವೇಂದ್ರರ ಪೀಠಕ್ಕೆ ಯೋಗ್ಯರು ದೊರಕಿದರೆಂದು ನಿರ್ಧರಿಸಿ, ವೆಂಕಟನರಸಿಂಹಾಚಾರ್ಯರಿಗೆ ಆಶ್ರಮ ನೀಡಿ ವ್ಯಾಸತತ್ವಜ್ಞ ಎಂದು ನಾಮಕರಣ ಮಾಡಿದರು.

ವ್ಯಾಸತತ್ವಜ್ಞರು ವಾಸು ದೇವವಿಠಲ ಎಂಬ ಅಂಕಿತ ಗೋಪಾಲದಾಸರಿಂದ ಪಡೆದು, ಅನೇಕ ದೇವರನಾಮಗಳನ್ನು ರಚಿಸಿದರು. ಗೋಪಾಲದಾಸರು ವ್ಯಾಸತತ್ವಜ್ಞರು ಜೊತೆಯಾಗಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ನರ್ತಿಸುತ್ತಾ ಕೈಯಲ್ಲಿ ತಂಬೂರಿ ಹಿಡಿದು ಕುಣಿಯುವ ದೃಶ್ಯ ಅಪೂರ್ವವಾಗಿತ್ತು!!!

ಏಕಾಂತ ಸ್ಥಳ ತುಂಗಭದ್ರಾ ನದಿ ತೀರದ ಹತ್ತಿರ ವೇಣೀ ಸೋಮಪುರದಲ್ಲಿ ಉಭಯರೂ ವಾಸವಾಗಿದ್ದರು. ವ್ಯಾಸ ತತ್ವಜ್ಞರಿಗೆ ಅಲ್ಲಿನ ಜನರು ಐಜಿ ಸ್ವಾಮಿ ಎಂದು ಸಂಬೋಧಿಸುತ್ತಿದ್ದರು.

ಗೋಪಾಲದಾಸರು ಬದರಿಯಿಂದ ರಾಮೇಶ್ವರದವರೆಗೆ ತೀರ್ಥ ಕ್ಷೇತ್ರಗಳ ಯಾತ್ರೆ ಮಾಡಿ, ಪ್ರತಿವರ್ಷ ಬ್ರಹ್ಮೋತ್ಸವಕ್ಕೆ ತಿರುಪತಿಗೆ ತಪ್ಪದೇ ಹೋಗಿ ಶ್ರೀನಿವಾಸನ ದರ್ಶನ ಮಾಡುತ್ತಿದ್ದರು. ಬಹುಕಾಲ ದಾಸರು ಉತ್ತನೂರು, ವೇಣಿಸೋಮ ಪುರದಲ್ಲಿ ದೇವತಾರ್ಚನೆಯಲ್ಲಿ ಕಾಲ ಕಳೆದು ಭಕ್ತಿಯಿಂದ ದೇವರ ಸೇವೆ ಮಾಡುತ್ತಿದ ಮಹನೀಯರು.

ಪಂಢರಾಪುರದ ಪಾಂಡುರಂಗನ ದರ್ಶನ ಮಾಡಿ ತದನಂತರ ಕೊಲ್ಲಾಪುರ, ಶಿವಮೊಗ್ಗ ಮಾರ್ಗವಾಗಿ ಉಡುಪಿಯ ಶ್ರೀಕೃಷ್ಣನ ದರ್ಶನ ಮಾಡಿದರು. ಉಡುಪಿಯ ವಾಸ್ತವ್ಯದಲ್ಲಿ ಅನೇಕ ದೇವರನಾಮಗಳನ್ನು ಸುಳಾದಿಗಳನ್ನು ರಚಿಸಿದರು. ಪುನಃ ಉತ್ತನೂರಿಗೆ ವಾಪಸ್ಸು ಬಂದು ತದನಂತರ, ಮಾನವಿಯಲ್ಲಿ ಶ್ರೀಜಗನ್ನಾಥದಾಸರ ಉದರ ಶೂಲಿಯನ್ನು ಪರಿಹರಿಸಿ ತಿರುಪತಿಯಲ್ಲಿ ತಮ್ಮ 40 ವರ್ಷ ಆಯುಷ್ಯ ದಾನ ಮಾಡಿ, ಹರಿದಾಸ ಪದವಿ ಅನುಗ್ರಹಿಸಿದ ಮಹಿಮಾನ್ವಿ

ತರು. ದಾಸತ್ರಯರಾದ ಗೋಪಾಲದಾಸರು, ದಾಸಪ್ಪದಾಸರು, ಸೀನಪ್ಪದಾಸರು ಒಮ್ಮೆ ಉತ್ತರಾಧಿಮಠದ ಧರ್ಮ ಪೀಠದಲ್ಲಿದ್ದ ಶ್ರೀಸತ್ಯಬೋಧರ ದರ್ಶನ ಮಾಡಿದರು. ಗುರುಗಳು ಆಗಲೇ ಇವರನ್ನು ಮಹಾ ಅಪರೋಕ್ಷ ಜ್ಞಾನಿಗಳೆಂದು ಅರಿತಿದ್ದರು. ಶ್ರೀ ಸತ್ಯಬೋಧ ತೀರ್ಥರ ಕುರಿತು ದಾಸತ್ರಯರು ಪದವನ್ನು ರಚಿಸಿದ್ದು ದಾಖಲೆಯಾಯಿತು.

ಮಾರಮದಘನ್ನ ಸಮೀರ್ಣರ ಮಧ್ವಾಮತೋ
ದ್ಧಾರ ಶುಭ ಗುಣಸಾಗರ ಪಾರಾ
ಧೀರ ಶ್ರೀ ಸತ್ಯಭೋದಾಯವಗುರು ಕರುಣದಲಿ
ವೈರಿವರ್ಗದ ಗೆಲಿದೆ ಧಾರುಣಿಯೊಳು ಮೆರೆದೆ


ಎಂಬ ಪದವನ್ನು ಗುರುಗಳಿಗೆ ಅರ್ಪಿಸಿದರು. ದಾಸತ್ರಯಗಳ ಕೃತಿಗಳನ್ನು ಕಂಡು ಸಂತೋಷದಿಂದ ಶ್ರೀ ಸತ್ಯಭೋದರು ಮೂವರಿಗೂ ಬೆಲೆಬಾಳುವ ಮುತ್ತಿನ ಹಾರವನ್ನು ನೀಡಿದ್ದು ಈಗ ಇತಿಹಾಸ!

ಗೋಪಾಲದಾಸರು ಭಾಗವತ ಧರ್ಮ ಉಪದೇಶ ಮಾಡುತ್ತಾ ಆಡಿದಂತೆ ನಡೆದು, ನಡೆದಂತೆ ಉಪದೇಶ ಮಾಡಿದ ಮಹಿಮಾನ್ವಿತರು ಬಾರಯ್ಯ ಬಾ ಬಾ ಬಕುತರ ಪ್ರಿಯ, ರಥವ ನೇರಿದ ರಾಘವೇಂದ್ರ ಮುಂತಾದವು ಪ್ರಸಿದ್ಧ ಕೀರ್ತನೆಗಳು. ಗೋಪಾಲದಾಸರು ಅನೇಕ ಕೀರ್ತನೆಗಳನ್ನು ಉಗಾಭೋಗಗಳನ್ನು ಸುಳಾದಿಗಳನ್ನು ರಚಿಸಿದ ಮಹನೀಯರು.

ಗೋಪಾಲದಾಸರು ತಮ್ಮ ಜೀವಿತ ಕಾಲದಲ್ಲಿ ಹರಿದಾಸ ಸಾಹಿತ್ಯ ಪ್ರಚಾರ ಮಾಡಿ, ಉತ್ತನೂರಿನಲ್ಲಿ ಚಿತ್ರಭಾನು ಸಂವತ್ಸರ ಪುಷ್ಯ ಬಹುಳ ಅಷ್ಟಮಿ ಶನಿವಾರ (1762) ದೇಹತ್ಯಾಗ ಮಾಡಿ, ವೈಕುಂಠವಾಸಿಯಾದರು. ಉತ್ತನೂರಿನಲ್ಲಿ ಪ್ರತಿವರ್ಷ ಇವರ ಆರಾಧನೆ ಜರುಗುವುದು.

ಅಗತಾದಿ ತ್ರಿಕಾಲಜ್ಞಂ ಆಗಮಾರ್ಥ ವಿಶಾರದಂ
ತ್ಯಾಗಭೋಗ ಸಮಾಯುಕ್ತಂ ಭಾಗಣ್ಣಾರ್ಯಗುರುಂ ಭಜೇ ॥

## ತಿ.ತಿ.ದೇ., ಗ್ರಂಥ ಆವಿಷ್ಕರಣೆ





**ಗ್ರಂಥದ ಹೆಸರು :** ತಿರುಮಲೆ ತಿರುಪತಿ ಕ್ಷೇತ್ರ ಮಹಾತ್ಮ್ಯ
**ಲೇಖಕರು :** ಡಾ॥ ಎಂ.ಜಿ. ದೇಶಪಾಂಡೆ
**ಸೈಜ್ :** 1/8 ಡೆಮ್ಮಿ
**ಬೆಲೆ :** 110 ರೂಪಾಯಿ


**ಹೆಚ್ಚಿನ ವಿವರಗಳಿಗಾಗಿ :**
ತಿ.ತಿ.ದೇ., ಸೇಲ್ಸ್‌ವಿಂಗ್ ಆಫ್ ಪಬ್ಲಿಕೇಷನ್ಸ್
ತಿ.ತಿ.ದೇ., ಪ್ರೆಸ್ ಕಾಂಪೌಂಡ್
ಕೆ.ಟಿ. ರಸ್ತೆ
ತಿರುಪತಿ : 517 501
ಫೋನ್ ನಂ : 0877 2264209

ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವದ ಸಂದರ್ಭದಲ್ಲಿ ತಿ.ತಿ.ದೇ., ಮುದ್ರಿಸಿ ವಾಹನ ಸೇವೆಯಲ್ಲಿ "ತಿರುಮಲೆ ತಿರುಪತಿ ಕ್ಷೇತ್ರ ಮಹಾತ್ಮ್ಯೆ" ಎಂಬ ಗ್ರಂಥವನ್ನು ಆವಿಷ್ಕರಿಸಿದರು.

# ದಾಸ ಸಾಹಿತ್ಯದಲ್ಲಿ ಜಲ ವಿಜ್ಞಾನ ತಂತ್ರಜ್ಞಾನಃ ಆಧುನಿಕ ವಿಜ್ಞಾನಕ್ಕೊಂದು ವಿಶೇಷ ಕೊಡುಗೆ

ಡಾ।। ಹರಿಹರ ಶ್ರೀನಿವಾಸರಾವ್
91104 89871







ಕನ್ನಡದ ದಾಸ ಸಾಹಿತ್ಯವು ಭಕ್ತಿಯಿಂದ ತುಂಬಿದ ಆಧ್ಯಾತ್ಮಿಕ, ನೈತಿಕ ಮತ್ತು ಪರಿಸರ ಸಂಬಂಧಿತ ಅಂಶಗಳನ್ನು ಒಳಗೊಂಡಿದೆ. ಇದರಲ್ಲಿ ಭೂಕರ್ಷಣ ಶಕ್ತಿ, ಪ್ರವಾಹ ಪ್ರಮಾಣ, ನೀರಿನ ಗುಣಮಟ್ಟ ಮತ್ತು ನೈಸ ರ್ಗಿಕ ಜಲಚಕ್ರಗಳು ಮುಂತಾದ ಜಲವಿಜ್ಞಾನ ತತ್ವಗಳ ನುಡಿಮುತ್ತುಗಳು ಅಡಗಿವೆ. ಈ ಲೇಖನವು ದಾಸ ಸಾಹಿತ್ಯದಲ್ಲಿಯ ಇಂತಹ ಅಂಶಗಳನ್ನು ಶೈಕ್ಷಣಿಕ ದೃಷ್ಟಿಕೋನದಿಂದ ಪರಿಶೀಲಿಸಿ ಪ್ರಸ್ತುತ ಪಡಿಸುತ್ತದೆ. ದಾಸರು ತಮ್ಮ ಕೃತಿಗಳಲ್ಲಿ ಬೋಧಿಸಿರುವ ಆಧುನಿಕ ಜಲವಿಜ್ಞಾನ ತತ್ವಗಳನ್ನು ಸಾಮಾಜಿಕ-ಪರಿಸರಕಾಳಜಿಯ ಚೌಕಟ್ಟಿನಲ್ಲಿ ವಿಶ್ಲೇಷಿಸುವುದರ ಮೂಲಕ ಅವುಗಳ ಮಹತ್ವದ ಮೇಲೆ ಬೆಳಕು ಚೆಲ್ಲುವುದು ಇಲ್ಲಿಯ ಪ್ರಮುಖ ಉದ್ದೇಶವಾಗಿದೆ.

## ಪರಿಚಯ

ದಾಸಸಾಹಿತ್ಯದ ಪ್ರಮುಖರಾದ ಪುರಂದರದಾಸ, ಕನಕದಾಸ, ವಾದಿರಾಜರು ಭಕ್ತಿ ಪಂಥದ ರೂಪು ರೇಷೆಗಳಿಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಮಾತ್ರ ಒದಗಿಸಿ ಅದರ ಪುನರುಜ್ಜೀವನಕ್ಕೆ ಚಾಲನೆ ಮತ್ತು ಪ್ರಚೋದನೆಯನ್ನು ನೀಡಿದರು ಎಂಬ ವಿಷಯವೇ ಇದುವರೆವಿಗೆ ಹೆಚ್ಚು ಪ್ರಚಾರದಲ್ಲಿದೆ. ಆದರೆ ಅವರು ತಮ್ಮ ಕೃತಿಗಳಲ್ಲಿ ಜಲವಿಜ್ಞಾನ ಪರಿಸರ ಇತ್ಯಾದಿಗಳನ್ನೂ ಸೂಕ್ಷ್ಮವಾಗಿಯೇ ಪರಿಶೀಲಿಸಿ ಅವುಗಳ ಮಹತ್ವವನ್ನು ದಾಖಲಿಸಿರುವ ವಿಷಯವನ್ನೂ ಇನ್ನೂ ಗುರುತಿಸಬೇಕಾಗಿದೆ. ದಾಸಸಾಹಿತ್ಯದಲ್ಲಿ ಜಲ ವಿಜ್ಞಾನ ನಮ್ಮಲ್ಲಿ ನೂರಾರು ವರ್ಷಗಳ ಪರಂಪರೆಯ ಕೃಷಿ ಆಧಾರಿತ ಸಮಾಜದ ಅವಶ್ಯಕತೆಯನ್ನು ಪ್ರತಿಬಿಂಬಿಸುತ್ತದೆ. ಈ ವಿಷಯವು ಮೇಲ್ನೋಟಕ್ಕೆ ಕಾವ್ಯಾತ್ಮಕ, ಉಪಮಾನಗಳು, ಸಮಾಜದ ಪರಿಸ್ಥಿತಿಗಳು, ಮತ್ತು ಜಲಸಂಪತ್ತು ಅದರ ನಿರ್ವಹಣೆಗಳ್ನೂ ಕುರಿತು ಹೇಗೆ ಬೆಳಕು ಚೆಲ್ಲುತ್ತದೆ? ಎಂಬುದನ್ನೀಗ ನೋಡೋಣ.ಭೂ ಗುರುತ್ವಾಕರ್ಷಣ ಶಕ್ತಿ ಮತ್ತು ನದಿಗಳ ಹರಿವು ಜಲವಿಜ್ಞಾನದಲ್ಲಿ ಗುರುತ್ವಾಕರ್ಷಣ ಶಕ್ತಿಯು ಒಂದು ಮಹತ್ವದ ಅಂಶ. ದಾಸಸಾಹಿತ್ಯದಲ್ಲಿ ನದಿಗಳನ್ನು ದೇವರ ಕೃಪೆಯ ಹರಿವಿಗೆ ಉಪಮೆಯಾಗಿ ಬಳಕೆಯಾಗಿದೆ. ಉದಾಹರಣೆಗೆ ಪುರಂದರದಾಸರು ತಮ್ಮ ಅನೇಕ ರಚನೆಗಳಲ್ಲಿ ನದಿಗಳ ಗುಣಗಾನವನ್ನು ಹೀಗೆ ಮಾಡಿದ್ದಾರೆ.

"ಸಿರಿವಂತ ಹಿಮಗಿರಿಯಲ್ಲು ಹರಿದು ಬರುತಿಹ ಸಿರಿ ಗಂಗಾನದಿ"

ಎಂದು ಹಿಮಾಲಯದಿಂದ ಹರಿದು ಬರುವ ಪವಿತ್ರ ಗಂಗೆಯನ್ನು ಬಣ್ಣಿಸಿದ್ದಾರೆ. ಈ ಅಂಶವು ನದಿ ನೀರಿನ ಹರಿವು ಭೂಆಕರ್ಷಣ ಶಕ್ತಿಯಿಂದ ಉಂಟಾಗುವ ಸೃಜನಶೀಲ ಪ್ರಕ್ರಿಯೆಯನ್ನು ಸೂಚಿಸುತ್ತದೆ. ತಾತ್ವಿಕವಾಗಿ, ಇದನ್ನು ದೇವರ ಕೃಪೆಯ ಹರಿವು ಎಂದು ವ್ಯಾಖ್ಯಾನಿಸಲಾದರೂ, ತಾಂತ್ರಿಕವಾಗಿ ಇದು ನದಿಯ ಹರಿವಿಗೆ ಭೂ ಆಕರ್ಷಣ ಶಕ್ತಿಯೇ ಕಾರಣವೆಂಬುದನ್ನು ಪ್ರತಿಪಾದಿಸುತ್ತದೆ. ಕನಕದಾಸರೂ ನದಿಯ ಹರಿವನ್ನು ಕಾವ್ಯವಾಗಿಸಿ ಈ ರೀತಿ ಉಲ್ಲೇಖಿಸಿದ್ದಾರೆ.

"ನದಿ ಹರಿದು ಸಾಗುವುದು ಇವು ನಂಬಿದ ದಾರಿ, ಮಾನವನು ಮುಟ್ಟುವುದಕೆ ಸಮುದ್ರ ಸಾರಿ."


ನದಿ ತನ್ನ ಹಾದಿಯನ್ನು ತಾನೇ ಆಯ್ಕೆ ಮಾಡಿಕೊಳ್ಳುತ್ತಲೇ ಸಮುದ್ರವನ್ನು ಸೇರುತ್ತದೆ. ಹೀಗೆ ಈ ಸಾಲು ನದಿಗಳು ತಗ್ಗು ಪ್ರದೇಶಗಳ ಭೂ ಆಕರ್ಷಣೆಯ ನಿಯಮದ ಪ್ರಕಾರವಾಗಿ ಹರಿಯುವ, ನೀರಿನ ಪ್ರಕ್ರಿಯೆಯ ವೈಜ್ಞಾನಿಕತೆಗೊಂದು ಉತ್ತಮ ಉದಾಹರಣೆಯನ್ನೊದಗಿಸುತ್ತದೆ.

## ಪ್ರವಾಹ ಪ್ರಮಾಣ ಮತ್ತು ನಿರ್ವಹಣೆ

ಪ್ರವಾಹ ಪ್ರಮಾಣವು ನದಿಯ ಹರಿವಿನ ಪ್ರಮಾಣವನ್ನು ಸೂಚಿಸುತ್ತದೆ. ವಾದಿರಾಜ ತೀರ್ಥರು ತಮ್ಮ ಕೃತಿಗಳಲ್ಲಿ ಮಳೆಯಿಂದ ಉಂಟಾಗುವ ಪ್ರವಾಹದ ಪರಿಣಾಮಗಳನ್ನು ವಿವರಿಸುವ ರೀತಿ ಇದು,

"ಅತಿವೃಷ್ಟಿಯ ಹರಿದು ನದಿಯು
ದಾಹರ ಹತ್ತಿರದ ತಟದ ಮೆಟ್ಟಿಲು ಮುರಿದು"
ಮಳೆಯಿಂದ ತುಂಬಿ ಹರಿಯುವ ನದಿ,
ನದಿಯ ತಟವನು ಒಡೆದು ಹರಿಯುತ್ತದೆ.

ಈ ಸಾಲು ಮಳೆ ಹೆಚ್ಚಾಗಿ ಬಿದ್ದು ಪ್ರವಾಹವುಂಟಾಗಿ ತನ್ನ ದಡವನ್ನೇ ಕೊಚ್ಚಿ ಹಾಕುವ ಭೀಕರತೆಯ ಮೂಲಕ ದೇವಸ್ಥಾನದ ಮೆಟ್ಟಿಲುಗಳನ್ನೇ ಅಲ್ಲದೇ ಊರು ಊರಗಳೇ ಕೊಚ್ಚಿಹೋಗುವ ನೈಸರ್ಗಿಕ ಪ್ರಕೃತಿಯ ವಿಕೋಪವನ್ನು ತೋರಿಸುತ್ತದೆ. ಹೀಗಾಗಿ ಇದೊಂದು ಜಲಪ್ರವಾಹ ಪೀಡೆ



ಯಿಂದಾಗಿ ದಡವು ಕೊಚ್ಚಿಹಾಕುವ ಇಂದಿನ ಜಲ ವಿಜ್ಞಾನದ ಪ್ರಕಾರ ಜಲಪ್ರವಾಹದ ಮಾಹಿತಿಯನ್ನೊದಗಿಸಿದೆ.

ಕೇಂದ್ರ ಜಲ ಆಯೋಗವು ರೂಪಿಸಿರುವ ನಿಯಮಗಳ ಪ್ರಕಾರ ಒಂದು ಪ್ರದೇಶವು ಪ್ರವಾಹ ಪೀಡಿತ ಎಂದು ಪರಿಗಣಿಸಲು ಇನ್ನೂರು ವರ್ಷಗಳ ಹಿಂದಿನ ಭಾರೀ ಮಳೆಯ ದಾಖಲೆಗಳನ್ನು ಪರಿಶೀಲಿಸಬೇಕಾಗುತ್ತದೆ. ವಾದಿರಾಜರು 400 ವರ್ಷಗಳ ಹಿಂದೆಯೇ ದಾಖಲಿಸಿರುವ ಈ ವಿಷಯವು ಇಂದಿಗೂ ಪ್ರಸ್ತುತವಾಗುವುದು ಹೀಗೆಯೇ ಅಲ್ಲವೇ? ಪುರಂದರದಾಸರು ಪ್ರವಾಹವನ್ನು ನಿಯಂತ್ರಿಸದ ಭಾವನೆಗಳು ಎಂದೂ ವಿವರಿಸುತ್ತಾರೆ.

''ನದಿಯ ನೀರು ಜಲಧಿಯೊಳಗೆ ಸೇರದಿದ್ದರೆ,
ಹರಿವ ಚೇತನದ ಬಾಳು ಹಾಳು''

ನದಿಯ ನೀರು ಸಮುದ್ರವನ್ನು ತಲುಪದಿದ್ದರೆ ಅದು ಜನರ ಬದುಕಿಗೆ ದುಃಖಕರವಾಗಿ ಪರಿಣಮಿಸಿ ಬಾಳುವೆಯನ್ನೇ ಹಾಳುಮಾಡುತ್ತದೆ ಎಂದಿದ್ದಾರೆ. ನದಿ ನಿರ್ವಹಣೆ ಮತ್ತು ಪ್ರವಾಹ ನಿಯಂತ್ರಣದ ತಾತ್ವಿಕ ಮತ್ತು ವೈಜ್ಞಾನಿಕ ಅರ್ಥವನ್ನು ಈ ಸಾಲು ವ್ಯಕ್ತಪಡಿಸುತ್ತದೆ.

### ನೀರಿನ ಗುಣಮಟ್ಟ ಮತ್ತು ಶುದ್ಧೀಕರಣ

ನೀರಿನ ಗುಣಮಟ್ಟ ದಾಸ ಸಾಹಿತ್ಯದಲ್ಲಿ ಪ್ರಮುಖ ವಿಷಯವಾಗಿದೆ. ಹರಿದು ಹೋಗುವ ನೀರನ್ನು ಪವಿತ್ರತೆಯ ಸಂಕೇತವಾಗಿ, ಮತ್ತು ನಿಂತ ನೀರನ್ನು ಅಪವಿತ್ರ ಎಂದು ತಿಳಿಯಲಾಗುತ್ತದೆ. ಪುರಂದರದಾಸರು ಗಂಗೆಯ ಶುದ್ಧತೆಯನ್ನು ಹಾಡಿ ಹೀಗೆ ಹೇಳುತ್ತಾರೆ.

''ಗಂಗಾ ಜಲವನ ಕೋರಿ, ನುಂಗಿ ಪಾಪವನ್ನು ತೊರೆ''

ಗಂಗೆಯ ನೀರನ್ನು ಕುಡಿಯಿರಿ ಮತ್ತು ಪಾಪವನ್ನು ತೊಲಗಿಸಿರಿ.'' ಗಂಗಾಸ್ನಾನ ತುಂಗಾಪಾನ'' ಎಂಬ ಗಾದೆಯೂ ಇದೇ ಸಾಲಿಗೆ ಸೇರುತ್ತದೆ.ಗಂಗೆಯ ನೀರಿನ ಸ್ವಚ್ಛತೆಯ ವೈಜ್ಞಾನಿಕ ಅರ್ಥವೇ ನದಿಯ ನೈಸರ್ಗಿಕ ಶುದ್ಧೀಕರಣ ಪ್ರಕ್ರಿಯೆಗಳನ್ನು ಒಳಗೊಂಡಿದೆ ಎಂದಿದ್ದಾರೆ. ಕನಕದಾಸರು ನಿಂತ ನೀರಿನ ಅಪಾಯವನ್ನು ಹೀಗೆ ವರ್ಣಿಸುತ್ತಾರೆ.

''ನಿಂತ ನೀರು ಮಾಲಿನ್ಯ ಹುಟ್ಟಿಸುತ್ತದೆ, ಹರಿಯುವುದೆ ಜೀವನ.''

ಈ ದೃಷ್ಟಾಂತವು ನಿಂತ ನೀರಿನಲ್ಲಿ ಬ್ಯಾಕ್ಟೀರಿಯಾವು ಬೆಳೆಯುವ ಪ್ರಕ್ರಿಯೆಯನ್ನು ಪ್ರತಿಬಿಂಬಿಸುತ್ತದೆ.

### ಭೂಮಿಗರ್ಭದ ಜಲವಿಜ್ಞಾನ: ಬಾವಿಗಳು ಮತ್ತು ಬುಗ್ಗೆಗಳು

ದಾಸ ಸಾಹಿತ್ಯವು ಭೂಮಿಗರ್ಭದ ಜಲಚಕ್ರಗಳ ಕುರಿತಾಗಿಯೂ ತಿಳುವಳಿಕೆಯನ್ನು ನೀಡುತ್ತದೆ. ಪುರಂದರದಾಸರು ಮಳೆ ಬಂದ ಮೇಲೆ ಬಾವಿಗಳ ತುಂಬುವಿಕೆಯ ಕುರಿತು ಹೀಗೆ ಉಲ್ಲೇಖಿಸಿದ್ದಾರೆ.

''ಮಳೆ ಬಿದ್ದೊಡನೆ ಬಾವಿಗೆ ಬರುವ ಹೊತ್ತು, ಅಲ್ಲಿ ಜೀವಜಲದ ನಿರಂತರ ಹರಿವು''

ಮಳೆ ಬಿದ್ದ ನಂತರ ಬಾವಿಗಳು ತುಂಬಿ ಜೀವಜಲವನ್ನು ನೀಡುತ್ತವೆ.

ಇದು ನೀರಿನ ಮರುಪೂರೈಕೆಯ ಪ್ರಕ್ರಿಯೆಗೆ ಸಮಾನವಾಗಿದೆ. ಕನಕದಾಸರ ಕಾವ್ಯವು ಬುಗ್ಗೆಗಳು ಮತ್ತು ಜಿನುಗು ಜಲವನ್ನು ವಿವರಿಸುತ್ತದೆ.

''ಭೂಮಿಯ ತೊರೆ ಯಲಿ ಹರಿಯುವ ನೀರು ನಿನ್ನ ದಯೆ..''
ಭೂಮಿಯ ಒಳಗಿಂದ ಹರಿಯುವ ನೀರು ದೇವರ ಕೃಪೆಯಾಗಿದೆ.

### ಮಳೆಯ ನೀರಿನ ಸಂಗ್ರಹಣೆ ಮತ್ತು ಶೇಕರಣಾ ವ್ಯವಸ್ಥೆ

ದಾಸಸಾಹಿತ್ಯವು ನೀರಿನ ಸಂಗ್ರಹಣೆಗಾಗಿ ಅನೇಕ ಮಾರ್ಗಗಳನ್ನು ನಿರೂಪಿಸುತ್ತದೆ. ದೇಗುಲ ಕುಂಟೆಗಳ ಬಣ್ಣನೆ ಜಲಸಂಪತ್ತಿನ ನಿರ್ವಹಣೆಯ ಹಳೆಯ ತಂತ್ರಗಳನ್ನು ತೋರಿಸುತ್ತದೆ. ಪುರಂದರದಾಸರು,

''ಕೋಟೆ ಪಾಳಿಯಲ್ಲಿ ನೀರಿನ ನಿಲಯ, ದೇಹವೇ ದೇವಾಲಯ,''

ಕೋಟೆಯಲ್ಲಿನ ಜಲ ಸಂಗ್ರಹಣೆಗೆ ಒಂದು ಕೊಳ ಅದರ ಮಹತ್ವವೆಂದರೆ ದೇಹವೇ ದೇವಾಲಯದಷ್ಟು ಪವಿತ್ರ.

### ಆಧುನಿಕ ವಿಜ್ಞಾನಕ್ಕೆ ಹೋಲಿಕೆಗಳು

ದಾಸಸಾಹಿತ್ಯದ ಜಲ ವಿಜ್ಞಾನ ತತ್ವಗಳು ಆಧುನಿಕ ವಿಜ್ಞಾನಕ್ಕೆ ಹೋಲುತ್ತವೆ.



ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್. ಸಿ.ವಿ. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ

**ಕಳೆದ ಸಂಚಿಕೆಯಿಂದ**

ಪ್ರದಕ್ಷಿಣಾಕ್ರಮದಲ್ಲಿ ಹೋಗಿ ವಿಷ್ವಕ್ಸೇನರು, ಭಗವದ್ರಾಮಾನುಜರನ್ನು, ವೇಂಕಟಾದ್ರಿ ನರಸಿಂಹಸ್ವಾಮಿ ಯನ್ನು ಸೇವಿಸಿ, ಶ್ರೀಕೃಷ್ಣ (ಶರ್ಮ) ಮಂಟಪಕ್ಕೆ ಇರುವ ಗರುಡ ದಿಕ್ಪಾಲಕರನ್ನು ಸೇವಿಸಿ ಭಗವದ್ರಾಮಾನುಜರ ಎದುರು ಇರುವ ಪುರುಷಾಕಾರದೊಂದಿಗೆ ಶ್ರೀವೇಂಕಟಾಚಲಪತಿ ಶ್ರೀಪಾದಗಳಿಗೆ ಸಾಷ್ಟಾಂಗವೆರಗಿ 'ತಾಯಿತಂದೈ' ಎಂಬ ತಿರುವಾಯ್‌ಮುಳಿಯನ್ನು ಅನುಸಂಧಾನ ಮಾಡಿ, ಒಳಗೆ ಅಡಿಯಿಟ್ಟು ಕುಲಶೇಖರ ಪಡಿ (ಹೊಸ್ತಿಲು) ಮಂಟಪದಲ್ಲಿ ನಿಂತು 'ಆ ಪಾದ' ನೋಡಿದಲ್ಲಿ ಹರಿ ತಲ್ಲೀನನಾಗಿ ಪವಡಿಸಿದ್ದಾನೆ. (ಶಯನಿಸಿರುವ ಹರಿಯನ್ನು ನಖಶಿಖಾ ಪರ್ಯಂತ ಅನುಭವಿಸಿ) ಎಂದು ಅಭ್ಯಾಸವಶವಾದ ಶ್ರೀಪಾದಕಮಲಗಳನ್ನು ಮೊದಲುಗೊಂಡು ಕಿರೀಟ ಪರ್ಯಂತ ಅನುಭವಿಸಿ **'ಕಂಗುಲುಮ್ ವಗಲಮ್'** ಎಂಬ ದಶಕವನ್ನು ದೇವಗಾನ ಸರಳಿಯಲ್ಲಿ ಪಾಡುವ ಮೊದಲು ಭಗವಂತನು ಸಂತೋಷಿಸಿ "ಓ ಪ್ರಬಂಧಗಾಯಕನೇ! ನಮ್ಮಾಳ್ವಾರರು ನಮ್ಮ ಮೇಲೆ ಮೋಹಗೊಂಡು ನಾಯಿಕಾ ಭಾವದಿಂದ ನಮ್ಮನ್ನನುಭವಿಸಿದ ನಂತರವೇ ನೀವು ಅನುಕರಿಸಬಲ್ಲಿರಿ, ಆದ್ದರಿಂದಲೇ ಶ್ರೀಮುಖ ಸೂಕ್ತಿ ನಮಗೆ ಮಧುರವೆನಿಸುತ್ತದೆ. ನಮ್ಮ ಪರಕಾಲ ದಿವ್ಯಸೂರಿ ನಾಯಕರು ಅನುಭವಿಸಿ ಹಾಡಿದ ಗೀತೆಗಳಲ್ಲಿ ಒಂದನ್ನು ಗಾಯನ ಮಾಡಿರಿ" ಎಂದು ಕೇಳಲು ಆಳ್ವಾರುತ್ತಾಯರ್ ಇತರ ಗಾಯಕರೊಡನೆ, ಮುಗ್ಧಹೃದಯಿಗಳಾಗಿ ಪರಕಾಲ ದಿವ್ಯಸೂರಿ ಅನುಗ್ರಹಿಸಿದ ಭಕ್ತಿ ರಸಾರ್ಥದ ಗೀತೆಯೊಂದನ್ನು ತನ್ಮಯರಾಗಿ **"ಕಾರಾರ್‌ವರೈ ಕೌಂಗೈ"** ಎಂದು ಪರಕಾಲದ ಗಡಿಯನ್ನು ಮೀರಿ ಭಗವದನುಭವವನ್ನು ಮಾಡಿದ ನಂತರ ಪರವಶ ಗಾತ್ರರಾಗಿ ಆಲಾಪನೆಮಾಡಲು ಹೃದಯ ವಿದ್ರಾವಕವಾಗಲು ಭಗವಂತನು, ಶ್ರೀಪಾದ ಪದ್ಮಗಳು, ಶ್ರೀ ಶಠಗೋಪವು, ತೀರ್ಥ ಮುಂತಾದ ಪ್ರಸಾದವೇ ಮೊದಲಾದುವುಗಳನ್ನು ಒಪ್ಪುವಂತೆ ಪಡೆದು, ಕೃತಕೃತಾರ್ಥನಾದನು. ಆಗ ಸನ್ನಿಧಿಯಲ್ಲಿ ಹಿರಿಯರು ತಿರುವೇಂಕಟ ಜಿಯ್ಯರು, ಅಂಜನವೆಪ್ಪಿನಾರ್, ಅರೈಯರ್ (ಗಾಯಕರು) ಮೊದಲು ಅವರೆಲ್ಲರು ಸಂತುಷ್ಟರಾಗಲು ಈ ಮಧ್ಯಾಹ್ನ ಕಾಲದಲ್ಲಿ ದಿವ್ಯಮಾಲೆಯನ್ನು ಧರಿಸಿದ ವೇಳೆಯಲ್ಲಿ ಶ್ರೀವೇಂಕಟೇಶ್ವರ ಸ್ವಾಮಿಯು ಸಂಪ್ರೀತನಾಗಿ ಪರಕಾಲ ದಿವ್ಯಸೂರಿ ಗೀತೆಯೊಂದನ್ನು ಕೇಳಿ ಆನಂದಿಸುವ ಮನಸ್ಸಾಗಿ ತಿರುಮಡಲ್ ಪ್ರಬಂಧವನ್ನು ಕೇಳಿದವನಾಗಿ ಅಂದಿನಿಂದ ಮೊದಲುಗೊಂಡು ಮಧ್ಯಾಹ್ನದ ವೇಳೆ ದಿವ್ಯಮಾಲೆ



ಯನ್ನು ಧರಿಸುವ ಸಂದರ್ಭದಲ್ಲಿ **"ಶಿರಿಯ ತಿರುಮಡಲ್"** ಎಂಬ ಪ್ರಬಂಧವನ್ನು ಅನುಸಂಧಿಸಲು ಕೇಳಿ ಸಂತಸಗೊಂಡಿರಲು **"ಕಂಗುಲುಮ್ ಪಂಗಲುಮ್"** ಗೀತೆಯನ್ನು ಕೇಳಿ ಆನಂದಿಸಲು ಮನಸ್ಸಾಗಲು ನಿತ್ಯಾನುಸಂಧಾನ ಕಾಲದಲ್ಲಿ **"ಕಂಗುಲುಮ್ ಮಂಗಲುಮ್"** ಗೀತೆಯನ್ನು ಆಲಾಪಿಸಬಲ್ಲರೆಂದು (ಎಂಬ ಭಗವದಾಜ್ಞೆ) ತಿಳಿದು ಅನುಗಾಲ ವೃದ್ಧರನ್ನು ಸೇವಿಸುವುದಾಗಿ ಮಾತುಕೊಟ್ಟರು. ರಾಜಬೀದಿಯಲ್ಲಿ ಈ **"ಶಿರಿಯ ತಿರುಮಡಲ್"** ಗಾಯನವು ಅನುಸಂಧಿಸಲ್ಪಡತಕ್ಕದ್ದು.

**ಶ್ರೀ ವೇಂಕಟೇಶ್ವರನು ಶ್ರೀ ಕೃಷ್ಣ ಜಯಂತಿಯನ್ನು ಪರಿಪಾಲಿಸಲು ಪ್ರಮಾಣಿಸಿದ್ದು**

ಪ್ರಾಚೀನ ಕಾಲದಲ್ಲಿ ಶ್ರೀ ವೈಖಾನಸವಂಶದಲ್ಲಿ **'ಶಂಗ ನಿವಾಯನ್'** (ಶಂಬಾಧರನು) ವಂಶಸ್ಥರಿಗೆ ಪೆರಿಯ ಪೆರುಮಾಳ್ ಎಂಬ ಅರ್ಚಕರು ಜ್ಞಾನಾನುಷ್ಠಾನ ಸಂಪದಗಳನ್ನು ಹೊಂದಿದವರಾಗಿ ಶ್ರೀವೇಂಕಟೇಶ್ವರನ ದಿವ್ಯದೇಹದಲ್ಲಿ ಅತ್ಯಂತಾಸಕ್ತರಾಗಿ ಭಗವದನುಗ್ರಹಕ್ಕೆ ಪಾತ್ರರಾಗಿದ್ದರು. ಹೀಗಿದ್ದ ಪೆರಿಯ ಪೆರುಮಾಳ್ ಕನಸಿನಲ್ಲಿ, ಆಗಿನ ಪ್ರಬಂಧ ಗಾಯಕರಾದವರ ಕನಸಿನಲ್ಲಿ, ಆಗಿದ್ದ **'ತಿರುವೇಂಗ ಡಚ್ಚಿರು ಕ್ಕಾನ್'** ಎಂಬ ವೇಂಕಟೇಶ್ವರಸ್ವಾಮಿ ಪುತ್ರಾಭಿಮಾನವನ್ನು ಹೊಂದಲು ಯೋಗ್ಯರಾದ ಸರ್ವವಿಧಿ ಕೈಂಕರ್ಯ ನಿರ್ವಾಹಣಾದುರಂಧರರಾದ ತಿರುಪ್ಪಣ್ಣಿಪಿಳ್ಳೈ ಕನಸಿನಲ್ಲಿ ಒಂದು ರಾತ್ರಿ ಶ್ರೀವೇಂಕಟೇಶ್ವರಸ್ವಾಮಿ ಮೊದಲು ತನ್ನ ನಿಜ ರೂಪವನ್ನು ತೋರಿ ನಂತರ ಶ್ರೀಕೃಷ್ಣನಾಗಿ ನಿಂತು ದರ್ಶನ ಭಾಗ್ಯವನ್ನು ಕಲ್ಪಿಸಿ "ಓಯ್ ಪೆರುಮಾಳ್! ಓ ಹಿರಿಯ ಪ್ರಬಂಧ ಗಾಯಕಾ! ಓ ತಿರುವಣ್ಣಿಪ್ಪಿಳ್ಳೈ ಸ್ವಾಮಿಯೇ, ನಾವು ಮೊದಲು ದ್ವಾಪರ ಯುಗದಲ್ಲಿ ಲೋಕರಕ್ಷಣಾರ್ಥವಾಗಿ ವಸುದೇವನ ಕುಮಾರನಾಗಿ ಜನಿಸಿದ ಅವತಾರ ದಿನದಂದು ಜಯಂತಿ ವೈಭವವನ್ನು ನಮ್ಮ ರಾಮಾನುಜ ಸಂಪ್ರದಾಯಸ್ಥರೆಲ್ಲರೂ ಪರಿಪಾಲನೆ ಮಾಡತಕ್ಕದೆಂದು ಪ್ರತೀಸಿದರು.

ಆದ್ದರಿಂದ ನಮಗೂ ಹಾಗೂ ಅವರಿಗೂ ಸಂಬಂಧವೇ ಇಲ್ಲದೇ ಹೋದರೂ ನಮ್ಮ ರಾಮಾನುಜರಿಗೆ ಮೊದಲು ಕೊಟ್ಟ ಅನುಗ್ರಹಾತಿಶಯದಂತೆ ಅದನ್ನು ಬಿಟ್ಟು ಬಿಟ್ಟಿರುವುದರಿಂದಾಗಿ ಈ ವರ್ಷದಿಂದ ಆರಂಭಿಸಿ ಪ್ರತಿ ವರ್ಷವೂ ಜಯಂತ್ಯುತ್ಸವದಂದು ನಮ್ಮ ಜೊತೆಗೇ ಆಚರಿಸುವಂತೆ ನಮ್ಮ ರಾಮಾನುಜಯಾಯಿಗಳೊಡನೇ ಹೇಳಿ ನಮಗೆ ಸಂತೋಷವನ್ನುಂಟು ಮಾಡುವುದು" ಎಂದು ಆಣತಿಯನ್ನಿತ್ತರು.

ಹೀಗೆ ಅವರು ಮೊದಲುಗೊಂಡು ತಾವು ಕಂಡ ಸ್ವಪ್ನವನ್ನು ಪರಸ್ಪರ ಹೇಳಿಕೊಂಡು ಸಂತುಷ್ಟರಾದರು. ಅಷ್ಟರಲ್ಲಿ ಈ ಸ್ಥಳದಲ್ಲಿರುವ ಸ್ವಾಮಿಗೆ ತಿರುಮಲೆ ತಿರುನಾಳ್ಳು ಜರುಗಿಸಲು ಆ ತಿರುನಾಳಿನಲ್ಲಿ ರಥೋತ್ಸವಕ್ಕೂ ಮುನ್ನ ಎಲ್ಲವನ್ನೂ ಸ್ವೀಕರಿಸಿ ಶ್ರೀಪುಷ್ಪಯಾಗ ಪ್ರತಿನಿಧಿಯಾಗಿ ಕಲಶಾಭಿಷೇಕವನ್ನು ಸ್ವೀಕರಿಸಿ, ಆರಾಧನೆ ಸ್ವೀಕರಿಸಿ ಪುಷ್ಪಯಾಗವನ್ನು ಸ್ವೀಕರಿಸುತ್ತಿರಲು ಅರ್ಚಕರಿಗೆ ಪೆರಿಯ ಪೆರಿಯಾಳ್ ಶ್ರೀ ಶಠಕೋಪವನ್ನು ಶ್ರೀಹಸ್ತಗಳಿಂದ ಧರಿಸಿ, ಶ್ರೀರಾಮಾನುಜ ಸಂಬಂಧಿಗಳಿಗೆ ಜಿಯ್ಯರು, ಶ್ರೀವೈಷ್ಣವರು, ಆಚಾರ್ಯ ಪುರುಷರು, ಎಲ್ಲರೂ ಮಂಗಳಾಶಾಸನವನ್ನು ಮಾಡುತ್ತಿರಲು ಆ ಒಡ್ಡೋಲಗದಲ್ಲಿ ರಾಮಾನುಜ ಸಂಬಂಧಿಗಳೆಲ್ಲರೂ ನೋಡಿ ಶ್ರೀ ವೇಂಕಟಾಚಲಪತಿ ತಮಗೆ ಪ್ರಸಾದಿಸಿದ ಸ್ವಪ್ನ ವೃತ್ತಾಂತವನ್ನು ಎಲ್ಲರೂ ಕೇಳುವಂತೆ ಉಚ್ಚಸ್ವರದಲ್ಲಿ ಆಲಿಸುವಂತೆ ಮಾಡಿ, ಶ್ರೀವೇಂಕಟೇಶ್ವರನ ಶ್ರೀಪಾದ ಸಂಬಂಧಿ, ಅವರ ಪ್ರಾಣಭೂತರಾದ ಭಗವದ್ರಾಮಾನುಜರ ಸಂಬಂಧ ಕೋರಿದವರೆಲ್ಲರನ್ನು ಶ್ರೀವೈಖಾನಸ ಶಾಸ್ತ್ರ ಸಿದ್ಧವಾದ ಶ್ರೀನಿವಾಸ ಭಗವಂತನು ಸ್ವೀಕರಿಸಿದ ಜಯಂತ್ಯುತ್ಸವದಲ್ಲಿ ನೀವು ಕೂಡ ಅನುಷ್ಠಾನ ಮಾಡಬೇಕೆಂದು ಎಲ್ಲರ ಶಿರದ ಮೇಲೆ ಶಠಗೋಪವನ್ನು ಇಟ್ಟು ಅನುಗ್ರಹಿಸಿದ ನಂತರ, ಎಲ್ಲರು ಸಂತೋಷದಿಂದ ಅಂಗೀಕರಿಸಿ -

"ಗುರೂಂಶ್ಚ ಸ್ವಪ್ನದೃಷ್ಟಾಂಶ್ಚ ಪೂಜಾಂತೇ ಚಾರ್ಚಕಾನನಾತ್
ಗಿರಿಪ್ರೋ ಹಿತ ಮಾಚಷ್ಟೇ ಮನುಷ್ಯಾಣಾಂ ಕಲೌ ಹರಿ"

(ಗಿರಿ ಪ್ರಭುವು ಶ್ರೀಹರಿ ಈ ಕಲಿಗಾಲದಲ್ಲಿ ಕನಸ್ಸಿನಲ್ಲಿ ತೋರಿದ ಗುರುಗಳ ಬಗೆಯನ್ನು ಪೂಜಾವಸಾನಕ್ಕು ಮುಂಚೆ ಅರ್ಚಕಮುಖೇನ ಮನುಷ್ಯರಿಗೆ ಹಿತೋಪದೇಶ ಮಾಡಿದನು)

**- ಮುಂದುವರೆಯುತ್ತದೆ.**





# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

**ಕಳೆದ ಸಂಚಿಕೆಯಿಂದ**

ಮತ್ತೆ ಭಕ್ತಿ ವರ್ಣನೆಯ ಪರಮಾತ್ಮನ ವಿಚಾರಗಳನ್ನು ಅಭಿವ್ಯಕ್ತ ಮಾಡಲು ಉಪಯೋಗಿಸಿರುವ ವಿನ್ಯಾಸ, ಶೈಲಿ, ವಿಚಾರ ಮೂವರಲ್ಲೂ ಒಂದೇ ರೀತಿಯದು. ಮೂವರೂ ಮಾತನಾಡಿಕೊಂಡೇ ಬರೆದಿರುವಂತಿದೆ. ಇಲ್ಲಿ ಒಬ್ಬರ ವಿಚಾರ ಸರಣಿಯನ್ನೇ ಮತ್ತೊಬ್ಬರು ದ್ವಿಪುತಿ ಮಾಡಿದಂತಿದೆ ವಿಶೇಷ ವೇನೂ ಕಂಡು ಬರುವುದಿಲ್ಲ.

ಪೊಯ್ಗಯ್ ಆಳ್ವಾರ್ ಪ್ರಕೃತಿ ಚಿತ್ರ ಇಂತಿದೆ. ಆನೆಗಳನ್ನು ಹಿಡಿಯಲು ಕುರವರು ಮಾಣಿಕ್ಯಗಳನ್ನು ಎಸೆಯುವರಂತೆ. ಅವು ಸೂರ್ಯ ಪ್ರಕಾಶಕ್ಕೆ ಫಳಕ್ಕನೆ ಮಿಂಚಿದಾಗ ಮಳೆಗಾಲದ ಮಿಂಚೋ ಎಂಬ ಭ್ರಾಂತಿಯಿಂದ ಹಾವುಗಳು ಹೆದರಿ ಹುತ್ತವನ್ನು ಸೇರಿಕೊಳ್ಳುವುದಂತೆ! ಹೊಲವನ್ನು ಕಾಯಲು ಪಂಜು ಹಿಡಿದು ಕುಳಿತ ಕುರವರು ಬಿಲ್ಲು ಬಾಣಗಳಿಂದ ಸಜ್ಜಾಗಿಯೂ ಕಾದಿರುತ್ತಾರೆ. ಆನೆಗಳು ಬಂದೇ ಬರುತ್ತವೆ. ಕುರವರ ಪಂಜು ಕಂಡು ಭಯದಿಂದ ಓಡುತ್ತವೆ. ಎದುರಿನ ಆಗಸದಲ್ಲಿ ಉಲ್ಕೆಯೊಂದು ಬೀಳುತ್ತದೆ. ಆನೆಗಳು ಕುರವರು ತಮ್ಮತ್ತ ಎಸೆದ ದೊಂದಿ ಮೇಲೆರಗುತ್ತಿದೆಯೆಂದು ಚೆಲ್ಲಾಪಿಲ್ಲಿಯಾಗಿ ಮತ್ತೊಂದು ದಿಕ್ಕಿಗೆ ಓಡುತ್ತದೆ. ಇವು ಒಂದು ತೆರನಾದ ವರ್ಣನೆಯಾದರೆ ಮತ್ತೊಂದು ಸುಂದರವರ್ಣನೆ ಈ ರೀತಿ ಇದೆ. ಕತ್ತಿಯ ಮೊನೆಯ ತೀಕ್ಷ್ಣದೃಷ್ಟಿಯ (ಚಂಚಲ ನೇತ್ರದ) ಸ್ತ್ರೀಯರು ದ್ವಾದಶಿಯ ಜಾತ್ರೆಗೆಂದು ಫಲ ಪುಷ್ಪಾದಿಗಳೊಡನೆ ಸಜ್ಜಾಗಿ ಬಂದು ದೇವರಿಗೆ ಹಾಕಿದ ಧೂಪದ ಹೊಗೆ ಗಗನವನ್ನೆಲ್ಲಾ ಆಕ್ರಮಿಸಿ ನಕ್ಷತ್ರಗಳನ್ನೂ ಮುಚ್ಚಿ ಬಿಡುವುದಂತೆ ಪೂದತ್ತಾಳ್ವಾರ್ ವರ್ಣನೆಗಳಲ್ಲಿ ಬಿದಿರು ಕಾಡಿನ ವರ್ಣನೆಯಿದೆ. ತೋಟ, ಜಲಪಾತ, ಕಾಲುವೆ, ಝರಿಗಳ ಸಂಭ್ರಮವಿದೆ. ತಪಸ್ವಿಗಳು ಯೋಗ ಭಂಗಿಯಲ್ಲಿ ಅಲುಗಾಡದೆ ನಿಂತಾಗ ಅವರು ಒಂದು ಬೆಟ್ಟವೆಂದು ತಿಳಿದ ಹೂ ಬಳ್ಳಿಗಳು ಅವರನ್ನು ಸುತ್ತಿ ಬಳಸಿ ತಲೆಗಳನ್ನೂ ಮುಚ್ಚಿ ಹೂ ಬಿಡಲು ಆರಂಭಿಸುತ್ತವೆ. ಆದರೂ ಆ ಯೋಗಿಗಳಿಗೆ ಅದರ ಪರಿವೆಯೇ ಇರುವುದಿಲ್ಲವಂತೆ! ಬ್ರಾಹ್ಮಿ ಮುಹೂರ್ತದಲ್ಲಿ ಎದ್ದ ಕಪಿಗಳು ತೀರ್ಥದಲ್ಲಿ ಮಿಂದು ಆಗ ಅರಳುವ ಹೂವನ್ನು ತಿರಿದು ತಂದು ಸ್ವಾಮಿಗೆ ಅರ್ಚಿಸುವುವಂತೆ! ಹೆಣ್ಣಾನೆಯ ಒಲವನ್ನು ಗಳಿಸಲು ಗಂಡಾನೆ ಹಸಿರು ಬಿದಿರನ್ನು ಸಣ್ಣಗೆ ಕಡಿದು ಜೇನಿನಲ್ಲಿ ಅದ್ದಿ ಅದಕ್ಕೆ ನೀಡುತ್ತಾ ಆನಂದಪಡುವುದಂತೆ!

ಪೇಯಾಳ್ವಾರ್ ಅವರ ಪ್ರಕಾರ ಚಂದ್ರನು ಪರ್ವತ ಶಿಖರದ ಹತ್ತಿರವೇ ಬರುತ್ತಾನೆ. ಅವರಿಗೂ ಜಲಪಾತ ಗಿರಿಯ ಝರಿ ಇವುಗಳಿಂದ ಸಂತೋಷವೇರ್ಪಟ್ಟಿದೆ. ಇವರೂ ಆನೆಯ ಆಟಗಳಿಗೆ ಮಾರುಹೋಗಿದ್ದಾರೆ. ಮದವೇರಿದ ಆನೆ ಹೆಣ್ಣಾನೆಯೊಂದಿಗೆ ಕ್ರೀಡಿಸಿದ ನಂತರ ಏಕೋ ಏನೋ ಕಲಹ ಮಾಡಿ ಅದರಿಂದ ಬೇರ್ಪಟ್ಟು ಅಲೆಯುತ್ತಿರುತ್ತದೆ. ಆ ಕೋಪದಲ್ಲಿ ಎದುರಿನ ಪರ್ವತದ ರತ್ನಮಯ ಭಿತ್ತಿಯಲ್ಲಿ ಪ್ರತಿಬಿಂಬ ಕಾಣಲು ಅದೊಂದು ಬೇರೆಯ ಆನೆ ತನ್ನ ಪ್ರತಿಸ್ಪರ್ಧಿ ಎಂಬುದಾಗಿ ಭಾವಿಸಿ ಅದರೊಡನೆಯೇ, ಸೆಣೆಸಲಾರಂಭಿಸುತ್ತದೆ. ಕೋಪದಿಂದ ತನ್ನ ಕೊಂಬನ್ನು ಎದುರಿನ ಆನೆಯನ್ನು ಇರಿಯು

ವೆನೆಂಬ ಭಾವದಿಂದ ಕೋಡಿಗೆ ಚುಚ್ಚುತ್ತದೆ. ಆ ಘರ್ಷಣೆಯಿಂದ ಎದುರಿನ ರತ್ನಭಿತ್ತಿಯಿಂದ ಮುತ್ತು, ಮಣಿಗಳು ಕೆಳಗೆ ಚೆಲ್ಲಾಡುವುದಂತೆ! ಹೆಣ್ಣುಕಪಿಯೊಂದು ತನ್ನ ಪ್ರಿಯನನ್ನು ಪ್ರಣಯಾಲಾಪಗಳ ನಡುವೆ ಆಕಾಶದಲ್ಲಿನ ಚಂದ್ರನು ಕನ್ನಡಿಯಂತೆ ತೋರಲು ಅದನ್ನು ತಂದು ಕೊಡಬೇಕೆಂದು ಬಲಾತ್ಕರಿಸುತ್ತದೆ. ರಾಮನನ್ನು ಸೀತೆಯು ಜಿಂಕೆಗಾಗಿ ಯಾಚಿಸಿದಂತೆ! ಮದಜಲವು ಗಂಡಸ್ಥಳದಿಂದ ಧಾರಾಕಾರವಾಗಿ ಸುರಿಯಲು ಅದನ್ನೇ ಝರಿಯ ನೀರೆಂದು ಭಾವಿಸಿ ಆನೆ ಬಾಯಿ ಮುಕ್ಕಳಿಸಿ ಕಾಲು ತೊಳೆದು ಶುಚಿರ್ಭೂತವಾಗಿ ಕೊಳದಿಂದ ಅರಳುವ ಹೂವನ್ನು ಕಿತ್ತು ನಿಷ್ಠ ಭಕ್ತನಂತೆ ದೇವರಿಗೆ ಅರ್ಪಿಸುವ ದೃಶ್ಯ ನಿಜಕ್ಕೂ ಮನೋಜ್ಞ! ಮತ್ತೊಂದು ಆನೆಯು ಕಾರ್ಮೇಘವನ್ನು ತನ್ನ ಪ್ರತಿಸ್ಪರ್ಧಿಯೆಂದು ಬಗೆದು ಅದನ್ನು ಗುದ್ದಲು ಮೋಡವು ಕರಗಿದಾಗ ತನ್ನ ಎದುರಾಳಿ ಸೋತನೆಂಬ ವಿಜಯೋನ್ಮಾದದಿಂದ ಘೀಳಿಡಲು ಅದರ ದಂತ ಫಳಕ್ಕನೆ ಹೊಳೆಯಲು ಆ ಸಮಯವನ್ನೇ ಹೊಂಚು ಹಾಕುತ್ತಿದ್ದ ಶರಭವು ಮೇಲಿನಿಂದ ಎರಗಿ ಆನೆಯನ್ನು ಎಗರಿಸಿಕೊಂಡು ಸಾಯಿಸುವುದಂತೆ! ಸುಂದರ ಕುರವ ಸ್ತ್ರೀಯರು ದೇವರನ್ನು ಸೇವಿಸಲು ವೇಂಗಡವನ್ನು ಸೇರಿದಾಗ ಅವರು ಪ್ರಾಣಿಗಳ ಉಪಟಳದಿಂದ ಪಾರಾಗಲು ತಂದಿರುವ ಬಿದುರುಕೋಲುಗಳು ಗಗನಕ್ಕೆಸೋಕಿ ಚಂದ್ರನನ್ನು ಹಿಡಿಯಲು ಬಂದ ರಾಹುವನ್ನು ಚುಚ್ಚುವುದಂತೆ. ಇದರಿಂದ ಕಂಗೆಟ್ಟ ರಾಹುವು ಓಡಿದಾಗ ಚಂದ್ರನು ಸಂತೋಷದಿಂದ ಮತ್ತೂ ಕಾಂತಿಯಿಂದ ಬೆಳಗುವನಂತೆ !

- ಮುಂದುವರೆಯುತ್ತದೆ.

**ಡಿಸೆಂಬರ್ 2024 ಸಂಚಿಕೆ ರಸಪ್ರಶ್ನೆಯ ಉತ್ತರಗಳು**

01. ಲಕ್ಷ್ಮೀದೇವಿ
02. ಶಿವ ಕೇಶವರಿಬ್ಬರೂ
03. ರಾಯಚೂರು
04. ಶ್ರೀ ಲಕ್ಷ್ಮೀನಾರಾಯಣ ದೇವಾಲಯ
05. ವಿಜಯದಾಸರು
06. ಎಂಟು
07. ಧಾತ್ರೀ ಹವನ
08. ಪುಷ್ಪಯಾಗ
09. ಶಿವ
10. ಗೋ ಸಬನಾಗಿ
11. ಸುಮನಾ ಮತ್ತು ಮನಸ್ವಿನಿ
12. ಫೈಕಸ್ ಬೆಗಲೆನ್ಸಿಸ್
13. ಅಯೋಧ್ಯೆಗೆ
14. ಚಕ್ರಸ್ನಾನ
15. ವರನಲ್ಲಿ ರಕ್ಷಣೆಗಾಗಿ ನೀಡುವುದು

# ತಿರುಮಲೆಯಲ್ಲಿ ನೋಡುವ ಪ್ರದೇಶಗಳು

## ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

## ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

## ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

## ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

## ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

## ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

## ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

## ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

## ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

ಕಳೆದ ಸಂಚಿಕೆಯಿಂದ


# ಶ್ರೀ ವೆಂಕಟಾಚಲ ಮಹಾತ್ಮ್ಯ

ತೆಲುಗು ಮೂಲ - ಆಚಾರ್ಯ ಕೆ. ಸರ್ವೋತ್ತಮ ರಾವ್ ,
ಅನುವಾದ - ಶ್ರೀಮತಿ. ಎನ್. ಪಾರ್ವತಿ

ಬ್ರಹ್ಮ ಅಷ್ಟಕ್ಕೇ ಬಿಡಲಿಲ್ಲ. ವಿಖನಸನನ್ನು ಕರೆದನು. ವೈಖಾನಸ ಪದ್ಧತಿಯಲ್ಲಿ ರಥೋತ್ಸವಕ್ಕೆ ಸೂಕ್ತ ಲಗ್ನವನ್ನು ಸೂಚಿಸಲು ಕೋರಿದನು. ವಿಖನಸನು ಪಂಚಾಂಗವನ್ನು ಕೂಲಂಕುಷವಾಗಿ ಪರಿಶೀಲಿಸಿ,

ಚತುರ್ಮುಖಾ!ಸೂರ್ಯನು ಕನ್ಯಾರಾಶಿಗೆ ಪ್ರವೇಶಿಸುವ ಮಾಸದ ಚಿತ್ತಾನಕ್ಷತ್ರದಲ್ಲಿ ಶಾಸ್ತ್ರೋಕ್ತವಾಗಿ ಧ್ವಜಾರೋಹಣವನ್ನು ಮಾಡಬೇಕು. ಉತ್ತರಾಷಾಢದಲ್ಲಿ ರಥೋತ್ಸವ ನಡೆಸಬಹುದು. ಶ್ರವಣ ನಕ್ಷತ್ರದಲ್ಲಿ ತೀರ್ಥವಾರಿ ಎನ್ನುತ್ತಿದ್ದಂತೆ ಬ್ರಹ್ಮನು ಎಲ್ಲಾ ದೇಶಾಧಿಪತಿಗಳಿಗೆ ಸೇವಕರ ಮೂಲಕ ಸಂದೇಶವನ್ನು ಕಳುಹಿಸಿದನು. ಬ್ರಹ್ಮದೇವನ ಆದೇಶದಂತೆ ದ್ರಾವಿಡ ಕರ್ಣಾಟ, ಕುರು, ಕುಕುರ, ಕೇಕಯ, ಕೋಸಲ ಮತ್ತು ಬರ್ಬಾರಾದಿ ದೊರೆಗಳು ಚತುರಂಗಬಲದೊಂದಿಗೆ ಸಕುಟುಂಬ ಸಮೇತರಾಗಿ ಶೇಷಾದ್ರಿಯ ಕಡೆಗೆ ಪ್ರಯಾಣ ಬೆಳೆಸಿದರು.

ಆ ಸಂದರ್ಭದಲ್ಲಿ ಶೇಷಾದ್ರಿ ಮಾರ್ಗದಲ್ಲಿ ಸಂಚರಿಸುವವರಿಗೆ ಹಾಗೂ ಜನಸಾಮಾನ್ಯರಿಗೆ ಅನ್ನಸತ್ರ ಮತ್ತು ಜಲ



ಕೇಂದ್ರಗಳನ್ನು (ನೀರಗಾರ) ನಿರ್ಮಿಸಲಾಯಿತು. ತಮ್ಮ ತಮ್ಮ ಶಕ್ತ್ಯಾನುಸಾರ ಅನ್ನ, ವಸ್ತ್ರ, ಛತ್ರಚಾಮರ, ಪಾತ್ರ, ಪಾದುಕೆ, ವಾಹನಾದಿ ದಾನಗಳನ್ನು ಮಾಡಿದರು. ಅದಲ್ಲದೇ, ವರ್ಣಬೇಧವಿಲ್ಲದೆ **"ಗೋವಿಂದಾ, ಗೋವಿಂದಾ"** ಎಂದು ನಾಮೋಚ್ಚಾರಣೆ ಮಾಡುತ್ತಾ ವೆಂಕಟಾಚಲವನ್ನು ಏರಿ ಶೇಷಾದ್ರಿಯನ್ನು ತಲುಪಿದರು. ಬೆಟ್ಟದ ಮೇಲೆ ಅಲ್ಲಲ್ಲಿ ವಿಶ್ರಮಿಸಿ, ಪುಷ್ಕರಿಣಿಯಲ್ಲಿ ಸ್ನಾನ ಮಾಡಿ, ಶ್ರೀ ವರಾಹಸ್ವಾಮಿಯನ್ನು ದರ್ಶಿಸಿ ಕಾಣಿಕೆಗಳನ್ನು ಅರ್ಪಿಸಿ, ನಂತರ ಶ್ರೀನಿವಾಸನ ದರ್ಶನ ಪಡೆದು ವಸ್ತ್ರ ಭೂಷಣ ಧನರಾಶಿಗಳನ್ನು ಸ್ವಾಮಿಗೆ ಅರ್ಪಿಸಿದರು.

ಬ್ರಹ್ಮೋತ್ಸವಕ್ಕೆ ಇಡೀ ಬೆಟ್ಟವು ಕೋಲಾಹಲದಂತೆ ಇರುವುದನ್ನು ಕಂಡು, ಬ್ರಹ್ಮನು ವಿಷ್ವಕ್ಸೇನನನ್ನು ಕುರಿತು

ಸೇನಾಧಿಪತಿ!ನನ್ನ ಸ್ವಾಮಿಗೆ ಮಹೋತ್ಸವಗಳನ್ನು ನಡೆಸಬೇಕೆಂಬ ನನ್ನ ಕೋರಿಕೆ ತೀರುತ್ತಿದೆ. ಅದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ವಿನಂತಿಸಿದನು.

ವಿಷ್ವಕ್ಸೇನನು ಬ್ರಹ್ಮನ ಆಜ್ಞೆಯಂತೆ ತನ್ನ ಪರಿವಾರಕ್ಕೆ ಎಲ್ಲಾ ಕಾರ್ಯಗಳನ್ನು ಮಾಡಲು ತಿಳಿಸಿ, ಎಲ್ಲವೂ ಸಿದ್ಧವಾಗಿವೆಯೆಂದು ಬ್ರಹ್ಮನಿಗೆ ಬಿನ್ನವಿಸಿದನು.

ಹಾಗೆಯೇ ವಿಖನಸಮಹರ್ಷಿಯು ಮೃತ್ಸಂಗ್ರಹ, ಪುಣ್ಯಾಹವಚನ ಮತ್ತು ಪಾಲಿಕಾಗಳಲ್ಲಿ ನವಧಾನ್ಯಗಳನ್ನು ನಿಕ್ಷೇಪಿಸಿದರು. ನಂತರ ಹಸ್ತಾನಕ್ಷತ್ರದಲ್ಲಿ ಅಂಕುರಾರ್ಪಣೆ ನೈವೇದ್ಯಾದಿಗಳನ್ನು ಪೂರ್ಣಗೊಳಿಸಿದರು. ಮರುದಿನ ವಾಸ್ತು ಹೋಮ, ಗರುಡ ಪ್ರತಿಷ್ಠೆ, ಗರುಡ ಹೋಮ, ಭೇರಿತಾಡನ, ಕಂಕಣಧಾರಣಾದಿ ವೈದಿಕ ಕಾರ್ಯಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದರು.

ಹರಿ ಮತ್ತು ಶ್ರೀಭೂನೀಳಾದಿಯರಿಗೆ ನೂತನ ವಸ್ತ್ರಾಭರಣಗಳಿಂದ ಅಲಂಕರಿಸಿದರು. ರತ್ನಖಚಿತ ಚಿನ್ನದ ಆಸನದ

ಮೇಲೆ ಕೂರಿಸಿದರು. ಮಂಗಳವಾದ್ಯಗಳು ಮೊಳಗುತ್ತಿದ್ದಂತೆ, ಇಕ್ಕೆಲಗಳಲ್ಲಿ ಪುಷ್ಪವೃಷ್ಟಿ,ಧ್ವಜಪಟ, ಸುದರ್ಶನ ಚಕ್ರದೊಂದಿಗೆ, ಸೇನಾಧಿಪತಿಗಳು ನಡೆಯುತ್ತಿದ್ದರೆ, ಸನಕಾದಿಯರು ಸ್ತುತಿಸುತ್ತಿದ್ದಂತೆ ದೇವಾನುದೇವತೆಗಳು ಛತ್ರಚಾಮರಗಳೊಂದಿಗೆ ಪುರ ಬೀದಿಗಳಲ್ಲಿ ವಿಹಾರಕ್ಕೆ ಸಿದ್ಧರಾಗಿದ್ದಾರೆ. ಬ್ರಹ್ಮದೇವನು ಶ್ರೀಭೂ ನೀಲಾ ಸಮೇತನಾದ ಹರಿಯನ್ನು ಆನಂದನಿಲಯಕ್ಕೆ ಪ್ರದಕ್ಷಿಣೆಯಾಗಿ ಬರುವಂತೆ ಆಹ್ವಾನಿಸಿದನು. ವಿಷ್ವಕ್ಸೇನನು ಶಾಸ್ತ್ರಾನುಸಾರ ಧ್ವಜಾರೋಹಣಕ್ಕೆ ವ್ಯವಸ್ಥೆ ಮಾಡಿದನು. ಆ ರಾತ್ರಿ ನವಕಲಶವನ್ನು ಸ್ಥಾಪಿಸಿ ಅಷ್ಟದಿಕ್ಪಾಲಕರನ್ನು ಆವಾಹನೆ ಮಾಡಿ, ಪವಿತ್ರಾಗ್ನಿಯನ್ನು ಪ್ರಜ್ವಲಿಸಿ, ಸಕಲ ದೈವತಾ ಪಾರಮಾತ್ಮಿಕವಾದ ಹೋಮಗಳನ್ನು ನೆರವೇರಿಸಿದರು.

ನಕ್ಷತ್ರ ದಿನಕ್ಕನುಗುಣವಾಗಿ ಹೋಮಗಳನ್ನು ಮಾಡಿದರು. ದಿಕ್ಪಾಲಕರಿಂದ ದಿವ್ಯಚಕ್ರಕ್ಕೆ ಪೂಜೆ ಮಾಡಿಸಿದರು. ಭೇರಿ ಮೊದಲಾದ ವಾದ್ಯಗಳು ಮೊಳಗುತ್ತಿದ್ದರೆ, ಬ್ರಹ್ಮನ ರಥ ಮುಂದೆ ಸಾಗುತ್ತಿದ್ದಂತೆ ಸ್ವಾಮಿ ಶೇಷವಾಹನದ ಮೇಲೆ ಶ್ರೀನಿವಾಸನಾಗಿ ಪ್ರದಕ್ಷಿಣೆ ಹಾಕಿ ಬ್ರಹ್ಮ ಹರಿಯನ್ನು ತನ್ನ ನಿವಾಸಕ್ಕೆ ಕರೆತಂದನು.

ಹಾಗೆಯೇ ನವಕಲಶ ಪಾಲಿಕಾರಾಧನೆ, ನೈವೇದ್ಯ ಹೋಮ, ಚಕ್ರಬಲಿ ಮುಂತಾದವುಗಳಿಗೆ ಸಂಬಂಧಿಸಿದ ನಿತ್ಯ ಕರ್ಮಗಳನ್ನು ಶಾಸ್ತ್ರೋಕ್ತವಾಗಿ ಮಾಡಿ ಮರುದಿನ ಬೆಳಗ್ಗೆ ಚಿಕ್ಕ ಶೇಷವಾಹನದ ಮೇಲೆ ಮೆರವಣಿಗೆ ನಡೆಯುವಂತೆ ಮಾಡಿದನು. ಅಂದು ರಾತ್ರಿ ಪುಷ್ಪ ಮೌಕ್ತಿಕ ಹಂಸವಾಹನ, ಮೂರನೇ ದಿನ ಬೆಳಗ್ಗೆ ಸಿಂಹವಾಹನ, ರಾತ್ರಿ ಪುಷ್ಪಮೌಕ್ತಿಕ ವಿಮಾನ ವಾಹನ, ನಾಲ್ಕನೇ ದಿನ ಬೆಳಗ್ಗೆ ಸರ್ವಭೂಪಾಲವಾಹನ, ರಾತ್ರಿ ಕಲ್ಪವೃಕ್ಷವಾಹನ, ಐದನೇ ದಿನ ಬೆಳಗ್ಗೆ ಮೋಹಿನಿ ವೇಷಧಾರಿಯಾದ ಹರಿಗೆ ಪಲ್ಲಕಿ ಸೇವೆ, ಅಂದು ರಾತ್ರಿ ಗರುಡೋತ್ಸವ.

ಆರನೇ ದಿನ ಬೆಳಿಗ್ಗೆ ಹನುಮದ್ವಾಹನ ಹಾಗೂ ಸಂಜೆ ವಸಂತೋತ್ಸವದ ನಂತರ ಐರಾವತೋತ್ಸವ. ಏಳನೆಯ ದಿನ ಪ್ರಾತಃಕಾಲದಲ್ಲಿ ಸೂರ್ಯಪ್ರಭವಾಹನ, ರಾತ್ರಿ ಚಂದ್ರಪ್ರಭ ವಾಹನ, ಎಂಟನೆಯ ದಿನ ಷೋಡಶಮಹಾ ದಾನಾದಿಗಳನ್ನು ಮಾಡಿ ಶ್ರೀ ಭೂನೀಲಾ ಸಮೇತನಾದ ಹರಿಯನ್ನು ಬಂಗಾರದ ಬೆಟ್ಟದಂತಹ ರಥದ ಮೇಲೆ ಕೂರಿಸಿ, ಬ್ರಹ್ಮ ಅಲಘ ರಥದಲ್ಲಿ ಸಾಗುತ್ತಿದ್ದರೆ ದಿಕ್ಪಾಲಕರು, ದೇವಗುಣ ಕಣ್ತುಂಬಿಕೊಳ್ಳುತ್ತಿದ್ದರೆ, ರಂಭಾದಿ ಅಪ್ಸರೆಯರು ರಥದ ಮೇಲೆ ಪಾರಿಜಾತ ಪುಷ್ಪಗಳನ್ನು ಚೆಲ್ಲುತ್ತಾ ನೃತ್ಯಗೀತೆಗಳನ್ನು ಹಾಡುವುದರೊಂದಿಗೆ ಸಾಗುತ್ತಿದ್ದ ರಥೋತ್ಸವ ಕಣ್ಣಿಗೆ ಹಬ್ಬವಾಗಿತ್ತು. ಬ್ರಹ್ಮೋತ್ಸವದ ಅಂತಿಮ ಘಟ್ಟವಾದ ಅವಭೃಥಸ್ನಾನ ನಡೆಸುತ್ತಿದ್ದವರೊಂದಿಗೆ ಶ್ರೀನಿವಾಸನು ಕೈಯೆತ್ತಿ -

ಬ್ರಹ್ಮರುದ್ರಾದಿ ದಿಕ್ಪಾಲಕರೇ! ನನ್ನ ಮಾತು ಕೇಳಿ. ಶ್ರವಣ ನಕ್ಷತ್ರದ ದಿನದಂದು ಚಕ್ರಾಯುಧ ಸ್ವಾಮಿ ಪುಷ್ಕರಿಣಿಯಲ್ಲಿ ಪುಣ್ಯ ಸ್ನಾನ ಮಾಡುವವರ ಎಲ್ಲಾ ಗತ ಪಾಪಗಳು ನಾಶವಾಗುತ್ತವೆ. ಅಲ್ಲದೆ ಪವಿತ್ರ ಸ್ನಾನ ಮಾಡಿದುದರಿಂದಾಗಿ ಅವರು ಭಾಗ್ಯವಂತರಾಗುತ್ತಾರೆ. ಅವರು ಇಹಪರಗಳಲ್ಲಿ ಸುಖ ಜೀವನವನ್ನು ನಡೆಸುತ್ತಾರೆ. ಇದು ಸತ್ಯ ಎನ್ನುತ್ತಿದ್ದಂತೆ ಬ್ರಹ್ಮ ಮತ್ತು ಶಿವ ಸಹ ಇದನ್ನು ಸತ್ಯವೆಂದು ಹೇಳಿದರು. ತದನಂತರ ಸ್ವಾಮಿ ಕೋವೆಲಕಲ್ಯಾಣ ಮಂಟಪವನ್ನು ಏರಿದರು.

ಬ್ರಹ್ಮೋತ್ಸವದ ಕೊನೆಯಲ್ಲಿ ಅನುಷ್ಠಾನಿಸುವ ಹೋಮಾದಿ ಕಾರ್ಯಗಳನ್ನು ಶಾಸ್ತ್ರೋಕ್ತವಾಗಿ ಪೂರ್ಣಗೊಳಿಸಲಾಯಿತು. ನಂತರ ಸ್ವಾಮಿಯು ಚಿನ್ನದ ಸಿಂಹಾಸನದ ಮೇಲೆ ಆಸೀನನಾಗಿ, "ಕಮಲಜಾ ! ನಿನ್ನ ಸಂಕಲ್ಪ ಫಲಿಸಿದೆ. ನನಗೆ ತುಂಬಾ ಸಂತೋಷವಾಗಿದೆ." ನೀನು ಮುಂದಾಳತ್ವ ವಹಿಸಿದ್ದರಿಂದ ನಿನ್ನ ಹೆಸರಿನಲ್ಲಿ ಇಂತಹ ಹಬ್ಬಗಳು ಪ್ರಸಿದ್ಧಿಯಾಗುತ್ತವೆ.

ಮೇಲಾಗಿ ನೀವು ಸಂಕಲ್ಪಿಸಿ ನಡೆಸಿಕೊಟ್ಟ ಈ ಬ್ರಹ್ಮೋತ್ಸವಕ್ಕೆ ಆಗಮಿಸಿದವರು, ಬ್ರಹ್ಮೋತ್ಸವದ ವೈಭವವನ್ನು ದರ್ಶಿಸಿದವರಿಗೆ ಪುರ್ನಜನ್ಮವಿಲ್ಲದೇ ಶಾಶ್ವತಾನಂದವನ್ನು ಅನುಭವಿಸುತ್ತಾರೆ. ನಾನು ಯಾವಾಗಲೂ ಅವರನ್ನು ರಕ್ಷಿಸುತ್ತೇನೆ. ನನ್ನ ರೂಪವನ್ನು ಧ್ಯಾನಿಸುವವರನ್ನು, ನನ್ನ ಸ್ತೋತ್ರಗಳನ್ನು ಆಲಿಸುವವರನ್ನು ಇತರ ಎಲ್ಲ ಚಿಂತೆಗಳನ್ನು ದೂರ ಮಾಡಿ ನನ್ನನ್ನು ನಂಬುವವರನ್ನು ಮತ್ತು ಭಕ್ತಿ ಭಾವದಿಂದ ಸೇವಿಸುವವರನ್ನು ನಾನು ಯಾವಾಗಲೂ ಕರುಣಿಸುತ್ತೇನೆ, ಅವರ ಸಮಸ್ಯೆಗಳನ್ನು ಪರಿಹರಿಸುತ್ತೇನೆ, ಅವರು ಕೋರುವ ವರಗಳನ್ನು ನೀಡುತ್ತೇನೆ.

ಕನಕ, ರತ್ನ, ವಸ್ತು, ವಾಹನ, ಧಾನ್ಯ, ಸಂತಾನವನ್ನು ದಯಪಾಲಿಸುತ್ತೇನೆ. ಅಂತಿಮವಾಗಿ ಅವರಿಗೆ ಪುರುಷಾರ್ಥಗಳಲ್ಲಿ ನಾಲ್ಕನೆಯದಾದ ಮುಕ್ತಿಯನ್ನು ನೀಡುತ್ತೇನೆ. ನನ್ನನ್ನು ಎಷ್ಟು ನಂಬುವರೋ, ಆ ನಂಬಿಕೆಯಷ್ಟೇ ಫಲವನ್ನು ಪಡೆಯುವರು. ಈ ವೆಂಕಟಗಿರಿಯಲ್ಲಿ ಅನ್ನ,ಗೃಹ,ಪಾತ್ರ ಅರ್ಘ ದಾನಾದಿಗಳನ್ನು ಯಾರೂ ಮಾಡುತ್ತಾರೋ ಅವರಿಗೆ ಭೂ ಲೋಕದಲ್ಲಿ ಸಕಲಸುಖಗಳು ಪ್ರಾಪ್ತಿಯಾಗುತ್ತವೆ.

ಶ್ರೀಹರಿಯು ಶಿವ ಮತ್ತು ಇಂದ್ರರೆಡೆಗೆ ತಿರುಗಿ "ಪ್ರಮುಖರೇ! ಕನ್ಯಾರಾಶಿಯಲ್ಲಿ ಬ್ರಹ್ಮೋತ್ಸವಗಳು ಪ್ರತಿ ವರ್ಷ ನಡೆಯಬೇಕು. ನೀವೆಲ್ಲರೂ ಬರಲೇಬೇಕು. ನಿಮ್ಮ ಸಹಕಾರದಿಂದ ವೈಭವಯುತವಾಗಿ ನಡೆಯಲಿ ಎಂದನು.

**- ಮುಂದುವರೆಯುತ್ತದೆ.**

# ಬನದ ಹುಣ್ಣಿಮೆ ಮಾಘಸ್ನಾನ

ಶ್ರೀಮತಿ. ಬಿ. ಎಸ್. ಪಾರಿಜಾತ
90083 35689

ಸೌರಮಂಡಲದಲ್ಲಿ ಭೂಮಿಯೊಂದಿಗೆ ಇತರ ಗ್ರಹಗಳು, ಉಪಗ್ರಹಗಳ ಚಲನೆಯಿಂದಾಗುವ ಕೌತುಕದ ಅನೇಕ ಘಟನೆಗಳಿಗೆ ಭೂಮಿಯ ಮೇಲಿನ ಜೀವ ಜಗತ್ತು ಸಾಕ್ಷಿಯಾಗಿದೆ. ಹಗಲು, ರಾತ್ರಿ, ಋತು ಬದಲಾವಣೆ, ಹುಣ್ಣಿಮೆ, ಅಮಾವಾಸ್ಯೆಯಂತಹ ಅನೇಕ ಪ್ರಕೃತಿಯಲ್ಲಿನ ವಿವಿಧ ಘಟನೆಗಳಿಗೆ ವೈಜ್ಞಾನಿಕ ಹಾಗೂ ಧಾರ್ಮಿಕ ಕಾರಣಗಳನ್ನು ಕಂಡುಕೊಂಡರು, ಅದಕ್ಕೆ ವಿಶೇಷವಾದ ಧಾರ್ಮಿಕ ಪ್ರಾಮುಖ್ಯತೆಯನ್ನು ನೀಡುವುದು ರೂಢಿಯಲ್ಲಿದೆ. ಇಂತಹ ರೂಢಿಗಳಲ್ಲಿ ಹುಣ್ಣಿಮೆಯ ದಿನದ ಆಚರಣೆಯಲ್ಲಿ ವಿಶೇಷ ಕಾರ್ಯಗಳನ್ನು ಧಾರ್ಮಿಕ ನಂಬಿಕೆಯ ನೆಲೆಗಟ್ಟಿನಲ್ಲಿ ನೆರವೇರಿಸಲಾಗುತ್ತದೆ.

ಕರಗದ ಹುಣ್ಣಿಮೆ, ಸೀಗೀ ಹುಣ್ಣಿಮೆ, ಮಣ್ಣೆತ್ತಿನ ಹುಣ್ಣಿಮೆ, ಕಾಮನಹುಣ್ಣಿಮೆ, ಭರತಹುಣ್ಣಿಮೆ, ಭೂಮಿಹುಣ್ಣಿಮೆ, ಚಿತ್ರ ಹುಣ್ಣಿಮೆ, ಬುದ್ಧ ಹುಣ್ಣಿಮೆ, ವ್ಯಾಸಹುಣ್ಣಿಮೆ, ಅನಂತಹುಣ್ಣಿಮೆ, ದತ್ತ ಹುಣ್ಣಿಮೆ, ಬನದಹುಣ್ಣಿಮೆ ಅಥವಾ ಬನಶಂಕರಿ ಹುಣ್ಣಿಮೆ ಹೀಗೆ ವಿಶೇಷ ಆಚರಣೆಗಳುಂಟು.

ಪುಷ್ಯ ಮಾಸದ ಬನದ ಹುಣ್ಣಿಮೆಯ ದಿನದಿಂದ ಮಾಘ ಮಾಸದ ಹುಣ್ಣಿಮೆಯವರೆಗೂ ಅತಿ ಶ್ರೇಷ್ಠವಾದ ಮಾಸವೆಂದು ಹೇಳಲಾಗುತ್ತದೆ. ಈ ಮಾಸದಲ್ಲಿ ಕೈಗೊಳ್ಳುವ ಧಾರ್ಮಿಕ ಕಾರ್ಯಗಳು ಅತ್ಯಂತ ಮಹತ್ವದ್ದಾಗಿವೆ. ಕಾರ್ತಿಕ ಮಾಸಕ್ಕಿಂತಲೂ ಅತಿ ಶ್ರೇಷ್ಠವಾದದೆಂದು ನಂಬಿ ಈ ಮಾಸಾದ್ಯಂತ ಪವಿತ್ರ ತೀರ್ಥ ಕ್ಷೇತ್ರಗಳ ಭೇಟಿ, ತೀರ್ಥಸ್ನಾನ, ಭಗವಂತನ ದರ್ಶನ ಜೀವನದ ಧನಾತ್ಮಕ ಶಕ್ತಿಯ ಆರಾಧನೆ ಎಂಬ ನಂಬಿಕೆಯಿದೆ. ಆ ಮಾಸದಲ್ಲಿ ಕೈಗೊಳ್ಳುವ ತೀರ್ಥಸ್ನಾನ, ದಾನ, ಧರ್ಮ ವ್ರತಕಥೆ ನಿಯಮಗಳಿಗಿಂತ ಪವಿತ್ರವಾದೆಂದು ಹೇಳಲಾಗಿದೆ. ಬನದ ಹುಣ್ಣಿಮೆಯ ಪವಿತ್ರ ದಿನದಂದು ಮಾಘ ಮಾಸದ ಹುಣ್ಣಿಮೆಯವರೆಗೂ ಅನೇಕ ಪವಿತ್ರ ಜಲಮೂಲಗಳಲ್ಲಿ ಮಿಂದೇಳುವ ಧಾರ್ಮಿಕ ಆಚರಣೆಯೇ ಮಾಘಸ್ನಾನ. ಈ ಮಾಘ ಮಾಸದಲ್ಲಿ ಪವಿತ್ರ ನದಿಗಳಲ್ಲಿ ಸ್ನಾನ ಮಾಡಿದರೆ ಶಾರೀರಕ ಹಾಗೂ ಮಾನಸಿಕ ದೋಷಗಳೆಲ್ಲವೂ ನಿವಾರಣೆಯಾಗಿ, ಪಾಪಗಳಿಂದ ಮುಕ್ತರಾಗಿ ಪುಣ್ಯ ಪ್ರಾಪ್ತಿಯಾಗುತ್ತದೆಂಬ ನಂಬಿಕೆ. ಅದಕ್ಕೆಂದೇ ಈ ಮಾಸದಲ್ಲಿ ಜನರು ಅನೇಕ ಪವಿತ್ರ ಯಾತ್ರಾ ಸ್ಥಳಗಳಿಗೆ ಭೇಟಿ ನೀಡುತ್ತಾರೆ. ನದಿ ತೀರಗಳಲ್ಲಿ ಧಾರ್ಮಿಕ ಆಚರಣೆಗಳನ್ನು ಕೈಗೊಳ್ಳುತ್ತಾರೆ.

### ಪೌರಾಣಿಕ ಹಿನ್ನೆಲೆ


ಈ ಮಾಸದಲ್ಲಿ ಸ್ನಾನವು ಇಷ್ಟು ಪ್ರಾಮುಖ್ಯತೆ ಪಡೆಯಲು ಅನೇಕ ಪೌರಾಣಿಕ ಹಿನ್ನೆಲೆಗಳುಂಟು. ಈ ಸಮಯದಲ್ಲಿ ಪ್ರತಿಯೊಂದು ಪ್ರಾಕೃತಿಕ ಜಲಮೂಲವೂ ಗಂಗೆಯಷ್ಟೇ ಪವಿತ್ರವಾಗು



ತ್ತದೆ. ಮಾಘಮಾಸದಲ್ಲಿ ದೇವಾನುದೇವತೆಗಳು ಪವಿತ್ರ ನದಿಗಳಲ್ಲಿ ಮಿಂದೇಳುತ್ತಾರೆ. ಇದರಿಂದ ಇಂತಹ ಪವಿತ್ರ ನೀರಿನಲ್ಲಿ ಸ್ನಾನ ಮಾಡಿದರೆ ಉತ್ತಮ ಫಲ ಲಭಿಸುವುದು, ಪಾಪ ಕರ್ಮಗಳಿಂದ ಮುಕ್ತರಾಗಬಹುದೆಂಬ ನಂಬಿಕೆ. ಮಾಘಮಾಸದಲ್ಲಿ ತೀರ್ಥ ಸ್ನಾನ ಮಾಡಿದರೆ ಶ್ರೀಮಹಾವಿಷ್ಣುವಿನ ಕೃಪೆಗೆ ಪಾತ್ರರಾಗಬಹುದು ಎಂದು ಪದ್ಮಪುರಾಣದಲ್ಲಿ ಉಲ್ಲೇಖವಿದೆ. ಮಾಘಸ್ನಾನದ ನಂತರ ವಿಷ್ಣುವಿಗೆ ಅರ್ಘ್ಯ ನೀಡುವುದರಿಂದ ದಾರಿದ್ರ್ಯ ದೂರಾಗುವು ದೆಂದು ವಿಷ್ಣು ಪುರಾಣದಲ್ಲಿ ಹೇಳಲಾಗಿದೆ. ಮಾಘ ಸ್ನಾನದಿಂದ ಶಾರೀರಕ ಆರೋಗ್ಯದ ಜೊತೆಗೆ ಆಧ್ಯಾತ್ಮಿಕ ಶಕ್ತಿಯು ದೊರೆಯುತ್ತದೆಂದು ಹೇಳಲಾಗುತ್ತದೆ.

### ವೈಜ್ಞಾನಿಕ ಹಿನ್ನೆಲೆ

ಕಾರ್ತಿಕ ಹಾಗೂ ಪುಷ್ಯ ಮಾಸದ ಶೀತ ವಾತಾವರಣದಿಂದ ನೀರಿನಲ್ಲಿರುವ ಬ್ಯಾಕ್ಟೀರಿಯ, ವೈರಸ್ಗಳು ಹೆಚ್ಚಾಗಿ ಉತ್ಪತ್ತಿಯಾಗಿ ಚುರುಕಾಗಿರುತ್ತದೆ. ಸೂರ್ಯನ ಕಿರಣಗಳು ಈ ಸಮಯದಲ್ಲಿ ಹೆಚ್ಚಾಗಿ ಬೀಳುವುದಿಲ್ಲ. ಅಂತೆಯೇ ಶೀತ ಬಾಧೆಗಳು ಹೆಚ್ಚು, ಆದರೆ ಮಾಘ ಮಾಸದಲ್ಲಿ ಸೂರ್ಯನ ಕಿರಣಗಳು ಬಿದ್ದು ನೀರಿನಲ್ಲಿರುವ ಬ್ಯಾಕ್ಟೀರಿಯ ವೈರಸ್ಗಳಂತಹ ರೋಗಾಣುಗಳು ನಾಶವಾಗಿ ನೀರು ಶುದ್ಧವಾಗುತ್ತದೆ. ಇಂತಹ ಸಮಯದ ಈ ಶುದ್ಧವಾದ ನೀರಿನಿಂದ ಸ್ನಾನ ಮಾಡುವುದರಿಂದ ಆರೋಗ್ಯ ಉತ್ತಮ ವಾಗುತ್ತದೆ ರೋಗ ನಿರೋಧಕ ಶಕ್ತಿಯು ಹೆಚ್ಚುತ್ತದೆಂಬುದು ವೈಜ್ಞಾನಿಕ ಕಾರಣ.



ಮಾಘಸ್ನಾನವು ನದಿ ಸಮುದ್ರ ಸಾಗರಗಳಲ್ಲಿ ಶ್ರೇಷ್ಠವೆಂದು ಹೇಳಲಾಗುತ್ತದೆ. ಸೂರ್ಯೋದಯಕ್ಕೆ ಮುನ್ನ ವಿಶೇಷ ಆದ್ಯತೆ. ಈ ಮಾಸದ 30 ದಿನಗಳು ಸ್ನಾನ, ಧಾರ್ಮಿಕ ಕಾರ್ಯ ಉತ್ತಮ ಫಲ ಕೊಡುತ್ತದೆ. ಇದು ಸಾಧ್ಯವಾಗದವರು ಮನೆಯಲ್ಲೇ ಸೂರ್ಯೋದಯಕ್ಕೆ ಮುನ್ನ ಸ್ನಾನ ಮಾಡುವುದು ಉತ್ತಮ.

ನಿಂತ ನೀರಿನಲ್ಲಿ ಸ್ನಾನ ಮಾಡುವುದರಿಂದ ಹತ್ತಾರು ವರ್ಷಗಳ ಫಲವು, ನದಿಗಳಲ್ಲಿನ ಸ್ನಾನವು ನೂರಾರು ವರ್ಷಗಳ ಫಲವು, ಪವಿತ್ರ ತೀರ್ಥಸ್ನಾನ ಸಾವಿರಾರು ವರ್ಷಗಳಿಗೂ, ಗಂಗೆಯಲ್ಲಿನ ಸ್ನಾನ ಕೋಟಿ ಕೋಟಿ ವರ್ಷಗಳ ಫಲವಾಗಿಯೂ, ತ್ರಿವೇಣಿ ಸಂಗಮದಲ್ಲಿನ ಸ್ನಾನವು ಗಂಗೆಯ 100 ಬಾರಿ ಸ್ನಾನಕ್ಕೂ ಹೆಚ್ಚಿನ ಫಲಕ್ಕೆ ಸಮನಾಗಿ ಮಹತ್ವ ಪಡೆದಿದೆ.

ಕರ್ನಾಟಕದ ಕಾವೇರಿ, ಕೃಷ್ಣ, ತುಂಗಭದ್ರ, ಕಪಿಲ, ನೇತ್ರಾವತಿ, ನದಿಗಳಲ್ಲೂ, ಉತ್ತರ ಭಾರತದ ಗಂಗಾ, ಯಮುನ, ತ್ರಿವೇಣಿ ಸಂಗಮದಂತಹ ಪವಿತ್ರ ನದಿಗಳಲ್ಲೂ ತೀರ್ಥಸ್ನಾನ ಮಾಡುವುದು ನಡೆದು ಬಂದಿದೆ.

ಬ್ರಾಹ್ಮೀ ಮುಹೂರ್ತದಲ್ಲಿ ಅಂದರೆ ನಸುಕಿನ 4 ಗಂಟೆಯೊಳಗೆ ಸ್ನಾನ ಮಾಡುವುದು ಉತ್ತಮ. ವೇದಾಧ್ಯಯನ, ಯಜ್ಞಯಾಗಾದಿ ಇತ್ಯಾದಿ ಧಾರ್ಮಿಕ ಕಾರ್ಯಗಳು ನಡೆಸುವುದು ಈ ಮಾಸದ ವಿಶೇಷತೆ.

ಬನದ ಹುಣ್ಣಿಮೆಯ ವಿಶೇಷ ಆಚರಣೆಯಲ್ಲಿ ಭಾರತಾದ್ಯಂತ ತಾಯಿ ಬನಶಂಕರಿಯ ಸಾನಿಧ್ಯವಿರುವ ವಿವಿಧ ಕ್ಷೇತ್ರಗಳಲ್ಲಿ ಧಾರ್ಮಿಕ ಆಚರಣೆ ವಿಜೃಂಭಣೆಯಿಂದ ಜರುಗುತ್ತದೆ. ಬೆಂಗಳೂರು, ಹುಬ್ಬಳ್ಳಿ, ಶಿವಮೊಗ್ಗ, ಭದ್ರಾವತಿ, ತೀರ್ಥಹಳ್ಳಿ ಹುಂಚ, ಕೊಣಂದೂರು, ಮೈಸೂರು, ತಿಪಟೂರು, ಹೀಗೆ ಕರ್ನಾಟಕದ ವಿವಿಧ ಭಾಗಗಳಲ್ಲಿ ತಾಯಿ ಬನಶಂಕರಿಯ ಸಾನಿಧ್ಯವಿರುವ ಪವಿತ್ರ ಕ್ಷೇತ್ರಗಳಲ್ಲಿ ಬನದಹುಣ್ಣಿಮೆ ಆಚರಣೆ ವಿಶೇಷವಾಗಿ ಜರುಗುತ್ತದೆ.

ಉತ್ತರ ಕರ್ನಾಟಕದ ಪ್ರಸಿದ್ಧ ಕ್ಷೇತ್ರವಾದ ಬಾದಾಮಿ ಬನಶಂಕರಿಯ ದೇಗುಲದಲ್ಲಿ ಈ ಬನದ ಹುಣ್ಣಿಮೆ ಜಾತ್ರಾ ಮಹೋತ್ಸವವು ತನ್ನದೇ ಆದ ಮಹತ್ವದ ಸ್ಥಾನವನ್ನು ಹೊಂದಿದೆ.



# ದಾರಿ ಯಾವುದಯ್ಯ ವೈಕುಂಠಕ್ಕೆ

- ಪ್ರಣವ
90356 18076

ಏಕಾದಶಿಯ ಉಪವಾಸದೊಂದಿಗೆ ಮನಸ್ಸಿನ ಇಂದ್ರಿಯಗಳನ್ನು ಸ್ಥಿತಗೊಳಿಸಿ ಉತ್ತರದಿಕ್ಕಿನಲ್ಲಿರುವ ವೈಕುಂಠ ದ್ವಾರದ ಮೂಲಕ ದೇವರ ದರ್ಶನ ಮಾಡಿದಾಗಲೇ ಧನ್ಯತಾಭಾವ. ಈ ಹಿನ್ನಲೆಯಲ್ಲಿ ವೈಕುಂಠ ಏಕಾದಶಿ ಆಚರಣೆ ಕುರಿತು ಕೆಲವು ಸಂಗತಿಗಳು ಇಲ್ಲಿವೆ.

ಪರಮ ಪದದೊಳಗೆ ವಿಷಧರನ ತಲ್ಪದಲಿ
ಸಿರಿ ಸಹಿತ ಕ್ಷೀರವಾರಧಿಯೊಳಿರಲು..

- ಇದು ಕನಕದಾಸರ ವೈಕುಂಠದ ವರ್ಣನೆ. ಕ್ಷೀರಸಾಗರದಲ್ಲಿ ತಾನೇ ಸುಪ್ಪತಿಗೆಯಾಗಿ ಜಗದೋದ್ಧಾರನನ್ನು ಮಲಗಿಸಿಕೊಂಡು ಸಾಸಿರ ನಾಮವನ್ನು ತನ್ನ ಸಾವಿರ ನಾಲಿಗೆಯಿಂದ ಸ್ತುತಿಸುತ್ತಿರುವ ಸಂಪತ್ತಿನ ಒಡತಿ ಲಕ್ಷ್ಮೀದೇವಿ. ನಾಭಿಯಿಂದ ಮೇಲೆದ್ದ ಕಮಲದಲ್ಲಿ ಸರಸ್ವತಿ ಸಹಿತನಾಗಿ ತನ್ನ ನಾಲ್ಕುಮೊಗದಿಂದ ಅನಂತವಾಗಿ ವೇದ ಪಠಿಸುತ್ತಿರುವ ಬ್ರಹ್ಮ, ಏಳು ಬಾಗಿಲುಗಳ ಆ ವೈಕುಂಠವನ್ನು ಅನವರತ ಕಾಯುತ್ತಿರುವ ಜಯ ವಿಜಯರು, ಪರಂಧಾಮನ ಭೇಟಿಗಾಗಿ ಚಾತಕಪಕ್ಷಿಗಳಂತೆ ಬಾಗಿಲಿನಲ್ಲಿ ಕಾಯುತ್ತ ನಿಂತ ಸನಕಾದಿ ಋಷಿಗಳು, ಸಾಮಗಾಯನ ಮಾಡುತ್ತ ಭಗವಂತನನ್ನು ಹಾಡಿಹೊಗಳುತ್ತಿರುವ ನಾರದ ತುಂಬುರರು.

ಒಮ್ಮೆಮಾತ್ರ ಅದರ ಪ್ರವೇಶವಾದರೆ ಸಾಕು. ತಮ್ಮ ಅನಂತ ಜನ್ಮಗಳ ತಪದ ಪುಣ್ಯದಿಂದ ದ್ವಾರದಲ್ಲಿ ಬಂದು ಸೇರಿರುವ ಸಾಧಕರ ತುಡಿತವು ಮರಳಿ ಬಾರದ ಆ ವೈಕುಂಠಪುರದ ಪ್ರವೇಶದ ಚರಮೇಚ್ಛೆ ! ಹೌದು, ಯಾಕಾಗಬಾರದು? ವೈಕುಂಠವೆಂದರೇನೇ ನಾಶವಿಲ್ಲದ್ದು ಎಂದು. ನಮ್ಮ ಜನನ ಮರಣಾದಿ ಅವಸ್ಥೆಗಳೆಲ್ಲವೂ ನಾಶಕ್ಕೊಳಪಟ್ಟಿರುವಂಥವುಗಳು. ಆಸ್ತಿಕರ ಅಂತಿಮ ಕಾಮವು ಮೋಕ್ಷವೇ ಆಗಿದೆ. ಸಾಧನೆಯಿಂದ ಮೋಕ್ಷ ಪ್ರಾಪ್ತಿ. ವ್ರತ ನಿಯಮಗಳು, ಉಪವಾಸಗಳು ಸಾಧನೆಯ ಸೋಪಾನಗಳು. ಜಗತ್ತಿನ ಬಹುತೇಕ ಎಲ್ಲ ಧರ್ಮಗಳೂ ಉಪವಾಸಕ್ಕೆ ಮಹತ್ವ ನೀಡಿವೆ. ಎಲ್ಲವೂ ಮನದ ಏಕಾಗ್ರತೆಗೆ ತನ್ಮೂಲಕ ಆಧ್ಯಾತ್ಮಸಾಧನೆಗೆ ಅದರಿಂದ ಕೈವಲ್ಯ ಪ್ರಾಪ್ತಿಗೆ ಉಪವಾಸ ಸಹಾಯಕಾರಿ ಎಂಬುದನ್ನು ಮನಗಂಡಿದ್ದಾರೆ. ಕಟ್ಟಳೆಗಳು ಮನವನ್ನು ಹಿಡಿತದಲ್ಲಿರಿಸುತ್ತವೆ. ಧರ್ಮವು ಒಂದು ಉಪಕರಣ ಮಾತ್ರ ಹೇಗೆ 'ಕೆಜಿ' ಯಿಂದ 'ಪಿಜಿ', ಅದರ ನಂತರದ ಉಚ್ಚ ಶಿಕ್ಷಣಕ್ಕೆ ಅವಿರತ ಸಾಧನೆಯು ಮುಖ್ಯವೋ ಹಾಗೆಯೇ ಮೋಕ್ಷಸಾಧನೆಗೆ, ಸ್ನಾನದ ಮೂಲಕ ದೇಹಶುದ್ಧಿ ಮಾಡಿಕೊಳ್ಳುವುದರಿಂದ ಮೊದಲ್ಗೊಂಡು ಯೋಗದ ಮೂಲಕ ಸಮಾಧಿಯನ್ನು ಸಾಧಿಸುವುದರ ಹಂತದಲ್ಲಿ ನಾನಾ ವ್ರತ ನಿಯಮಾದಿಗಳು. ಅದರಲ್ಲಿ ಉಪವಾಸವೂ ಒಂದು. ಎಲ್ಲ ತಿಥಿಗಳಿಗೂ ಒಬ್ಬೊಬ್ಬ ದೇವತೆಗಳಿದ್ದಾರೆ. ಏಕಾದಶಿಗೆ ಹರಿಯೇ ಅಭಿಮಾನಿ ಆದ್ದರಿಂದಲೇ ಅದಕ್ಕೆ ಹರಿದಿನವೆಂದು ಹೆಸರು. ಆದ್ದರಿಂದ ಏಕಾದಶಿಗೆ ಎಲ್ಲಿಲ್ಲದ ಮಹತ್ವ.ಏಕಾದಶಿ ಎಂದರೆ ಹನ್ನೊಂದು ಹಿಂದೂ ಪಂಚಾಂಗದಲ್ಲಿ ಪ್ರತಿ ಪಕ್ಷದ ಹನ್ನೊಂದು ದಿನಗಳಿಗೆ ಏಕಾದಶಿಯಂದು ಹರಿದಿನವಿದ್ದುದರಿಂದ ಅಂದು ಉಪವಾಸ, ಆಷಾಢ ಏಕಾದಶಿ, ವೈಕುಂಠ ಏಕಾದಶಿ ಹೀಗೆ ವರ್ಷಪೂರ್ತಿ ಬರುವ ಅವುಗಳಿಗೆ ಅದರದ್ದೇ ಅದ ಮಹತ್ವವಿದೆ.

ಚೈತ್ರದ ಕಾಮದಾ ಏಕಾದಶಿಯಂದ ಫಾಲ್ಗುಣದ ಪಾಪ ವಿಮೋಚನೀಯವರೆಗೂ ಏಕಾದಶಿಗೆ ಮಹತ್ವದ ಹೆಸರುಗಳಿವೆ. ಆಷಾಢ ಏಕಾದಶಿಯು ದಕ್ಷಿಣಾಯನದಲ್ಲಿ ಪ್ರಾರಂಭವಾಗುವ ಮಹತ್ವದ ವ್ರತ, ದಕ್ಷಿಣಾಯನವು ದೇವತೆಗಳಿಗೆ ರಾತ್ರಿ, ಆಷಾಢ ಏಕಾದಶಿಯಂದು ಯೋಗನಿದ್ರೆಗೆ ಜಾರುವ ಶ್ರೀಹರಿ ಉತ್ಥಾನ ದ್ವಾದಶಿಯಂದು ಏಳುತ್ತಾನೆ. ಅದಕ್ಕಾಗಿ

ನಾಲ್ಕು ತಿಂಗಳು ಯಾವುದೇ ಶುಭಕಾರ್ಯಗಳಿಲ್ಲ. ಆದರೆ ಸಾಧನಗೆ ಪ್ರಸಶ್ತ ವಾದ ಅವಧಿ. ಈ ಅವಧಿಯಲ್ಲಿ ಮಾಡುವ ವ್ರತಗಳಿಗೆ ಅಮಿತ ಪುಣ್ಯವೆಂದು ಶ್ರದ್ಧಾಳುಗಳ ಅಸೀಮ ನಂಬಿಕೆ. ವೈಕುಂಠ ಏಕಾದಶಿಯಂದು ಉಪವಾಸ ಮಾಡುವವರಿಗೆ ಇಡೀ ವರ್ಷ ಏಕಾದಶಿ ಮಾಡಿದ ಪುಣ್ಯ ಬರುತ್ತದೆಂದು ಶಾಸ್ತ್ರ ಪುರಾಣಗಳು ಸಾರುತ್ತವೆ.

**ಸುಪ್ರಭಾತದ ಮಹತ್ವ**


ದಿಕ್ಕುಗಳು ನಾಲ್ಕು ಅಂತೆಯೇ ಬೆಳಗಿನಲ್ಲಿ ಹಾಡುವ ಶ್ರೀವೆಂಕಟೇಶ್ವರ ಸುಪ್ರಭಾತದಲ್ಲೂ ನಾಲ್ಕು ಭಾಗಗಳು, ಅವೆಂದರೆ ಸುಪ್ರಭಾತ, ಸ್ತೋತ್ರ, ಪ್ರಪತ್ತಿ ಮತ್ತು ಮಂಗಳಾಶಾಸನ. ಒಂದು ಅಧ್ಯಯನದ ಪ್ರಕಾರ ಗೋವಿಂದನನ್ನು ಕುರಿತಾದ 'ಕೌಸಲ್ಯಾ ಸುಪ್ರಜಾರಾಮ 'ಸುಪ್ರಭಾತವೇ ಪ್ರಾಚೀನ. ಈ ಕೃತಿಯನ್ನು ಶ್ರೀವೈಷ್ಣವ ಸಂಪ್ರದಾಯದ ವಾದಿಭೀಕರ ಮಹಾಗುರುಗಳು ರಚಿಸಿದ್ದಾರೆ. ಅಷ್ಟಕ್ಕೂ ಸುಪ್ರಭಾತವೆಂದರೇನು? ಜಗನ್ನಿಯಾಮಕನಾದ ಭಗವಂತನಿಗೂ ನಿದ್ರೆಯೇ? ಅವನನ್ನೂ ಎಚ್ಚರಿಸಬೇಕೆ? ಎನ್ನುವ ಪ್ರಶ್ನೆಗಳು ಸಹಜ. ಮನಸ್ಸಿನ ಯೋಚನೆಯಂತೆ ಸ್ವಭಾವವೂ, ಕಾರ್ಯಕಾರಣವೂ ಎನ್ನುವಂತೆ ದೇದೀಪ್ಯಮಾನ ಸ್ವರೂಪನಾದ ಭಗವಂತನನ್ನು ನಾವು ಸಾಮಾನ್ಯ ಮನುಷ್ಯನಂತೆಯೇ ಕಾಣ ಬಯಸುತ್ತೇವೆ. ಆ ನಂಬುಗೆಯ ಪರಿಪಾಟಲಿನಲ್ಲೇ ಮನಸ್ಸನ್ನು ಎಚ್ಚರಗೊಳಿಸಲು ಯತ್ನಿಸುತ್ತೇವೆ. ಹೌದು, ನಿಜವಾದ ಆಧ್ಯಾತ್ಮ ಚೇತನ ದೃಢಗೊಳ್ಳುವುದು ಈ ಭಾವದಲ್ಲೇ. ದೇಹ ಮಲಗಿದಂತೆ ಕಂಡರೂ ಮನಸ್ಸು ಉಸಿರಾಟ ಪ್ರಕ್ರಿಯೆ ಮಾತ್ರ ನಿರಂತರವಾಗಿರುತ್ತದೆ. ಸುಷುಪ್ತಿ ಸ್ಥಿತಿಯಲ್ಲಿರುವ ಮನಸ್ಸನ್ನು ಜಾಗೃತಗೊಳಿಸುವ ಪ್ರಕ್ರಿಯೆಯೇ ಸುಪ್ರಭಾತ. ಅದರೊಂದಿಗೆ ದೈನಂದಿನ ಚಟುವಟಿಕೆಗಳು ಪ್ರಾರಂಭವಾಗುತ್ತವೆ. ಮೂಡಣದ ಸೂರ್ಯೋದಯಕ್ಕೆ ಸುಪ್ರಭಾತ ಸಾಕ್ಷಿಯಾಗುತ್ತದೆ.

ದೇಹವನ್ನು ಹಿಡಿಹಿಪ್ಪೆಯಾಗಿಸುವ ಧನುರ್ಮಾಸದ ಚಳಿಯಲ್ಲೂ ಭಕ್ತಿಯ ಸಿಂಚನ. ವೈಕುಂಠ ಏಕಾದಶಿ ಬಂತೆಂದರೆ ಸಾಕು,ಎಂತಹವರು ಮೈಚಳಿ ಬಿಟ್ಟೇಳುತ್ತಾರೆ. ಧಡಗುಡಿಸುತ್ತಲೇ ದೇಗುಲಗಳತ್ತ ದಾಪುಗಾಲನ್ನಿಡುತ್ತಾರೆ. ಅವರದು ಮೌಢ್ಯ ಭಾವವೋ ಅಥವಾ ಯಾಂತ್ರಿಕ ನೆಲೆಯೋ ಅಥವಾ ಪ್ರಸಾದದ ಪ್ರಲೋಭನೆಯೋ ವಿಷಯವೇನೇ ಇದ್ದರೂ ಜನ, ಮನಗಳನ್ನು ಒಂದು ಮಾಡುವ ಆಚರಣೆಯೇ ವೈಕುಂಠ ಏಕಾದಶಿ ಎಂದರೆ ಅತಿಶಯೋಕ್ತಿಯಲ್ಲ! ವೈಕುಂಠ ಏಕಾದಶಿ ವ್ರತಾಚರಣೆ, ದರ್ಶನಕ್ಕಷ್ಟೇ ಸೀಮಿತವಲ್ಲ, ಅದರಲ್ಲಿ ಆಧ್ಯಾತ್ಮಿಕ, ವೈಜ್ಞಾನಿಕ ಭಾವವು ಸಮ್ಮಿಲನಗೊಂಡಿದೆ.

**ಉತ್ತರಾಯಣದ ದ್ವಾರ**

ವೈಕುಂಠ ಏಕಾದಶಿಯಂದು ಉತ್ತರ ದ್ವಾರದ ಮೂಲಕವೇ ಭಗವಂತನ್ನು ಏಕೆ ದರ್ಶಿಸಬೇಕು? ಅದರ ಹಿನ್ನಲೆಯಲ್ಲಿ ಇರುವ ಸಂದೇಶವಾದರೂ ಏನು? ಸ್ಥೂಲವಾಗಿ ಯೋಚಿಸಿ, ಉತ್ತರಾಯಣದ ಮುನ್ನ ಕಾಲವೇ ಸಂಕ್ರಮಣ. ದಕ್ಷಿಣ ದಿಕ್ಕಿಗೆ ಕರ್ಮ ಸ್ಥಾನ ಎನ್ನುವ ಮಾತಿದೆ. "ತಮಸೋಮಾ ಜ್ಯೋತಿರ್ಗಮಯ" ಎನ್ನುವ ಉಪನಿಷತ್ ವಾಕ್ಯದಂತೆ ಅಜ್ಞಾನದಿಂದ ಸುಜ್ಞಾನದೆಡೆಗೆ ಕತ್ತಲಿನಿಂದ ಬೆಳಕಿನೆಡೆಗೆ ಸಾಗುವ ಸಮಯವೇ ಉತ್ತರಾಯಣ.

ಮನೆಗೊಂದು ಬಾಗಿಲಿರುವಂತೆ ಉತ್ತರಾಯಣದ ದ್ವಾರವೇ ವೈಕುಂಠ ಏಕಾದಶಿ! ಏಕಾದಶಿ ಆಚರಣೆಯ ನೆವದಲ್ಲಿ ಜಿಹ್ವಾ ಚಾಪಲ್ಯಕ್ಕೆ, ಉತ್ತರ ದ್ವಾರದಲ್ಲಿ ತಲೆ ತಗ್ಗಿಸುವ ನೆವದಲ್ಲಿ ಮನಸ್ಸಿನ ಅಹಂಕಾರಕ್ಕೆ



ಒಂದಿಷ್ಟು ಬ್ರೇಕ್ ಹಾಕುತ್ತೇವೆ. ಅಂತಹ ಭಾವನೆಯಲ್ಲಿ ನಡೆದಾಗ ಮಾತ್ರವೇ ವೈಕುಂಠ ಏಕಾದಶಿ ಆಚರಣೆಯಲ್ಲಿ ಒಂದಷ್ಟು ಸಾರ್ಥಕತೆ ಕಂಡೀತು. ದೇವಾಸುರರು ಆದಿಶೇಷನನ್ನು ಹಗ್ಗದ ರೀತಿಯಲ್ಲಿ ಬಿಗಿದು ಮಂದಾರ ಪರ್ವತವನ್ನೇ ಕಡೆಗೋಲಿನಂತೆ ಬಳಸಿ ಸಮುದ್ರವನ್ನು ಮಥಿಸಿದ ಸಂಗತಿಯನ್ನು ನಾವು ತಿಳಿದೇ ಇದ್ದೇವೆ. ಹೀಗೆ ಸಮುದ್ರವನ್ನು ಮಥಿಸುತ್ತಿರುವಾಗ ಅಸಂಖ್ಯ ಜೀವದ್ರವ್ಯಗಳು, ಜೀವಿಗಳು, ಜೀವಾಮೃತ, ಕಾರ್ಕೋಟಕದಂತಹ ವಿಷ ಸಮುದ್ರದಿಂದ ಹೊರ ಬಂದವು ಹಾಗೆ ಹೊರ ಬಂದ ವಸ್ತುಗಳಲ್ಲಿ, ಜೀವಿಗಳನ್ನು ಮೃತ್ಯುಂಜಯರನ್ನಾಗಿ ಮಾಡಬಲ್ಲ ಅಮೃತ ಹೊರಬಂದದ್ದು ವೈಕುಂಠ ಏಕಾದಶಿಯಂದೇ ಎಂಬುದು ಅನೇಕ ಪುರಾಣಗಳಲ್ಲಿ ವ್ಯಾಖ್ಯಾನಿಸಿರುವ ಸಂಗತಿಗಳಿಂದ ತಿಳಿಯುತ್ತದೆ. ಹೀಗಾಗಿ ವೈಕುಂಠ ಏಕಾದಶಿಗೆ ತನ್ನದೇ ಆದ ಪ್ರಾಮುಖ್ಯತೆ ಹಾಗೂ ಪವಿತ್ರತೆ ಸಂದಿದೆ.

ವರ್ಷಂಪ್ರತಿ ದುರಾಚಾರ ಮಾಡಿ, ಉಪವಾಸಗೈದರೆ, ಮನಸ್ಸಿನಲ್ಲಿ ಕಲ್ಮಷಗಳನ್ನು ಗುಡ್ಡೆಹಾಕಿಕೊಂಡು ಮಿಂದರೆ, ಪಾಪ ದೂರವಾಗುವುದೇ? ಎಂಬ ಪ್ರಶ್ನೆಗಳನ್ನು ನಮಗೆ ನಾವು ಕೇಳಿಕೊಳ್ಳಬೇಕಾದ ಸಮಯವಿದು, ಏಕೆಂದರೆ, ಇಂದು ಯಾವುದೇ ಪುಣ್ಯಸ್ಥಳಗಳನ್ನು ನೋಡಿದರು ಎಲ್ಲೆಡೆ ಜನ ಜಂಗುಳಿ ತುಂಬಿ ತುಳುಕುತ್ತಿರುತ್ತದೆ. ಆದರೂ ನಮ್ಮ ರಾಷ್ಟ್ರದಲ್ಲಿ ನಡೆಯುತ್ತಿರುವ ಸಂಗತಿಗಳನ್ನು ಗಮನಿಸಿದರೆ ನಮ್ಮ ಭಕ್ತಿ ಆಚರಣೆ ಕೇವಲ ದೇವಸ್ಥಾನ ಹಾಗೂ ದೇವರ ಮನೆಗೆ ಮಾತ್ರ ಸೀಮಿತವಾಗುತ್ತದೆಯೇ ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡದೇ ಇರದು.

ನಾವು ಒಂದು ಸಂಗತಿಯನ್ನು ತಿಳಿಯಬೇಕು, ಎಂದೋ ಒಂದು ದಿನದ ಆಚರಣೆಯಿಂದ ನಮ್ಮ ಪಾಪದ ಕೊಡದಲ್ಲಿಯ ಕೆಲ ಹನಿಗಳು ಕಡಿಮೆಯಾಗಬಹುದೇ ಹೊರತು ಆ ಇಡೀ ಕೊಡವೇ ಬರಿದಾಗುವುದಿಲ್ಲ. ಆ ಕೊಡ ಬರಿದಾಗಬೇಕಾದರೆ ನಮ್ಮ ದಿನ ನಿತ್ಯದ ಜೀವನದಲ್ಲಿ ಭಗವದ್ಭಕ್ತಿಯ ಜೊತೆ ಸದಾಚಾರ, ಭ್ರಷ್ಟಾಚಾರ ರಹಿತ ಜೀವನ, ಪರಧನಗಳ ಕುರಿತು ವೈರಾಗ್ಯ ಭಾವವನ್ನು ಪಾಲಿಸಬೇಕು.

ಕನಕದಾಸರ ಯಾವುದೋ ಒಂದು ದಿನದ ಕರೆಗೆ ಕೃಷ್ಣ ದರ್ಶನ ನೀಡಲಿಲ್ಲ, ಪುರಂದರದಾಸರ ಯಾವುದೋ ಒಂದು ರಚಿಸಿದ ಕೀರ್ತನೆಗೆ ಪುರಂದರ ವಿಠ್ಠಲ ಒಲಿಯಲಿಲ್ಲ. ಪ್ರಹ್ಲಾದನ ಒಂದು ದಿನದ ಕೂಗಿಗೆ ನರಸಿಂಹ ಪ್ರತ್ಯಕ್ಷವಾಗಲಿಲ್ಲ. ಆದರೆ, ಆ ಭಗವಂತ ಒಲಿದಿದ್ದು, ಅವರ ನಿಷ್ಕಾಮ ಭಕ್ತಿಗೆ, ನುಡಿದಂತೆ ನಡೆದ ಅವರ ಆಚರಣೆಗೆ, ಎಲ್ಲೆಡೆ ದೇವರು ನೆಲೆಸಿದ್ದಾನೆ ಎಂಬ ನಂಬಿಕೆಗೆ, ಭಕ್ತಿಗೆ ಒಲಿಯುವ ಶ್ರೀನಿವಾಸನ ಕೃಪೆಗೆ ಪಾತ್ರರಾಗಲು ಪ್ರತಿ ದಿನವೂ ಅವನ ನಾಮಸ್ಮರಣೆಯಲ್ಲಿ ಮೈಮರೆಯುತ್ತ ಕಾಯಾ,ವಾಚಾ, ಮನಸಾ ಆತನ ಸೇವೆ ಮಾಡಲು ಶ್ರಮಿಸೋಣ.



# ಜನವರಿ 2025 ತಿಂಗಳ ರಾಶಿ ಫಲಗಳು

ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್



**ಮೇಷ**

ಕಳೆದ ತಿಂಗಳಿಗಿಂತಲೂ ವೃತ್ತಿ - ವ್ಯಾಪಾರಗಳಲ್ಲಿ ಅನುಕೂಲತೆ ಒದಗಿ ಬರುತ್ತದೆ. ಪರಿಸ್ಥಿತಿಗಳು ಅನುಕೂಲಕರವಾಗಿರುತ್ತವೆ. ನಿಮ್ಮ ಸಾಮಾಜಿಕ ವೃತ್ತದಲ್ಲಿ ಗೌರವಾದರಗಳು ವೃದ್ಧಿಯಾಗುತ್ತವೆ. ದೂರಪ್ರಯಾಣ ಖರ್ಚುಗಳು ಇದ್ದೇ ಇರುತ್ತದೆ. ಬಂಧುಗಳ ಮನೆಗೆ ಪರಾಮರ್ಶಿಸಲು ಹೋಗಬೇಕಾಗಿ ಬರುವುದು. ಭೂವಿವಾದಗಳನ್ನು ಬಗೆಹರಿಸಿಕೊಳ್ಳಬೇಕಾಗಿ ಬರಬಹುದು.

**ವೃಷಭ**

ಆರ್ಥಿಕವಾಗಿ ತೊಂದರೆಗಳಿರುವುದಿಲ್ಲ. ವಿದೇಶಿ ವೀಸಾಗಳು, ಇತರೆ ದೇಶ ಪ್ರಯಾಣಗಳು ಕಲಿತು ಬರುತ್ತದೆ. ಧೈರ್ಯದಿಂದ ಕಾರ್ಯಸಿದ್ಧಿಯುಂಟಾಗುತ್ತದೆ. ವಿದ್ಯಾ ವಿಕಾಸವುಂಟಾಗುತ್ತದೆ. ರಕ್ತ ಪರಿಚಲನೆ ನಿಯಂತ್ರಣೆ ವಿಷಯದಲ್ಲಿ ಶ್ರದ್ಧೆ ಅಗತ್ಯ. ಧನ ಸಂಗ್ರಹಿಸುವಿರಿ.

**ಮಿಥುನ**

ನಿಮ್ಮ ಅಪೇಕ್ಷೆಗಳನ್ನು, ಗುರಿಗಳನ್ನು ಮನನ ಮಾಡಿಕೊಂಡು ಪ್ರತಿರೋಧಕಗಳನ್ನು ಅತಿಕ್ರಮಿಸಿ, ಸಾಹಸ ಹಾಗೂ ಶಾಂತ ಸ್ವಭಾವದಿಂದ ಎಲ್ಲದರಲ್ಲೂ ವಿಜಯ ಸಾಧಿಸುವಿರಿ. ವಾಹನ ಚಾಲಕರು ಪ್ರಯಾಣದಲ್ಲಿ ಜಾಗ್ರತೆವಹಿಸಬೇಕು.

**ಕರ್ಕಾಟಕ**

ಆರ್ಥಿಕ ವಿಷಯಗಳಲ್ಲಿ ಶ್ರದ್ಧೆ ಅಗತ್ಯ. ಅನಗತ್ಯವಾದ ವೆಚ್ಚಗಳನ್ನು ಕಡಿಮೆ ಮಾಡಿಕೊಳ್ಳಬೇಕು. ನಿಮ್ಮ ವೃತ್ತಿ ಜೀವನದಲ್ಲಿ ಸಮಸ್ಯೆಗಳು, ಸ್ವಲ್ಪ ಮಾನಸಿಕ ಒತ್ತಡ, ವಿವಾದಗಳಿಂದ ದೂರವಿರಿ. ಪ್ರಮುಖವಾಗಿ ಎದೆ ಮತ್ತು ಹೊಟ್ಟೆಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳು ಉಂಟಾಗುತ್ತದೆ.

**ಸಿಂಹ**

ವಿಷಯವಿಲಾಸಗಳನ್ನು ಅನುಭವಿಸುವಿರಿ. ಸಮಸ್ತ ಕೋರಿಕೆಗಳು ನೆರವೇರುತ್ತವೆ. ಹಣ ಸಂಪತ್ತು ಆಸ್ತಿಗಳನ್ನು ಕೂಡಿಡುವ ಸಾಧ್ಯತೆಯಿದೆ. ಆಸ್ತಿ, ಒಳ್ಳೆಯ ಹೆಸರು, ಆದಾಯ, ಕುಟುಂಬದಲ್ಲಿ ಆನಂದ, ಒಳ್ಳೆಯ ಆರೋಗ್ಯವಿರುತ್ತದೆ.

**ಕನ್ಯೆ**

ಆರೋಗ್ಯ ಸಮಸ್ಯೆಗಳ ಕುರಿತು ನಿರಂತರ ಭಯ. ಸ್ವಲ್ಪ ಮಾನಸಿಕ ಕ್ಷೋಭೆ ಮತ್ತು ಪ್ರಯಾಣಗಳನ್ನು ತಡೆಯಿರಿ. ಅಧಿಕಾರಿಗಳಿಂದ ಸರ್ಕಾರದಿಂದಾಗಲೀ ಮನ್ನಣೆ ಅಥವಾ ಪ್ರತಿಫಲ ದೊರಕಲಿದೆ.

**ತುಲಾ**

ಬರಬೇಕಾದ ಬಾಕಿಗಳು ವಸೂಲಿಯಾಗುತ್ತವೆ. ಸೋದರವರ್ಗದವರಿಂದ ಕಿರಿಕಿರಿ, ಧೈರ್ಯವನ್ನು ಮುಂದಿಟ್ಟುಕೊಂಡು ಸಾಗಿದಲ್ಲಿ ಗೆಲುವನ್ನು ಸಾಧಿಸುವಿರಿ. ಪುತ್ರಸಂತಾನಪ್ರಾಪ್ತಿ, ಕೋರ್ಟು ವಿಚಾರಗಳು ಅನುಕೂಲವಾಗಲಿವೆ.

**ವೃಶ್ಚಿಕ**

ನ್ಯಾಯಾಲಯಗಳಿಗೆ ಸುತ್ತಾಟ, ಧನವ್ಯಯ, ಬಂಧನವಾಗುವ ಸಾಧ್ಯತೆ ಇದೆ. ಕಂಠಕ್ಕೆ ಸಂಬಂಧಿಸಿದ ಅನಾರೋಗ್ಯ ಸೂಚನಗೆಳು, ಮಾಸಾದಿಯಿಂದ ಸುಬ್ರಹ್ಮಣ್ಯ ಆರಾಧನೆ, ಅಭಿಷೇಕ ಉಪಶಮನ್ನೀಯ ಬಲ್ಲದು.

**ಧನಸ್ಸು**

ಅಧಿಕಾರಾಭಾಸ ವೃದ್ಧಿ, ಖರ್ಚುಗಳು ಜಾಸ್ತಿಯಾಗಲಿದೆ. ಆರೋಗ್ಯ ಸಾಮಾನ್ಯ ಮನೆಯ ಶುಭಕಾರ್ಯಗಳು ಮುಂದೂಡಲ್ಪಡಲಿವೆ ವೃತ್ತಿಯು ಅನುಕೂಲಕರ.

**ಮಕರ**


ಹಿಂದಿನಿಂದ ನಿಧಾನವಾಗಿ ಸಾಗಿ ಬರುತ್ತಿದ್ದ ಮದುವೆ ಸಂಬಂಧಗಳು ಒಂದು ಹಂತವನ್ನು ತಲುಪುತ್ತವೆ. ವಿಮುಕ್ತರಾಗಲಿದ್ದೀರಿ. ಸಹನೆಯನ್ನು ಅಭ್ಯಾಸ ಮಾಡಿಕೊಳ್ಳುವುದು ಒಳ್ಳೆಯ ಕೆಲಸ.

**ಕುಂಭ**

ಮೇಲಧಿಕಾರಿಗಳು ನಿಮ್ಮನ್ನು ಪ್ರಶಂಸಿಸುತ್ತಾರೆ. ಗುರುತಿಸಲ್ಪಟ್ಟು ಪ್ರಮುಖರಾಗುವಿರಿ. ಕುಟುಂಬ ಹಾಗೂ ಸ್ನೇಹಿತರು ನಿಮ್ಮನ್ನು ಗೌರವಿಸಲಿದ್ದಾರೆ. ಸಾಮಾಜಿಕವಾಗಿ ಸಹಾ ಪ್ರಶಂಸೆಯನ್ನು ಪಡೆಯಲಿದ್ದೀರಿ. ಆರೋಗ್ಯ ಉತ್ತಮ.

**ಮೀನ**

ಜೀವನವು ಉಲ್ಲಾಸಮಯವಾಗಿರಲಿದೆ. ಸಂತೃಪ್ತಿಕರವಾದ ಆದಾಯ ಹಾಗೂ ವೃದ್ಧಿಯನ್ನ ಪಡೆಯುತ್ತೀರಿ. ಜೀವನ ಸಂಗಾತಿಯೊಂದಿಗೆ ಸಹ ನಿಮ್ಮ ಸಂಬಂಧ ಮಧುರ ಹಾಗೂ ಮೃದುವಾಗಿರುವುದು. ಮಾನಸಿಕ ಪ್ರಶಾಂತತೆ ಇರುವುದು. ನಿಮ್ಮ ಸಂಕಲ್ಪಶಕ್ತಿಯನ್ನು ಪ್ರೇರೇಪಿಸಲಿದೆ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ॥ ಅನಸೂಯ ಎಸ್. ರಾಜೀವ್

### 1. ಗಣಪತಿಗೆ ಮೊದಲ ಪೂಜೆ ಏಕೆ?

**ಉತ್ತರ:** ಬ್ರಹ್ಮಾಂಡದಲ್ಲಿ ಪ್ರಪಂಚ ಹುಟ್ಟಿದಾಗ ಮೊದಲು ಉದ್ಭವಿಸಿದ ಕಲ್ಪನೆಯೇ ಗಣಪತಿ. ಗಣಪತಿಯ ಆರಾಧನೆಯಿಂದ ಮಾಡುವ ವ್ಯಕ್ತಿಯ ದೇಹದೊಳಗೆ ಇರುವಂಥ ಪ್ರಕೃತಿ ಮತ್ತು ಪುರುಷ ಸಮನಾಗಿ ಕೆಲಸ ಮಾಡುತ್ತದೆ. ಬೆನ್ನು ಹುರಿಯ ತುದಿಯಲ್ಲಿರುವ ಮೂಲಾಧಾರ ಚಕ್ರದ ಅಧಿಪತಿಯೇ ಗಣೇಶ. ಈ ಮೂಲಾಧಾರ ಕ್ಷೇತ್ರದಿಂದ ಕುಂಡಲಿನೀ ಶಕ್ತಿಯು ಜಾಗೃತವಾಗಿ ಮೇಲ್ಮುಖವಾಗಿ ಹರಿಯಲು ಆರಂಭಿಸುವುದು. ಇದಕ್ಕಾಗಿ ಪ್ರಥಮತಃ ಗಣೇಶನ ಉಪಾಸನೆ ಅಗತ್ಯ. ಶುದ್ಧಿಕ್ರಿಯೆಗೆ ಗಣಪತಿಯ ಪ್ರೇರಣೆಯೇ ಮೂಲ. ಹಾಗಾಗಿ ಗಣಪತಿ ಆದಿಪೂಜ್ಯನೆಂದು ತಿಳಿಯುವುದು ಪೌರಣಿಕವಾಗಿ ಹೇಳಬೇಕೆಂದರೆ ಒಮ್ಮೆ ಸ್ಕಂದನು ನಾನೇ ಗಣೇಶನಿಗಿಂತ ಶ್ರೇಷ್ಠ ಎಂದು ಹೇಳುತ್ತಿರಲು ಶಿವನು ಒಂದು ಪಂದ್ಯವನ್ನು ಏರ್ಪಡಿಸಿ ಅದರಲ್ಲಿ ಯಾರು ಮೂರು ಬಾರಿ ಪ್ರಪಂಚವನ್ನು ಸುತ್ತಿ ಮೊದಲು ಬರುತ್ತಾರೋ ಅವರೇ ಶ್ರೇಷ್ಠರು ಅವರಿಗೇ ಪ್ರಥಮ ಪೂಜೆ ಎಂದನು. ಆಗ ಸ್ಕಂದನು ನವಿಲನೇರಿ ವಿಶ್ವಪರ್ಯಟನೆಗೆ ಹೊರಟನು. ಗಣೇಶನು ಮೂಷಿಕವನ್ನೇರಿ ಶಿವ ಪಾರ್ವತಿಯರನ್ನು ಮೂರೂ ಬಾರಿ ಸುತ್ತಿ ಬಂದು ನಿಂತನು. ತಂದೇ ತಾಯಿಯೇ ಪ್ರಪಂಚವೆಂದು ಅವನ ಭಾವನೆ ಯಾಗಿತ್ತು. ಆಗ ಶಿವನು ಶಕ್ತಿ ಯುಕ್ತಿ ಎಲ್ಲರದಲ್ಲೂ ಗಣೇಶನೇ ಶ್ರೇಷ್ಠ ನೆಂದೂ ಅವನಿಗೇ ಪ್ರಥಮಪೂಜೆ ಸಲ್ಲಬೇಕೆಂದು ನಿರ್ಣಯಿಸಿದನು. ಅಂದಿನಿಂದ ಗಣೇಶನು ಆದಿಪೂಜ್ಯನಾದನು.

### 2. ಗರಿಕೆ ಗಣಪನಿಗೆ ಪ್ರಿಯವಾಗಲು ಕಾರಣವೇನು?

**ಉತ್ತರ :** ಗಣಪತಿಗೆ ಗರಿಕೆ ಏರಿಸದಿದ್ದರೆ ಉಪವಾಸ ಮಾಡುತ್ತಾನೆ ಎಂಬ ಪ್ರತೀತಿ ಇದೆ. ಗಣೇಶನ ತಲೆ ಆನೆಯದು. ಆನೆಗೆ ಕಬ್ಬು, ಗರಿಕೆ, ಸೊಪ್ಪುಸದೆ ಎಂದರೆ ಪಂಚಪ್ರಾಣ, ಹಾಗಾಗಿ ಗಣಪತಿಗೆ ಗರಿಕೆ ಇಷ್ಟ. ಗಣೇಶ ಪುರಾಣದಲ್ಲಿರುವಂತೆ ಲಂಬಕರ್ಣನು ಚಿಕ್ಕವನಿದ್ದಾಗಲೇ ಅನೇಕಾನೇಕ ದನುಜರನ್ನು ಸಂಹರಿಸಿದ್ದನಂತೆ, ಹಾಗೆಯೇ ಒಂದು ದಿನ ಒಬ್ಬ ರಾಕ್ಷಸನನ್ನು ನುಂಗಿಯೇ ಬಿಡುತ್ತಾನೇ. ಎಷ್ಟೇ ಸಮಯವಾದರೂ ಅವನ ಕೋಪ ಕಡಿಮೆಯಾಗಲಿಲ್ಲ. ಆಗ ಸಾವಿರಾರು ಋಷಿಮುನಿಗಳು ತಲಾ ಇಪ್ಪತ್ತೊಂದು ಗರಿಕೆಗಳನ್ನು ಬಾಲಗಣಪತಿಗೆ ಅರ್ಪಿಸಿದಾಗ ಅವನ ಕೋಪ ಶಮನಗೊಂಡು ಪರಿಸ್ಥಿತಿ ತಿಳಿಯಾಗಿ ಸಂಕಷ್ಟ ನಿವಾರಣೆಯಾಯಿತು ಎಂಬ ಪ್ರತೀತಿ ಇದೆ. ಹಾಗಾಗಿ ಗಣಪತಿಗೆ ಗರಿಕೆ ಪ್ರಿಯ.

### 3. ಗಣಪತಿಯನ್ನು ಮೂಷಿಕವಾಹನನೆಂದು ಕರೆಯುವ ಅರ್ಥವೇನು?

**ಉತ್ತರ :** ಗಣಪತಿಯನ್ನು ಮೂಷಿಕವಾಹನ ಎಂದು ಕರೆಯುತ್ತಾರೆ. ಏಕೆಂದರೆ ಆತನ ವಾಹನ ಮೂಷಿಕ, ಅಂದರೆ ಇಲಿ. ಇದು ಆಧ್ಯಾತ್ಮಿಕ ಹಾಗೂ ತಾತ್ವಿಕ ಅರ್ಥವನ್ನು ಹೊಂದಿದೆ. ಇಲಿ ವಾಸನೆ ಆಸೆ, ಮತ್ತು ಅಸ್ಥಿರತೆಯನ್ನು ಪ್ರತಿನಿಧಿಸುತ್ತದೆ ಮತ್ತು ಗಣೇಶನು ಬುದ್ಧಿ, ಜ್ಞಾನ ಮತ್ತು ನಿಯಂತ್ರಣದ ಪ್ರತೀಕವಾಗಿದ್ದಾನೆ. ಗಣೇಶನು ಇದನ್ನು ಸವಾರಿ ಮಾಡುವ ಮೂಲಕ ಜ್ಞಾನವು, ಹೀನವಾದ ಇಚ್ಚೆಗಳನ್ನು ಮತ್ತು ಆಸೆಗಳನ್ನು ಗೆಲ್ಲುತ್ತದೆ ಎಂದು ಸೂಚಿಸುತ್ತದೆ. ಪೌರಾಣಿಕ ಕಥೆಗಳಲ್ಲಿಯೂ ಇದಕ್ಕೆ ವಿವರಗಳನ್ನು ಕೊಡಲಾಗಿದೆ. ಒಂದು ಪ್ರಸಿದ್ಧ ಕಥೆಯ ಪ್ರಕಾರ, ಕ್ರೌಂಚ ಎಂಬ ಸ್ವರ್ಗೀಯ ಸಂಗೀತಗಾರನು ಶಾಪಕ್ಕೆ ಒಳಗಾಗಿ ದೊಡ್ಡ ಇಲಿಯಾಗಿ ಜನ್ಮ ತಾಳುತ್ತಾನೆ. ತನ್ನ ಪರಾಕ್ರಮದಿಂದ ಎಲ್ಲೆಡೆ ಸಮಸ್ಯೆ ಸೃಷ್ಟಿಸುತ್ತಿದ್ದಾಗ, ಅವನು ಗಣೇಶನ ಬಳಿ ಬರುತ್ತಾನೆ. ಗಣೇಶನು ಆ ಇಲಿಯನ್ನು ಶಮನ ಮಾಡಿ ತನ್ನ ವಾಹನವನ್ನಾಗಿ ಮಾಡುತ್ತಾನೆ. ಇದು ತಮಸ್ಸನ್ನು ಬುದ್ಧಿಯ ಮೂಲಕ ಗೆಲ್ಲಬಹುದೆಂಬುದನ್ನು ಸೂಚಿಸುತ್ತದೆ.

### 4. ಗಣಪತಿ ಪೂಜೆಯ ವೈಜ್ಞಾನಿಕ ಹಿನ್ನೆಲೆಯೇನು?

**ಉತ್ತರ :** ಆಕಾಶದಲ್ಲಿ ಮಖಾ ನಕ್ಷತ್ರಕ್ಕೆ ಉತ್ತರವಾಗಿ ಸಪ್ತರ್ಷಿ ಮಂಡಲವಿದೆ. ಸಪ್ತರ್ಷಿ ಮಂಡಲದಲ್ಲಿನ ಮಾದಲೆರಡು ನಕ್ಷತ್ರಗಳಿಗೆ ಮುಂಚೆ ವಿನಾಯಕ ಮಂಡಲ ಇದೆ. ಈ ವಿನಾಯಕ ಮಂಡಲದಲ್ಲಿನ ನಕ್ಷತ್ರಗಳು ಕೇವಲ ಭಾದ್ರಪದ ಶುದ್ಧ ಚೌತಿದಿನವೇ ಉದಯಿಸುತ್ತದೆ. ಈ ನಕ್ಷತ್ರಗಳ ಆಕೃತಿಯನ್ನು ಸೇರಿಸಿದರೆ ವಿನಾಯಕನ ರೂಪ ಕಾಣಿಸುತ್ತದೆ.

ಧರ್ಮ ಸಿಂಧುವಿನಲ್ಲಿ ತಿಳಿಸಿರುವಂತೆ ಈ ನಕ್ಷತ್ರಗಳು ಉದಯಿಸಿದಾಗಲೇ ವಿನಾಯಕನ ಪೂಜೆ ಮಾಡಬೇಕು. ಈ ನಕ್ಷತ್ರಗಳು ಕಪ್ಪಾ, ಅಯಾಲಾ, ತೀಲಾ, ಅಪ್ಪೀಲ್ಲಾನ್, ಪೈ, ಬಿಮಿಕ್ರಾನ್ ಎಂದಾಗಿದ್ದು ಇವುಗಳನ್ನು ಕೂಡಿಸಿದಾಗ ಆನೆಯ ಸೊಂಡಿಲು, ಗಜಮುಖ, ಲಂಬೋದರ ಆಕಾರ ಕಾಣಿಸುತ್ತದೆ. ಬಿಮಿಕ್ರಾನ್, ಪೈ, ಬಿ - 5 ನಕ್ಷತ್ರಗಳನ್ನು ಸೇರಿಸಿದರೆ ಮೂಷಿಕನ ಆಕೃತಿ ಉಂಟಾಗುತ್ತದೆ. ಬಾಲದ ಆಕೃತಿಗೆ ತೀಲಾ, ಮರೀಚಿ ನಕ್ಷತ್ರಗಳನ್ನು ಕೂಡಿಸಬೇಕು. ಮಧ್ಯದಲ್ಲಿ ಆಶ್ಲೇಷ ನಕ್ಷತ್ರ ಮಂಡಲವಿದೆ. ಆಶ್ಲೇಷ ಸರ್ಪದೈವತ್ವ ಆದುದರಿಂದ ವಿನಾಯಕ ಸರ್ಪ ಯಜ್ಞೋಪವೀತನಾದ. ಫಾಲ್ಗುಣ ಶುದ್ಧ ಚೌತಿ, ಚೈತ್ರ ಶುದ್ಧಚೌತಿ, ಮಾಘ ಶುದ್ಧ ಚೌತಿಯಂದೂ ವಿನಾಯಕ ನಕ್ಷತ್ರಗಳು ಉದಯಿಸುವುದರಿಂದ ಅಂದು ಕೂಡ ವಿನಾಯಕನ ಪೂಜೆ ಮಾಡುತ್ತಾರೆ.

### 5. ಗಣಪತಿಯ ಅಂಗಗಳ ಸಂದೇಶವೇನು?

**ಉತ್ತರ :** ಮೊರದಗಲದ ಕಿವಿಯೂ ಎಲ್ಲೆಡೆಯ ಸದ್ವಿಚಾರಗಳನ್ನೆಲ್ಲ ಹೀರಿ ಮೈಗೂಡಿಸಿಕೊಳ್ಳುವ ಸಂದೇಶ ನೀಡುತ್ತದೆ. ಮೋದಕವು ಅಹಂಭಾವ ಶೂನ್ಯವಾದಲ್ಲಿ ಎತ್ತಿ ಹಿಡಿಯಬಲ್ಲೆ ಎಂಬುದನ್ನು ಸೂಚಿಸುತ್ತದೆ. ದಂತಗಳು ವಿವೇಕ, ವೈರಾಗ್ಯ, ತ್ಯಾಗ, ಸೇವೆಯನ್ನು ಮಾಡಿಸಿಕೊಳ್ಳಲು ಸಂದೇಶವನ್ನು ನೀಡುತ್ತದೆ. ಉದ್ದ ಸೊಂಡಿಲು ಭಗವತ್ ಚಿಂತನೆಯನ್ನು ಸುದೀರ್ಘವಾಗಿ ಇರಿಸಿಕೊಳ್ಳಲು ಸಂದೇಶ ನೀಡುತ್ತದೆ. ದೊಡ್ಡ ಹೊಟ್ಟೆಯು ಎಲ್ಲರ ಕಷ್ಟಗಳನ್ನು ನುಂಗಬಲ್ಲೆ ಎಂಬ ಸಂದೇಶವನ್ನು ನೀಡುತ್ತದೆ. ನಾಗ ಯಜ್ಞೋಪವೀತವು ಬಂಧಿಸುವ ಒಂಭತ್ತು ಮಂದಿ ಆಂತರಿಕ ವೈರಿಯನ್ನು ನಿಗ್ರಹಿಸಿ ಕುಂಡಲಿನ ಜಾಗೃತಿ ಮಾಡಿಸಬಲ್ಲೆನೆಂಬ ಸಂದೇಶ ನೀಡುತ್ತದೆ. ಇಲಿಯು ಮನೋಚಾಂಚಲ್ಯವನ್ನೆಲ್ಲ ಮೆಟ್ಟಿ ಸಂಚರಿಸಬಲ್ಲೆ ಎಂಬ ಸಂದೇಶ ನೀಡುತ್ತದೆ.

ನೀತಿ ಕಥೆ



# ಸತ್ಯವೇ ನಮ್ಮನ್ನು ಸದಾ ಕಾಪಾಡುತ್ತದೆ


– ಎ.ಆರ್. ರಘುರಾಮ
99161 38436


ಕಳ್ಳನೊಬ್ಬ ನಡುರಾತ್ರಿ ತನ್ನ ಕೃತ್ಯ ಎಸಗಲು ಸಿದ್ಧತೆ ನಡೆಸಿದ್ದ. ಅರಮನೆ ಖಜಾನೆ ದರೋಡೆ ಮಾಡುವುದು ಅವನ ಉದ್ದೇಶವಾಗಿತ್ತು.

ಮಾರುವೇಷದಲ್ಲಿ ಬಂದ ವ್ಯಕ್ತಿಯೊಬ್ಬ ಈತನನ್ನು ಮಾತಾಡಿಸಿದ. ಅರಮನೆ ಖಜಾನೆ ದರೋಡೆಗೆ ಹೊರಟಿರುವೆ ಎಂದು ಕಳ್ಳ ಹೇಳಿದ. ನಾನೂ ಒಬ್ಬಕಳ್ಳ. ನಿನ್ನ ಜತೆ ಬರಲೇ ಎಂದು ಮಾರುವೇಶದವ ವಿನಂತಿಸಿದ.

ಅದಕ್ಕೇನಂತೆ ಬಾ. ನೀನು ಈ ಕೃತ್ಯದಲ್ಲಿ ಸಲ್ಪ ಹೊಸವನಂತೆ ಕಾಣುತ್ತಿರುವೆ. ನಾನು ಕಳ್ಳತನದಲ್ಲಿ ಹಲವಾರು ವರ್ಷಗಳಿಂದ ಪಳಗಿದವನು. ನನಗೆ ಸಹಾಯ ಮಾಡು ಎಂದ. ನಾನು ಅರಮನೆ ಖಜಾನೆ ದರೋಡೆ ಮಾಡುತ್ತೇನೆ. ನೀನು ಇಲ್ಲೇ ಬಾಗಿಲಲ್ಲಿ ನಿಲ್ಲು.


ಯಾರಾದರೂ ಬಂದರೆ ಒಂದು ಸಿಳ್ಳೆ ಹಾಕು. ಇಬ್ಬರೂ ಪರಾರಿಯಾಗೋಣ. ಕದ್ದ ಎಲ್ಲ ವಸ್ತುಗಳಲ್ಲೂ ನಿನಗೆ ಸಮನಾಗಿ ಅರ್ಧ ಪಾಲು ಕೊಡುವೆ ಎಂದು ಭರವಸೆ ಇತ್ತ. ಸರಿ ದರೋಡೆ ಮಾಡಿ, ನಗ, ನಾಣ್ಯ ಸಹಿತ ಕಳ್ಳ ಹೊರ ಬಂದ. ಹಂಚಿಕೆ ಮಾಡುವಾಗ,

ಬೆಲೆ ಬಾಳುವ ಎರಡು ಕಂಠೀ ಹಾರ ತೋರಿಸಿ ಹೇಳಿದ. ಮಿತ್ರಾ, ಖಜಾನೆಯಲ್ಲಿ 3 ಹಾರವಿದ್ದವು. ಅಷ್ಟನ್ನೂ ಕದ್ದರೆ ಹಂಚಿಕೆಗೆ ತೊಡಕು ಎಂದು ಒಂದನ್ನು ಅಲ್ಲೇ ಬಿಟ್ಟುಬಂದೆ ಎಂದು ಸತ್ಯ ಹೇಳಿದ. ಹಂಚಿಕೆ ಮಾಡಿ ಹೊರಟು ಹೋದ. ಮಾರುವೇಶದಲ್ಲಿ ಇದ್ದವನು ಆ ದೇಶದ ರಾಜ ! ಬೆಳಗಾದ ಕೂಡಲೇ ಖಜಾನೆ ದರೋಡೆ ಸುದ್ದಿ ಎಲ್ಲೆಡೆ ಹರಡಿತು. ರಾಜಸಭೆಯಲ್ಲಿ ವಿಚಾರಣೆ, ಹಣಕಾಸು, ಖಜಾನೆ ಜವಾಬ್ದಾರಿ ಹೊಂದಿದ್ದ ಮಂತ್ರಿ ಎಲ್ಲವನ್ನೂ ರಾಜನಿಗೆ ವಿವರಿಸಿ ಕಳುವಾದ ವಸ್ತುಗಳ ಪಟ್ಟಿ ನೀಡಿದ. ವಿವಿಧ ಆಭರಣದ ಜತೆಗೆ “ಮೂರು ಕಠೀ ಹಾರ” ಎಂದೂ ಅಲ್ಲಿ ನಮೂದಿಸಿದ್ದ. ಮಂತ್ರಿಯ ಮೋಸ ದಾಟ ರಾಜನಿಗೆ ಅರ್ಥವಾಯಿತು.


ಭಟರನ್ನು ಕರೆಸಿ ಕಳ್ಳನನ್ನು ಪತ್ತೆ ಮಾಡಿ ಬಂಧಿಸಲಾಯಿತು. ಕಳ್ಳ ಒಮ್ಮೆ ಬೆರಗಾದ! ನನ್ನ ಜತೆ ಕಳ್ಳತನಕ್ಕೆ ಸಹಕಾರ ಕೊಟ್ಟವನು ಈತನೇ! ? ಇಂದು ನನ್ನ ಕತೆ ಮುಗಿಯಿತು ಎಂದು ಕೊಂಡ. ತಾನು ಕದ್ದ ವಸ್ತುಗಳನ್ನು ರಾಜನಿಗೆ ಒಪ್ಪಿಸಿದ. ಅರಮನೆಯಲ್ಲೇ ಇದ್ದು ಕಂಠೀಹಾರವೊಂದನ್ನು ಕದ್ದ ಮಂತ್ರಿಯೇ ನಿಜವಾದ ಕಳ್ಳ ಎಂದು ರಾಜ ಘೋಷಣೆ ಮಾಡಿದ. ಹೊರಗಿನ ಕಳ್ಳರಿಗಿಂತ ಒಳಗಿನ ಕಳ್ಳರು ತುಂಬಾ ಅಪಾಯಕಾರಿ ಎಂದು ರಾಜನು ಸಭೆಗೆ ತಿಳಿಸಿದ. ಆತನಿಗೆ 6 ತಿಂಗಳು ಜೈಲು ವಾಸ ಆದೇಶ ನೀಡಿದ. ಕಳ್ಳತನ ಮಾಡುತ್ತಿದ್ದರೂ ಸತ್ಯವನ್ನು ಹೇಳಿದ ಕಳ್ಳನಿಗೆ ಕೋಶಾಧಿಕಾರಿ ಎಂದು ನೇಮಕ ಮಾಡಿದ. ಸತ್ಯವೇ ನಮ್ಮನ್ನು ಸದಾ ಕಾಪಾಡುತ್ತದೆ.

# ಪುಟಾಣಿ ಮಕ್ಕಳಿಗಾಗಿ

ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....



ಬಣ್ಣವನ್ನು ತುಂಬಿರಿ.






1.ಸಂಕ್ರಾಂತಿ


2. ಕನು ಹಬ್ಬ

3. ಆಂಡಾಳ್

ಮೇಲೆ ಹೇಳಿರುವ ಹಬ್ಬ ಹರಿದಿನಗಳಿಗೆ ಸಂಬಂಧಿಸಿದ ಚಿತ್ರದ ಹತ್ತಿರವಿರುವ ರೌಂಡ್‌ನಲ್ಲಿ ಆ ಸಂಖ್ಯೆಯನ್ನು ಹಾಕಿ



ಮಕ್ಕಳೇ, ಈ ಹುಡುಗ ಗಾಳಿ ಪಟವನ್ನು ಬೀಳಿಸಿಕೊಂಡಿದ್ದಾನೆ ಯಾವ ಹಾದಿಯಲ್ಲಿ ಹೋದರೆ ಗಾಳಿಪಟವನ್ನು ತೆಗೆದುಕೊಳ್ಳುತ್ತಾನೆ ಕಂಡು ಹಿಡಿಯಿರಿ ನೋಡೋಣ!




ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಡ ಲೀ ಜು ಡ ರೀ ಈ

ಜು ಬೇ ಮ ಕ ಜೂ ಬೇ

ಉತ್ತರಗಳು:
ಈಜು ಮರೀಬೇಡ, ಜೂಜು ಕಲೀಬೇಡ

# ರಸ ಪ್ರಶ್ನೆಗಳು

01. ಸೂರ್ಯನು ಯಾವ ರಾಶಿಯಿಂದ ಯಾವ ರಾಶಿಗೆ ಪ್ರಯಾಣಿಸುತ್ತಾನೆ? ..................................................

02. ಗೋದಾದೇವಿಯ ಮತ್ತೊಂದು ಹೆಸರೇನು? ..................................................

03.ಶ್ರೀನಿವಾಸನಾಯಕರ ಅಂಕಿತನಾಮ ಯಾವುದು? ..................................................

04.ಅನಸೂಯ ಯಾರ ಪತ್ನಿ? ..................................................

05.ಉಮ್ಮತ್ತೂರಿನ ಮುಖ್ಯ ರಸ್ತೆಯಲ್ಲಿ ಯಾವ ದೇವಾಲಯವಿದೆ?..................................................

06.ವೃದ್ಧ ಕನ್ಯೆಯನ್ನು ಯಾರು ವಿವಾಹ ಮಾಡಿಕೊಂಡರು? ..................................................

07.ಕಶ್ಯಪ ಋಷಿಯ ಪತ್ನಿಯರು ಯಾರು? ..................................................

08.ತಿರುವಿಳಂಕೋಯಿಲ್ ಎಂದು ಯಾವ ಮಂಟಪವನ್ನು ಕರೆಯುತ್ತಾರೆ? ..................................................

09.ಗೋಪಾಲದಾಸರು ಯಾವ ಸಂವತ್ಸರ ದೇಹತ್ಯಾಗ ಮಾಡಿದರು? ..................................................

10.ಆನೆಗಳು ಏನನ್ನು ಕಂಡು ಓಡುತ್ತವೆ?..................................................

11.ಯಾರನ್ನು ರತ್ನ ಖಚಿತ ಆಸನದ ಮೇಲೆ ಕೂರಿಸಿದರು? ..................................................

12.ಮಾಘ ಮಾಸದಲ್ಲಿ ಯಾವುದಕ್ಕೆ ಪ್ರಾಧಾನ್ಯತೆ ಹೆಚ್ಚು ?..................................................

13. ವೈಕುಂಠ ಏಕಾದಶಿಯಂದು ಯಾವ ದ್ವಾರದ ಮೂಲಕ ಭಗವಂತನ ದರ್ಶನ ಮಾಡಬೇಕು? ..................................................

14.ಖಜಾನೆಯಲ್ಲಿ ಎಷ್ಟು ಹಾರಗಳಿದ್ದವು? ..................................................

15.ಸಂಕ್ರಾಂತಿಯ ಮೊದಲನೆ ದಿನ ಆಚರಿಸುವ ಹಬ್ಬ ಯಾವುದು? ..................................................

## ಸೂಚನೆಗಳು

**30 ಕ್ವಿಜ್**

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್


| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ: |

ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ

- ಗೋದಾದೇವಿಯ ಮತ್ತೊಂದು ಹೆಸರೇನು?
- ಗೋದಾದೇವಿಯ ತಂದೆ ಹೆಸರು?
- ಗೋದಾದೇವಿಯು ಯಾರಲ್ಲಿ ಐಕ್ಯರಾದರು?
- ವಿಷ್ಣುಚಿತ್ತರಿಗೆ ಗೋದೆ ಎಲ್ಲಿ ಸಿಕ್ಕಿದಳು?
- ಆಂಡಾಳ್ ಎಷ್ಟು ಪಾಶುರಗಳನ್ನು ರಚಿಸಿದಳು?
- ಯಾರಿಗಾಗಿ ಆಂಡಾಳ್ ಹೂ ಮಾಲೆಗಳನ್ನು ಕಟ್ಟುತ್ತಿದ್ದಳು?
- ಆಂಡಾಳ್‌ಗಾಗಿ ವಿಷ್ಣುಚಿತ್ತರ ಕನಸ್ಸಿನಲ್ಲಿ ಯಾರು ಬಂದರು?
- ಗೋದಾದೇವಿಯ ಕೈಯಲ್ಲಿ ಯಾವ ಪಕ್ಷಿ ಇರುತ್ತದೆ?

1) ಆಂಡಾಳ್ 2) ವಿಷ್ಣುಚಿತ್ತರು 3) ಶ್ರೀರಂಗನಾಥನಲ್ಲಿ 4) ತುಳಸಿವನದಲ್ಲಿ 5) 30 ಪಾಶುರಗಳು 6) ಶ್ರೀ ಕೃಷ್ಣ
7) ಶ್ರೀ ರಂಗನಾಥನು 8) ಗಿಣಿ

ಮಕ್ಕಳೇ ಈ ಪಕ್ಕದ ಚಿತ್ರದಲ್ಲಿರುವ ಬೀಗದ ಕೈಯಲ್ಲಿರುವ ಅಂಕೆಗಳನ್ನು ಗುಣಿಸಿದರೆ ಹಾಗೂ ಭಾಗಾಕಾರ ಮಾಡಿದರೆ ಸರಿಯಾದ ಉತ್ತರದೊಂದಿಗೆ ಯಾವ ಬೀಗದ ಕೈ ಯಾವ ಬೀಗಕ್ಕೆ ಸರಿಹೊಂದುತ್ತದೆ ಎಂದು ಕಂಡು ಹಿಡಿಯಿರಿ ಮಕ್ಕಳೇ!




1) ii 2) i 3) v 4) iii 5) iv

## ನೀತಿಯನ್ನು ತಿಳಿಯೋಣ!



ಚಿತ್ರಗಳನ್ನು ಜೋಡಿಸಿ. ಕಥೆಯನ್ನು ಅರ್ಥ ಮಾಡಿಕೊಂಡು ನೀತಿಯನ್ನು ತಿಳಿದುಕೊಳ್ಳಿ.

ಜೀವನದಲ್ಲಿ ಮಾಡಿದ ಒಳ್ಳೆಯ ಕಾರ್ಯಗಳು ಎಂದಿಗೂ ವ್ಯರ್ಥವಾಗುವುದಿಲ್ಲ

ಚಿತ್ರಕಥೆ

# ಸಂಕ್ರಾಂತಿ ಹಬ್ಬದ ಸಡಗರ


ಕಥೆ: ತೆಲುಗು ಮೂಲ : ಕೆ.ವಿ. ಅಪ್ಪಲಾಚಾರ್ಯ
ಅನುವಾದ : ಆರ್.ಕೆ.ವಿ.
ಚಿತ್ರಗಳು : ಕೆ. ವಿ. ಕೋಟಿಲಿಂಗಾಚಾರಿ


ಹಳ್ಳಿಗಳು ಸಡಗರದಿಂದ ತುಂಬಿವೆ, ಮಕ್ಕಳ ತುಂಟಾಟ , ತಾತಾ - ಅಜ್ಜಿಯರೊಂದಿಗೆ ಮೊಮ್ಮಕ್ಕಳ ಸಡಗರ...




ಅಜ್ಜಿ! ಬೆಳಗ್ಗೆ ಮನೆಯ ಮುಂದೆ ಬೆಂಕಿಯನ್ನು ಯಾಕೆ ಹಾಕಿದ್ದೀರಿ?
ಇವರೆಲ್ಲರಿಗೂ ರೈತರು ಖುಷಿಯಿಂದ ಧಾನ್ಯಗಳನ್ನು ಕೊಡುತ್ತಾರೆ.ಹರಿದಾಸರಿಗೆ ಮಾಡುವ ದಾನದಿಂದ ಶ್ರೀ ಹರಿಯು ಸಂತೋಷಿಸುತ್ತಾರೆಂದು ಹಿರಿಯರು ಹೇಳುತ್ತಾರೆ.
ಅದನ್ನು ಭೋಗಿ ಮಂಟಲು ಎನ್ನುತ್ತಾರೆ. ಇದನ್ನು ಸಂಕ್ರಾಂತಿಯ ಮೊದಲನೇ ದಿನವೇ ಹಾಕುತ್ತಾರೆ. ಅಂದು ಎಣ್ಣೆಸ್ನಾನ ಮಾಡಿ ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ಕೆಟ್ಟ ಗುಣಗಳನ್ನು ಸುಟ್ಟು ಹಾಕಬೇಕು ಎಂದು ಅರ್ಥ.
ಸಂಜೆ ಎಲ್ಲಾ ಮಹಿಳೆಯರು ಸೇರಿ ಗೊಬ್ಬಿ ದೇವತೆಯ ಸುತ್ತಾ ಸುತ್ತುತ್ತಾ ನಾಟ್ಯವಾಡುತ್ತಾರೆ.ಮಂಗಳ ಗೌರಿ ದೇವಿಯ ರೂಪವೇ ಗೊಬ್ಬಿ ದೇವತೆ.
ನಂತರ ಮಕ್ಕಳಿಗೆ ಸಂಜೆ ಹಣ್ಣು ಎರೆಯುವುದು ಮಾಡುತ್ತಾರೆ. ಇದರಲ್ಲಿ ನೇರಳೆಹಣ್ಣು, ಬಾರೇಹಣ್ಣು, ಕಬ್ಬು, ಕಡಲೆ, ನಾಣ್ಯಗಳನ್ನು ಸೇರಿಸಿ ಹಾಕಿ ಆಶೀರ್ವದಿಸುತ್ತಾರೆ. ಈ ಆಶೀರ್ವಾದ ಸಾಕ್ಷಾತ್ ಶ್ರೀ ಮಹಾವಿಷ್ಣುವಿನ ಆಶೀರ್ವಾದ ಕಂದ.
ಸಂಕ್ರಾಂತಿಯಂದು ಬ್ರಾಹ್ಮಣರನ್ನು ಕರೆದು ಕುಂಬಳಕಾಯಿಯನ್ನು ದಾನ ನೀಡುತ್ತಾರೆ.
ಈ ದಿನ ಕನು ಹಬ್ಬ ಇಂದು ದನಗಳಿಗೆ ಅಲಂಕರಿಸಿ ಪೂಜಿಸುತ್ತಾರೆ.
ಹೌದಾ! ತುಂಬಾ ಚೆನ್ನಾಗಿ ಇದೆ. ಅಜ್ಜಿ ಈ ಸಂಕ್ರಾಂತಿ ಹಬ್ಬ
ಸರ್ವೇ ಜನಾಃ ಸುಖಿನೋ ಭವಂತು

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)



## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರೆಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ) ☐☐☐☐☐☐

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/- ಆಜೀವಚಂದಾ (12 ವರ್ಷ) ರೂ.2,400/- ಗಳು ಅನ್‌ಲೈನ್‌ಗಾಗಿ (https://ttdevasthanams.ap.gov.in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ.ಅವರ ಹೆಸರಿನಲ್ಲಿ ತೆಗೆಯುಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯುಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳಿಯುಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ ಪ್ರೆಸ್. ಎರಡನೇ ಅಂತಸ್ತು, ಕೆ. ಟಿ.ರೋಡ್ಡು,ತಿರುಪತಿ - 517507.

ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., P.G. Dip.in Ephigraphy, Dip.in Yoga on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.



ತಿರುಮಲೆ ತಿರುಪತಿ ದೇವಸ್ಥಾನದ ಆಡಳಿತ ಭವನದ ಮೈದಾನದಲ್ಲಿ 18-11-2024 ರಂದು ನಡೆದ ಕಾರ್ತೀಕ ದೀಪೋತ್ಸವ ವೈಭವ, ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್ ಐ.ಎ.ಎಸ್., ರವರು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್. ರವರು ಮತ್ತು ಇತರ ಉನ್ನತಾಧಿಕಾರಿಗಳು ಮತ್ತು ಭಕ್ತ ಜನರು ಪಾಲ್ಗೊಂಡರು



03-12-2024 ರಂದು ತಿರುಮಲೆಯಲ್ಲಿ ಸ್ವಾಮಿಯವರ ದರ್ಶನದ ಕ್ಯೂಲೈನ್‌ಗಳನ್ನು ಪರಿಶೀಲಿಸಿ ಭಕ್ತರೊಂದಿಗೆ ಮಾತನಾಡುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಗೌ॥ ಶ್ರೀ.ಬಿ.ಆರ್. ನಾಯುಡು ರವರು ಮತ್ತು ಆಡಳಿತ ಮಂಡಳಿಯ ಸದಸ್ಯರು ಗೌ॥ ಶ್ರೀ ಜಿ. ಭಾನುಪ್ರಕಾಶ್ ರೆಡ್ಡಿಯವರು



ತಿರುಮಲೆಯಲ್ಲಿ ಯಾತ್ರಿಕರ ವಸತಿ ಸಮುದಾಯ - 3 ರಲ್ಲಿ ಕೇಂದ್ರೀಯ ಲಾಕರ್ ಅಲಾಟ್‌ಮೆಂಟ್ ಕೌಂಟರ್ ಅನ್ನು 22-11-2024 ರಂದು ಉದ್ಘಾಟಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್ ಐ.ಎ.ಎಸ್., ರವರು ಮತ್ತು ತಿ.ತಿ.ದೇ., ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿಹೆಚ್. ವೆಂಕಯ್ಯಚೌದರಿ ಐ.ಆರ್.ಎಸ್., ರವರು



29-09-2024 ರಂದು ತಿ.ತಿ.ದೇ, ಆಡಳಿತ ಭವನದಲ್ಲಿ ನಡೆದ ವಿಶ್ವ ಕಿವುಡರ ದಿನ ಮತ್ತು ವಿಶ್ವ ಸಂಕೇತ ಭಾಷಾ ದಿನಾಚರಣೆಯನ್ನು ನಿರ್ವಹಿಸಿತು.



ತಿ.ತಿ.ದೇ, 03-12-2024 ರಂದು 64 ನೇ ಅಂತರಾಷ್ಟ್ರೀಯ ದಿವ್ಯಾಂಗರ ದಿನೋತ್ಸವ ಸಂದರ್ಭವನ್ನು ಏರ್ಪಡಿಸಿತು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಅಧಿಕಾರಿಗಳು ಮತ್ತು ಸಿಬ್ಬಂದಿಯರು ಪಾಲ್ಗೊಂಡರು.

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-12-2024 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2024-2026
"Licenced toPost Without Prepayment No. PMGK/RNP/WPP-04(6)/ 2024-2026"
Posting on 5th of Every Month.



ಕನಕ ವೃಷ್ಟಿಯ ಕರೆಯುತ ಬಾರೆ ಮನಕಾಮನೆಯ ಸಿದ್ಧಿಯ ತೋರೆ।
ದಿನಕರ ಕೋಟಿ ತೇಜದಿ ಹೊಳೆಯುವ ಜನಕರಾಯನ ಕುಮಾರಿ ಬೇಗ॥